# ಯುಗರಶ್ಮಿ

★ ಬರ್ಟ್ರೆಂಡ್ ರಸ್ಸೆಲ್ ಮತ್ತು ದೇವದರ್ಶನ
★ ಹಿಂದುಗಳೂ ಪ್ರಾಣಿಹಿಂಸೆಯೂ
★ ಇಸ್ಲಾಂ ಮತ್ತು ವಿಜ್ಞಾನ
★ ಇಸ್ಲಾಮೀ ಕುಟುಂಬ ಜೀವನ
★ ಧ್ರುವಪ್ರದೇಶದಲ್ಲಿ ವ್ರತಾನುಷ್ಠಾನ
★ ಯೇಸುಕ್ರಿಸ್ತರು ಮತ್ತು ರೋಗಶಾಂತಿ
★ ಯೇಸುಕ್ರಿಸ್ತರು ದೇವರೇ?
★ 'ಸನ್ಮಾರ್ಗ' ಮತ್ತು ಯೇಸುಕ್ರಿಸ್ತರ ಪುನರಾಗಮನ

ತ್ರೈಮಾಸಿಕ

ಜುಲಾಯಿ 1987

ಬೆಲೆ: ರೂ. 1-00

ನೀನು ಜಾಣ್ಮೆಯಿಂದಲೂ ಉತ್ತಮ ಉಪದೇಶಗಳ ಮೂಲಕ ವಾಗಿಯೂ ಅಲ್ಲಾಹನ ಮಾರ್ಗದ ಕಡೆಗೆ ಆಹ್ವಾನಿಸು ಮತ್ತು ಅವರೊಡನೆ ಉತ್ತಮವಾದ ರೀತಿಯಲ್ಲಿ ವಾದ ವಿವಾದ ನಡೆಸು. ಖಂಡಿತವಾಗಿಯೂ ನಿನ್ನ ಸೃಷ್ಟಿಕರ್ತನು, ತನ್ನ ಮಾರ್ಗದಿಂದ ಯಾರು ದಾರಿತಪ್ಪಿರುವನೋ ಅವನ ಬಗ್ಗೆ ಎಲ್ಲರಿಗಿಂತ ಹೆಚ್ಚಾಗಿ ತಿಳಿದಿರುವನು; ಮತ್ತು ಮಾರ್ಗದರ್ಶನ ಪಡೆದ ವರ ಬಗ್ಗೆಯೂ ಎಲ್ಲರಿಗಿಂತ ಹೆಚ್ಚಾಗಿ ತಿಳಿದಿರುವನು.

—ಪವಿತ್ರ ಖುರ್‌ಆನ್ (16:126)

# ಯುಗರಶ್ಮಿ ತ್ರೈಮಾಸಿಕ

10–23–1008 ಅನ್ಸಾರಿ ರೋಡ್, ಬಂದರ್, ಮಂಗಳೂರು–575 001

ಬಿಡಿಪ್ರತಿ: ರೂ. 1–00

ವಾರ್ಷಿಕ ಚಂದಾ : ರೂ. 4–00
ಅಂಚೆ ಮೂಲಕ : ರೂ. 6–00

**ವಿಷಯ ಸೂಚಿಕೆ:** ಪುಟ


- ★ ಕ್ರೈಸ್ತ ಬಾಂಧವರೊಡನೆ ... 1
- ★ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
- ★ ಬರ್ಟ್ರೆಂಡ್ ರಸ್ಸೆಲ್ ಮತ್ತು ದೇವದರ್ಶನ ... 3
- ★ ಹಿಂದೂಗಳೂ ಪ್ರಾಣಿಹಿಂಸೆಯೂ ... 11
- ★ ಇಸ್ಲಾಮಿನಲ್ಲಿ ವಿಜ್ಞಾನಕ್ಕೆ ಅವನತಿ ಹೇಗಾಯಿತು ? ... 14
- ★ ಇಸ್ಲಾಮೀ ಕುಟುಂಬ ಜೀವನ ... 18
- ★ ಧ್ರುವಪ್ರದೇಶದಲ್ಲಿ ವ್ರತಾನುಷ್ಠಾನ ... 25
- ★ ಯೇಸುಕ್ರಿಸ್ತರು ಮತ್ತು ರೋಗಶಾಂತಿ ... 29
- ★ ಯೇಸುಕ್ರಿಸ್ತರು ದೇವರೇ ? ... 32
- ★ ಅಹ್ಮದಿಯಾ ವಾರ್ತೆಗಳು ... 35



## Statement about Ownership and other particulars about the Newspaper YUGARASHMI Quarterly

**[FORM IV See Rule 8]**

| | | |
|---|---|---|
| 1 | Place of publication | Mangalore |
| 2 | Period of its publication | Quarterly |
| 3 | Printer's name | Muhammed Yusuf |
| | Whether citizen of India? | Yes |
| | Address | Jubilee Printing Press<br>10-23-1008/1 Ansari Road, Bunder,<br>Mangalore-575 001 |
| 4 | Publisher's name | Muhammad Yusuf |
| | Whether citizen of India? | Yes |
| | Address | 10-23-1008/1 Ansari Road, Bunder,<br>Mangalore-575 001 |
| 5 | Editor's name | Muhammad Yusuf |
| | Whether citizen of India? | Yes |
| | Address | 10-23-1008, Ansari Road, Bunder,<br>Mangalore-575 001 |
| 6 | Name and addresses of individuals who own the newspaper and partners or shareholders holding more than one percent of the capital | Jamath Ahmadiyya,<br>10-23-1008/1 Ansari Road, Bunder,<br>Mangalore-575 001. |

I, Muhammad Yusuf hereby declare that the particulars given above are true to the best of my knowledge and belief.

Date: 1–3–1987

Sd/- **Muhammad Yusuf**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಸಂಪುಟ: 12 | ಮಾರ್ಚ್ – ಜುಲಾಯಿ 1987 / ಅಮಾನ್ – ವಫಾ 1366 | ಸಂಚಿಕೆ: 3–4

## ಕ್ರೈಸ್ತ ಬಾಂಧವರೊಡನೆ

"ಯೇಸು ಶಿಲುಬೆಯ ಮೇಲೆ ಮಡಿದರೆಂದು ಹೇಳುತ್ತಾ ನಿರಪರಾಧಿಯಾದ ಅವರನ್ನು ಶಾಪಗ್ರಸ್ತನೆಂದು ನೀವು ಉದ್ಘೋಷಿಸುತ್ತೀರಿ. ನಿಮಗೋಸ್ಕರ ಅಸಹನೀಯವಾದ ನೋವನ್ನು ಸಹಿಸಿದ ಅವರನ್ನು ನೀವು ಧಿಕ್ಕಾರಕ್ಕೆ ಪಾತ್ರರನ್ನಾಗಿ ಮಾಡುತ್ತೀರಿ. ಏಕೆಂದರೆ ಶಿಲುಬೆಯ ಮೇಲೆ ಮಡಿಯುವವನು ಕಪಟ ಪ್ರವಾದಿಯೆಂದೂ ಶಪಿಸಲ್ಪಟ್ಟವನೆಂದೂ ಬರೆಯಲ್ಪಟ್ಟಿದೆ. ನಿಮ್ಮ ಮಾತುಗಳಿಂದ ನೀವೇ ಅವರ ಕಪಟತೆಯನ್ನು ಸಮ್ಮತಿಸಿ ಇತರರು ಅವರನ್ನು ಅಪಹಾಸ್ಯ ಮಾಡಲು ಎಡೆಮಾಡಿ ಕೊಡುತ್ತೀರಿ. ಶಾಪ ಎಂಬುದರ ಅರ್ಥ ದೇವರಿಂದ ದೂರವಾಗುವುದು ಎಂದಾಗಿದೆ. ಮತ್ತೆ ಯೇಸು ದೇವರ ಪ್ರೀತಿಗೆ ಪಾತ್ರರೆಂದು ನೀವು ಹೇಗೆ ಹೇಳುತ್ತೀರಿ?

ದುಷ್ಟರು ಮಾತ್ರ ದೇವರಿಂದ ವಿಮುಖರಾಗುತ್ತಾರೆ; ದ್ರೋಹಿಗಳು ಮಾತ್ರ ಅವನನ್ನು ದ್ವೇಷಿಸುತ್ತಾರೆ. ಮತ್ತೆ, ದೇವರ ಪ್ರೀತಿಗರ್ಹರಾಗಿದ್ದ ಯೇಸು ಶಪಿಸಲ್ಪಟ್ಟವರೆಂದು ನೀವು ಕೊಂಡಾಡುವುದು ಯಾಕೆ?"

—ಹಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಅಲ್ಲಾಹನೊಡನೆ ನಿಮಗಿರುವ ಕರ್ತವ್ಯಗಳ ಕುರಿತು ಜ್ಞಾಪಕವಿಡಿರಿ; ಬಂಧುತ್ವವನ್ನು ಬಲಪಡಿಸಿರಿ.

2. ತನ್ನ ಜೀವನೋಪಾದಿಗಳು ವರ್ಧಿಸಲಿಕ್ಕೂ ಆಯುಷ್ಯ ದೀರ್ಘವಾಗಲಿಕ್ಕೂ ಬಯಸುವವನು ತನ್ನ ಸಂಬಂಧಿಕರೊಡನಿರುವ ಬಾಂಧವ್ಯವನ್ನು ಶಕ್ತಿಪಡಿಸಲಿ.

3. ಬಾಂಧವ್ಯವನ್ನು ಬಲಪಡಿಸಿರಿ, ಒಂದು ಸಲಾಂ ಮಾತ್ರದಿಂದಾದರೂ ಸರಿ.

4. ದಯೆಯಿಂದ ಕೂಡಿದ ವರ್ತನೆಯನ್ನು ತೋರಿಸುವುದರಿಂದ ಮಾತ್ರ ಓರ್ವನು ಸಂಬಂಧಿಕರ ಕುರಿತು ಕಾಳಜಿಯಿರುವವನೆಂದಾಗುವುದಿಲ್ಲ. ಸಂಬಂಧ ಮುರಿಯುವಾಗ ಆತನು ಅದನ್ನು ಜೋಡಿಸಲು ಶ್ರಮಿಸಬೇಕು.

5. ನಿಮ್ಮ ಸಂಬಂಧವನ್ನು ಮುರಿದವನೊಡನೆ ರಾಜಿ ಮಾಡಲು ಪ್ರಯತ್ನಿಸಿರಿ. ನಿಮಗೆ ದೋಷವನ್ನುಂಟು ಮಾಡುವವನೊಡನೆ ಔದಾರ್ಯದಿಂದ ವರ್ತಿಸಿರಿ. ನಿಮಗೆ ವಿರುದ್ಧವಾಗಿ ಬಂದರೂ ಸತ್ಯವನ್ನೇ ನುಡಿಯಿರಿ.

6. ಬಡವರಿಗೆ ನೀಡುವ ದಾನ ಒಂದು ದಾನ ಮಾತ್ರ. ತನ್ನ ಸಂಬಂಧಿಕರಿಗೆ ನೀಡುವ ದಾನಕ್ಕೆ ಎರಡು ಗುಣಗಳಿವೆ – ಅದೊಂದು ದಾನವೂ ಉತ್ತಮ ಬಂಧುತ್ವವೂ.

7. ಒಂದು ಕುಟುಂಬದ ಸದಸ್ಯರಲ್ಲಿ ಅಲ್ಲಾಹನು ಒಳಿತನ್ನು ಬಯಸುವುದಾದರೆ, ಅವನು ಅವರಿಗೆ ಧರ್ಮ ಪ್ರಜ್ಞೆಯನ್ನು ನೀಡುವನು. ಕಿರಿಯರು ಹಿರಿಯರನ್ನು ಗೌರವಿಸುವರು. ಪರಸ್ಪರವುಳ್ಳ ವ್ಯವಹಾರದಲ್ಲಿ ಅವನು ಅವರೊಳಗೆ ಕರುಣೆಯನ್ನೂ ಪ್ರೀತಿಯನ್ನೂ ಹುಟ್ಟಿಸಿ ಮಿತವ್ಯಯಿಗಳನ್ನಾಗಿ ಮಾಡುವನು. ತಮ್ಮ ಕುಂದು ಕೊರತೆಗಳನ್ನು ನಿವಾರಿಸಲು ಅವರಿಗೆ ಅರಿವನ್ನು ನೀಡುವನು.

(ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಬರೆದ **Wisdom of the Holy Prophet** ನಿಂದ ಉದ್ಧೃತ)


## AHMADIYYA URDU LITERATURE

1. Ahmadiyyath Ka Paigham
2. Aqaide Ahmadiyyath
3. Zuhoore Imam Mahdi
4. Nuzoolul Masih
5. Kya Hazrath Masih Nasree Zinda Hein?
6. Masih Hindustan Mein
7. Hazrath Masih Mashriq Mein
8. Sadaqathe Hazrath Masih Mauwood
9. Khatme Nubuwwath Ki Haqeeqath
10. Khathamunnabiyyeen Aur Buzurgane Ummath

*—: WILL BE SENT FREE :—*

Apply with 30 paise stamp for each book to :

**The Book Secretary,**

**Ahmadiyya Muslim Mission**

10-23-1008 Ansari Road, Bunder, Mangalore-575001

# ಬರ್ಟ್ರೆಂಡ್ ರಸ್ಸೆಲ್ ಮತ್ತು ದೇವದರ್ಶನ *

★ ಮುಹಮ್ಮದ್ ಅಸ್ಲಂ ಎಂ. ಎ.
ಪ್ರಿನ್ಸಿಪಾಲ್. ತಅ್‌ಲೀಮುಲ್ ಇಸ್ಲಾಂ ಕಾಲೇಜ್, ರಬ್ವಾ.

ದೇವರ ಅಸ್ತಿತ್ವವನ್ನು ಸಾಬೀತು ಪಡಿಸಲು ಅತ್ಯಂತ ಪ್ರಬಲವಾದ ಸಾಕ್ಷ್ಯವು ದೇವದರ್ಶನ ಅಥವಾ ದೇವ ಸಾಕ್ಷಾತ್ಕಾರವಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಲೋಕದಲ್ಲಿ ಎಲ್ಲಾ ಕಾಲಗಳಲ್ಲೂ ಸತ್ಯಸಂಧರೂ ಜ್ಞಾನಿಗಳೂ ಆದ ಮಹಾತ್ಮರುಗಳು ಎಂದರೆ ಲೋಕಕ್ಕೆ ಜ್ಞಾನವಿಷಯದಲ್ಲೂ ಆಡಳಿತ ಕಾರ್ಯದಲ್ಲೂ ನಾಗರಿಕತೆಯಲ್ಲೂ ಸದಾಚಾರದಲ್ಲೂ ಗುರುಗಳಾದ ಮಹಾತ್ಮರುಗಳು ತಮಗೆ ದೇವರ ಸಾಕ್ಷಾತ್ಕಾರ ಸಿದ್ಧಿಸಿದುದಾಗಿಯೂ ಅವನ ವಚನಗಳು ಲಭಿಸಿದುದಾಗಿಯೂ ಅವು ತಮಗೆ ಅನುಭವವಾದುದಾಗಿಯೂ ಸಾಕ್ಷ್ಯ ವಹಿಸಿರುವುದು ದೇವರ ಅಸ್ತಿತ್ವಕ್ಕೆ ಅತಿ ಪ್ರಧಾನವಾದೊಂದು ಪುರಾವೆಯಾಗಿದೆ. ದೈವವಿಶ್ವಾಸವು ವಿಚಾರ ವಿರುದ್ಧವೆಂದು ಹೇಳುವುದು ಸರಿಯಲ್ಲವೆಂದಷ್ಟೇ ಅಲ್ಲ, ಅದು ವಿಚಾರವಂತ ಮನುಷ್ಯನಿಗೆ ಅನಿವಾರ್ಯವಾದುದು ಕೂಡ ಆಗಿದೆಯೆಂದು ಮಹಾತ್ಮರುಗಳ ಒಮ್ಮತಾಭಿಪ್ರಾಯದ ಅನುಭವ ಸಾಕ್ಷ್ಯ ಮನಗಾಣಿಸಿಕೊಡುತ್ತದೆ. ಈ ಸಾಕ್ಷ್ಯಕ್ಕೆ ಸಂಬಂಧಿಸಿ ಸಾಮಾನ್ಯವಾಗಿ ಎತ್ತಲ್ಪಡುವ ಪ್ರಧಾನ ಆಕ್ಷೇಪಣೆಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಲು ನಾನು ಉದ್ದೇಶಿಸುತ್ತೇನೆ.

ಇಂಗ್ಲೆಂಡಿನ ವಿಶ್ರುತ ತತ್ವಜ್ಞಾನಿ ಮಿಸ್ಟರ್ ಬರ್ಟ್ರೆಂಡ್ ರಸ್ಸೆಲ್ ಅವರ "ಧರ್ಮ ಮತ್ತು ವಿಜ್ಞಾನ" ಎಂಬ ಪುಸ್ತಕ ಇತ್ತೀಚೆಗೆ ಪ್ರಕಟವಾಗಿದೆ. ಅದರ ಒಂದು ಅಧ್ಯಾಯ ದೇವದರ್ಶನ ಎಂಬ ವಿಷಯವನ್ನು ಪ್ರತಿಪಾದಿಸುತ್ತದೆ. ಅದರಲ್ಲಿ ಅವರು ದೇವಸಾಕ್ಷಾತ್ಕಾರದ ಕುರಿತು ಹಲವು ಆಕ್ಷೇಪಣೆಗಳನ್ನು ಮಾಡಿದ್ದಾರೆ. ಈ ಆಕ್ಷೇಪಣೆಗಳೇ ಸಾಮಾನ್ಯವಾಗಿ ವಿದ್ಯಾಭ್ಯಾಸ ಪಡೆದವರಿಂದ ನಮಗೆ ಕೇಳಿಸುತ್ತವೆ. ವಿಜ್ಞಾನಲೋಕದಲ್ಲಿ ಕೀರ್ತಿಗಳಿಸಿದ ಮಿ। ರಸ್ಸೆಲ್ ನಿರೀಶ್ವರವಾದದ ಸಬಲವಾದ ಒಬ್ಬ ಪ್ರತಿನಿಧಿಯಾಗಿ ಗಣಿಸಲ್ಪಡುತ್ತಾರೆ. ಅವರು ಪ್ರಕೃತಿಶಾಸ್ತ್ರ, ತತ್ವಜ್ಞಾನ, ಗಣಿತಶಾಸ್ತ್ರ ಮೊದಲಾದುವುಗಳಲ್ಲಿ ನೈಪುಣ್ಯವನ್ನು ಸಂಪಾದಿಸಿದ ವ್ಯಕ್ತಿಯಾಗಿದ್ದಾರೆ. ಅವರ ಕೃತಿಗಳಿಗೆ ಪಾಶ್ಚಾತ್ಯ ಲೋಕದಲ್ಲಿ ಮಾತ್ರವಲ್ಲ ಪೌರ್ವಾತ್ಯ ದೇಶಗಳ ವಿಶ್ವವಿದ್ಯಾಲಯಗಳ ಮಧ್ಯದಲ್ಲಿ ಧಾರಾಳ ಪ್ರಚಾರ ದೊರೆತಿದೆ. ಹಲವು ವರ್ಷಗಳ ಮುಂಚೆ ಧಾರ್ಮಿಕವಾಗಿ ಭಾರತೀಯರ ಮನಃಸ್ಥಿತಿ ಹೇಗಿರುವುದೆಂದು ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಯುರೋಪಿನ ಕ್ರೈಸ್ತಮಿಶನ್ ವತಿಯಿಂದ ಒಂದು ನಿಯೋಗವನ್ನು ನಿಯೋಜಿಸಲಾಗಿತ್ತು. ಅವರು ಭಾರತಕ್ಕೆ ಬಂದು ಪರಿಶೀಲನೆ ಮಾಡಿ ಒಪ್ಪಿಸಿದ ವರದಿಯಲ್ಲಿ ಇಲ್ಲಿ ನಿರೀಶ್ವರವಾದ ಪ್ರಚಾರಗೊಳ್ಳುತ್ತಿದೆಂದು ಪ್ರಸ್ತಾಪಿಸಿ, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮಿ। ರಸ್ಸೆಲ್‌ರವರ ಕೃತಿಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡುತ್ತಿರುವುದನ್ನು ಅದಕ್ಕೆ ದೃಷ್ಟಾಂತವಾಗಿ ತೋರಿಸಿದ್ದಾರೆ.

ಮಿ। ರಸ್ಸೆಲ್ ತನ್ನ ಆಕ್ಷೇಪಣೆಗಳಿಗೆ ಗುರಿಪಡಿಸಿರುವ ಈ ದೇವದರ್ಶನಕ್ಕೆ 'ಮಿಸ್ಟಿಸಿಸ್‌ಂ' (ರಹಸ್ಯಾರ್ಥವಾದ) ಎಂದು ಹೆಸರಿಸಿದ್ದಾರೆ. ಅವರು ದೇವದರ್ಶನ ಎಂಬುದಕ್ಕೆ ರಹಸ್ಯಾರ್ಥ ವಾದಿಗಳಿಗುಂಟಾಗುವ ದರ್ಶನ ಎಂದು ಅರ್ಥೈಸಿಕೊಂಡಿದ್ದಾರೆ. ಇವರು ಕ್ರೈಸ್ತನೋ ಮುಸ್ಲಿಮನೋ ಹಿಂದುವೋ ಯಾರಾದರೂ ಸರಿ, ಇವರಿಗುಂಟಾಗುವ ದರ್ಶನವನ್ನು ಮಿ। ರಸ್ಸೆಲ್ ದೇವದರ್ಶನವೆಂದು ತಿಳಿದುಕೊಂಡು ತನ್ನ ಆಕ್ಷೇಪ ನಿರೂಪಣೆಗಳಿಗೆ ಈಡು ಮಾಡಿದ್ದಾರೆ. ಕಾರಣ, ಯುರೋಪಿನ ದೈವವಿಶ್ವಾಸಿಗಳು ಸಹ ದೈವಸಾಕ್ಷಾತ್ಕಾರ ಎಂಬುದರಿಂದ

* ಇದು ಕರಾಚಿ ಯುನಿವರ್ಸಿಟಿಯ ಸೈಕೋಲಜಿ ವಿಭಾಗದ ಮುಖ್ಯಸ್ಥರೂ ಆ ಬಳಿಕ ರಬ್ವಾದ ತಅ್‌ಲೀಮುಲ್ ಇಸ್ಲಾಂ ಕಾಲೇಜಿನ ಪ್ರಿನ್ಸಿಪಾಲರೂ ಆಗಿದ್ದ ಮುಹಮ್ಮದ್ ಅಸ್ಲಂ ಅವರು 1935ರಲ್ಲಿ ಅಹ್ಮದಿಯೂ ಸಮ್ಮೇಳನದಲ್ಲಿ ಮಾಡಿದ ಒಂದು ಭಾಷಣದ ಸಂಗ್ರಹವಾಗಿದೆ.

ವಿವಕ್ಷಿಸುವುದು ಇಂತಹ ದರ್ಶನವನ್ನೇ ಆಗಿದೆ. ಆದರೆ ರಹಸ್ಯಾರ್ಥವಾದಿಗಳಿಗೆ ಉಂಟಾಗುವ ದರ್ಶನ ದೇವರ ಅಸ್ತಿತ್ವಕ್ಕೆ ಒಂದು ಪ್ರಮಾಣವಾಗಿ ಬೇರೆಯವರೊಡನೆ ಎತ್ತಿ ಹೇಳಲು ಪರ್ಯಾಪ್ತವಾದುದಲ್ಲ. ಅದೊಂದು ಉಪಸಾಕ್ಷ್ಯ ಮಾತ್ರವೇ ಆಗಿರುತ್ತದೆ. ಒಂದು ಆಧಾರವೆಂದು ಲೋಕಕ್ಕೆ ಎತ್ತಿತೋರಿಸಿಕೊಡಲು ನಮಗೆ ಸಾಧ್ಯವಾಗುವ ದರ್ಶನ ದೈವ ನಿಯುಕ್ತರಿಗೂ ಪ್ರವಾದಿಗಳಿಗೂ ಉಂಟಾಗುವಂತಹದ್ದು ಮಾತ್ರವಾಗಿದೆ. ಉದಾಹರಣೆಗೆ, ಮುಹಮ್ಮದ್ ಪೈಗಂಬರ್ (ಸ) ಅವರಿಗೆ ಉಂಟಾದುದು ಮತ್ತು ಆ ದಿವ್ಯಾತ್ಮರ ಪ್ರತಿಪುರುಷನಾಗಿ ಈ ಕಾಲದಲ್ಲಿ ದೇವ ನಿಯೋಜಿತರಾದ ಹಝ್ರತ್ ಅಹ್ಮದ್ (ಅ)ಅವರಿಗುಂಟಾದ ದರ್ಶನಗಳೇ ಆಗಿವೆ. ಆದ್ದರಿಂದ, ಮಿ। ರಸ್ಸೆಲ್ ಅವರ ಆಕ್ಷೇಪಣೆಗಳೊಂದು ಸಹ ನಾವು ಆಧಾರವಾಗಿ ತೋರಿಸುವ ದರ್ಶನಕ್ಕೆ ಸಂಬಂಧಿಸಿದುದಲ್ಲ. ಹಲವು ವರ್ಷಗಳಿಂದ ದೇವರ ಅಸ್ತಿತ್ವವನ್ನು ಸಾಬೀತು ಪಡಿಸಲು ಪಾದ್ರಿಗಳು ಆಧಾರವಾಗಿ ತೋರಿಸುತ್ತಿರುವ ದರ್ಶನ ಮಾತ್ರವೇ ಅವರ ಆಕ್ಷೇಪಣೆಗಳಿಗೆ ಗುರಿಯಾಗುತ್ತದೆ. ಆದರೂ ಆ ಆಕ್ಷೇಪಣೆಗಳಿಗೆ ಸಹ ಇಲ್ಲಿ ಉತ್ತರ ಹೇಳಬಹುದು.

ಎಷ್ಟೋ ವರ್ಷಗಳಿಂದ ಪಾದ್ರಿಗಳು ದೇವರ ಅಸ್ತಿತ್ವವನ್ನು ಸಾಬೀತುಪಡಿಸಲು ದಿವ್ಯಾನುಭೂತಿಯನ್ನು ಒಂದು ಸಾಕ್ಷ್ಯವಾಗಿ ತೋರಿಸುತ್ತಿರುವುದು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರ ತತ್ವವಾದದ ಪ್ರಾಬಲ್ಯವನ್ನೂ ಅವರ ಆತ್ಮಸ್ವಾಧೀನತೆಯನ್ನೂ ರುಜುಪಡಿಸುತ್ತದೆ. ಹೇಗೆಂದರೆ, ಆಧ್ಯಾತ್ಮಿಕ ಅಂಧಕಾರ ವ್ಯಾಪಿಸಿದ ಈ ಕಾಲದಲ್ಲಿ ಆ ಮಹಾಪುರುಷರು ತನಗುಂಟಾದ ದಿವ್ಯ ದರ್ಶನವನ್ನು ಅನ್ಯರಿಗೆ ಕುರುಹಾಗಿ ಎತ್ತಿತೋರಿಸಿದರು. ಅವರ ವಾದಕ್ಕೆ ಮುಂಚೆ ದೈವಾಸ್ತಿತ್ವವನ್ನು ಸಾಬೀತುಪಡಿಸಲು ತೋರಿಸಲ್ಪಡುತ್ತಿದ್ದುದು ವಿಚಾರಯುತ ವಾದಗಳೂ ನ್ಯಾಯಗಳೂ ಮಾತ್ರ ಆಗಿದ್ದುವು. ಆದರೆ, ಇಂತಹ ನ್ಯಾಯಗಳಿಂದ ದೃಢಜ್ಞಾನ ಸಿದ್ಧಿಸಲಾರದೆಂದೂ ಅದಕ್ಕೆ ದೇವದರ್ಶನ ಎಂದರೆ, ದೈವವಚನ ಲಭಿಸಿ ಅದು ಸ್ವಂತ ಜೀವಿತದಲ್ಲಿ ಅಥವಾ ತನ್ನ ಕಾಲದಲ್ಲಿ ಅನ್ಯರಲ್ಲಿ ಅನುಭವಪಡಲೇಬೇಕೆಂದೂ ಆ ಮಹಾತ್ಮರು ಪ್ರಬೋಧಿಸಿದರು. ಈ ದಿವ್ಯಾನುಭೂತಿ ದೈವಾಸ್ತಿತ್ವವನ್ನು ಸಾಬೀತುಪಡಿಸಲು ಉತ್ತಮವಾದೊಂದು ಸಾಕ್ಷ್ಯವೆಂದು ಕಂಡು ಪಾದ್ರಿಗಳು ನಿರೀಶ್ವರವಾದಿಗಳಿಗೆದುರಾಗಿ ಇದನ್ನು ಒಂದು ಪುರಾವೆಯಾಗಿ ತೋರಿಸಲು ತೊಡಗಿದರು. ಆದರೆ ಇದು ತಮಗೆ ಅನುಭವಗೋಚರವಲ್ಲದುದರಿಂದ ಇದನ್ನು ಒಂದು ಪುರಾವೆಯಾಗಿ ತೋರಿಸುವುದರಲ್ಲಿ ಅವರಿಗೆ ಹಲವು ತರದ ಪ್ರಮಾದಗಳು ಉಂಟಾಗಿವೆ. ಆ ಕಾರಣದಿಂದ, ಈ ಸಾಕ್ಷ್ಯದ ಕುರಿತು ವಿಜ್ಞಾನಿಗಳು ಹಲವು ಆಕ್ಷೇಪಣೆಗಳನ್ನು ಮಾಡಲು ಎಡೆಯಾಯಿತು. ಅವರ ಎದುರುವಾದಗಳು ಸುಮಾರಾಗಿ ನಮ್ಮ ವಾದಗಳಿಗೆ ಬಾಧಕವಾಗಬಹುದಾದ್ದರಿಂದಲೂ ಪಾದ್ರಿಗಳು ತೋರಿಸಿದ ಪುರಾವೆಗಳಲ್ಲಿ ಅಡಕವಾದ ನ್ಯೂನತೆಗಳನ್ನು ನಿವಾರಿಸಬೇಕಾದುದರಿಂದಲೂ ಅವುಗಳಿಗೆ ಸಮಾಧಾನ ಹೇಳಲೇಬೇಕಾಗಿದೆ.

ಈ ಸಾಕ್ಷ್ಯಕ್ಕೆ ವಿರುದ್ಧವಾಗಿ ಮಿ। ರಸ್ಸೆಲ್ ಪ್ರಥಮವಾಗಿ ಹೇಳುವುದೇನೆಂದರೆ, ದಿವ್ಯಾನುಭೂತಿ ಉಂಟಾದವರು ದೇವರನ್ನು ನಂಬಬಹುದಾದರೂ ಅದು ಉಂಟಾಗದವರು ಹಾಗೆ ಒಬ್ಬನನ್ನು ಏಕೆ ನಂಬಬೇಕು. ಈ ಆಕ್ಷೇಪಣೆಗೆ ಸಾಮಾನ್ಯವಾಗಿ ಹೇಳುವ ಉತ್ತರವು, ದೂರದರ್ಶಕ, ಭೂತಗನ್ನಡಿ ಮೊದಲಾದ ಸಾಮಾಗ್ರಿಗಳ ಮೂಲಕ ಪ್ರಕೃತಿ ಶಾಸ್ತ್ರಜ್ಞರೂ ಜೀವತತ್ವ ಶಾಸ್ತ್ರಜ್ಞರೂ ದರ್ಶಿಸುವ ಸಂಗತಿಗಳನ್ನು ಇತರರು ಸಹ ನಂಬುತ್ತಾರಲ್ಲವೇ ಎಂದಾಗಿದೆ. ಇದಕ್ಕೆ ಎದುರು ಕಡೆಯಿಂದ ಹೇಳಲಾಗುವ ಪ್ರತಿವಾದ ಹೀಗಿದೆ: ಧರ್ಮಾನುಯಾಯಿಗಳು ಹೇಳುವ ದಿವ್ಯ ದರ್ಶನ ಮತ್ತು ವೈಜ್ಞಾನಿಕ ಉಪಕರಣಗಳ ಮುಖಾಂತರದ ವಸ್ತುದರ್ಶನಕ್ಕೆ ತಮ್ಮಲ್ಲಿ ತುಂಬಾ ಅಂತರವಿದೆ. ಎಂದರೆ, ದೈವದರ್ಶನವಾದವು ಮೂರು ಸಂಗತಿಗಳಿಂದಾಗಿ ಅಪೂರ್ಣವಾದುದೆಂದು ತಿಳಿದು ಬರುತ್ತದೆ. ಒಂದನೆಯದಾಗಿ, ಈ ದಿವ್ಯದರ್ಶನ ಉಂಟಾಗುವುದು ಹೇಗೆಂದೂ ಯಾವ ಮಾರ್ಗದ ಮೂಲಕವೆಂದೂ ಸ್ಪಷ್ಟಪಡಿಸದೆ ರಹಸ್ಯವಾಗಿಡುತ್ತಾರೆ. ಎರಡನೆಯದಾಗಿ, ದೂರದರ್ಶಕ ಮತ್ತು ಭೂತಗನ್ನಡಿ ಮುಖಾಂತರ ವಿಜ್ಞಾನಿಗಳು ಕಂಡುಹಿಡಿಯುವ ಸಿದ್ಧಾಂತಗಳನ್ನು ಬೇರೆ ಯವರಿಗೆ ಪರಿಶೋಧಿಸಲು ಸಾಧ್ಯವಿದೆ ಹಾಗೂ ಆ ಬಗೆಯ ಉಪಕರಣಗಳ ಮೂಲಕ ದೂರವಿರುವುದು ಸಮೀಪವಾಗಿಯೂ ಸಣ್ಣದು ದೊಡ್ಡದಾಗಿಯೂ ಕಾಣ

ಲ್ಪಡುವುದರಿಂದ ವಿಜ್ಞಾನಿಗಳ ವಾದವನ್ನು ಮನಗಾಣ ಬಹುದಾಗಿದೆ; ಆದರೆ ದಿವ್ಯದರ್ಶನ ವಾದವನ್ನು ಅನ್ಯರಿಗೆ ಪರಿಶೋಧಿಸಿ ನೋಡಲಿಕ್ಕೆ ಸಾಧ್ಯವಿಲ್ಲ. ಮೂರನೆಯದಾಗಿ, ಮನುಷ್ಯನ ಇತರ ಅನುಭವಗಳ ಮೂಲಕ ವಿಜ್ಞಾನಿಗಳ ತತ್ವದರ್ಶನ ಸಾಕ್ಷೀಕರಿಸಲ್ಪಡುವಂತೆ ದಿವ್ಯದರ್ಶನ ವಾದ ಸಾಕ್ಷೀಕರಿಸಲ್ಪಡುವುದಿಲ್ಲ.

ಆದರೆ, ದೈವದರ್ಶನ ಅಥವಾ ದಿವ್ಯಾನುಭೂತಿ ಉಂಟಾಗುವ ಮಾರ್ಗವನ್ನು ತಿಳಿಸದೆ ರಹಸ್ಯವಾಗಿಡಲಾಗುತ್ತದೆ ಎಂದು ಹೇಳುವುದು ಸರಿಯಲ್ಲ. ಆ ಮಾರ್ಗವನ್ನು ಕಂಡುಹಿಡಿದು ತದನುಸಾರ ದೇವರ ಅಸ್ತಿತ್ವವನ್ನು ಪರಿಶೋಧಿಸುವುದು ಮನುಷ್ಯನಿಗೆ ಇಚ್ಛಾನುಸಾರ ಸಾಧ್ಯವಾಗುವಂಥದ್ದಲ್ಲ. ದಿವ್ಯದರ್ಶನದ ಮಾರ್ಗ ದೇವಾನುಗ್ರಹವೂ ಆ ಅನುಗ್ರಹವನ್ನು ಆಕರ್ಷಿಸುವಂತಹ ರೀತಿಯಲ್ಲಿ ದೇವರೊಡನಿರುವ ಆತ್ಮಾನುರಾಗವೂ ಆಗಿದೆ. ದೈವಾನುಗ್ರಹ ಎಂಬುದು ನಮಗೆ ಇಚ್ಛಾನುಸಾರ ಗಳಿಸಲು ಸಾಧ್ಯವಾಗುವಂಥದ್ದಲ್ಲ. ಅದು ದೇವರ ದಾನವಾಗಿದೆ. ಈ ಸ್ಥಿತಿಯಲ್ಲಿ, ದೇವರ ಸತ್ತೆಯನ್ನು ಪರಿಶೋಧಿಸುವುದು ಹೇಗೆ ಸಾಧ್ಯವೆಂದೂ ಅದು ಸಾಧ್ಯವಲ್ಲವಾದರೆ ಮತ್ತೆ ದೇವರನ್ನು ಹೇಗೆ ನಂಬುವುದೆಂದೂ ಇಲ್ಲೊಂದು ಪ್ರಶ್ನೆ ಉದ್ಭವಿಸಬಹುದು. ಅದಕ್ಕೆ ಹೀಗೆ ಉತ್ತರ ಹೇಳಬಹುದು: ಪ್ರತಿಯೊಬ್ಬನೂ ತನ್ನನ್ನು ಆಳುವ ರಾಜನ ಇರುವಿಕೆಯನ್ನು ಒಪ್ಪುವುದು ಸ್ವಯಂ ಪರಿಶೋಧನೆ ಮಾಡಿ ಅಲ್ಲ; ಮಂತ್ರಿಗಳು ಮತ್ತು ಅಧಿಕಾರಿಗಳ ಮೂಲಕ ರಾಜನ ಪ್ರವರ್ತನೆಯನ್ನು ಕಂಡುಕೊಂಡು ಆಗಿದೆ. ರಾಜನ ಭೇಟಿಯಾಗುವ ವರೆಗೆ ರಾಜನಿರುವನೆಂದು ತಾನು ಒಪ್ಪಲಾರೆನೆಂದು ಯಾರೂ ಹಠಮಾಡುವುದಿಲ್ಲ. ಇತರರು ಕಾಣುವಂತೆ ಒಮ್ಮೆಯೂ ಹೊರಗೆ ಇಳಿಯದ ಎಷ್ಟೋ ಮಂದಿ ರಾಜರು ಲೋಕದಲ್ಲಿ ಇದ್ದರು. ಪ್ರತಿಯೊಬ್ಬನೂ ಕಂಡರೆ ಮಾತ್ರ ರಾಜನಿರುವನೆಂದು ಒಪ್ಪಲಾಗುವುದೆಂದು ಹೇಳುವ ಪಕ್ಷದಲ್ಲಿ, ರಾಜನನ್ನು ಕಾಣುವ ವರೆಗೆ ರಾಜನ ಅಸ್ತಿತ್ವವನ್ನು ಪ್ರಜೆಗಳು ಅಲ್ಲಗಳೆಯಬೇಕಾಗುವುದಷ್ಟೇ.

ವಾಸ್ತವದಲ್ಲಿ, ಪಾಶ್ಚಾತ್ಯರ ಬುದ್ಧಿ ಇಂದಿನ ಭೌತಿಕ ಶಾಸ್ತ್ರಜ್ಞಾನದಲ್ಲಿ ಲೀನವಾಗಿದೆ. ತನ್ಮೂಲಕ ಅವರೆಡೆಯಲ್ಲಿರುವ ದೈವವಿಶ್ವಾಸಿಗಳು ಸಹ ನಿರೀಶ್ವರವಾದಿಗಳಂತೆ ದೈವ ಎಂಬ ಮಾತಿಗೆ ಒಂದು ದೊಡ್ಡ ಶಕ್ತಿಯೆಂದು ಮಾತ್ರ ಅರ್ಥಕೊಡುತ್ತಾರೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಆಸ್ತಿಕರು ಸಹ, ಭೌತಪದಾರ್ಥಗಳ ಒಳಗೆ ನಿಗೂಢವಾಗಿರುವ ಒಂದು ಶಕ್ತಿಯೆಂದು ಮಾತ್ರ ದೇವರ ಬಗ್ಗೆ ಹೇಳುತ್ತಾರೆ. ನಾಸ್ತಿಕರು ದೇವರ ಕುರಿತು ಆಕ್ಷೇಪಣೆ ಮಾಡುವಾಗ ಅವರ ಲಕ್ಷ್ಯ ಈ ರೀತಿಯ ಒಂದು ಶಕ್ತಿ ಮಾತ್ರವಾಗಿದೆ. ಆ ಶಕ್ತಿಯು ಜೀವ, ಶಿಕ್ಷೆ ಮತ್ತು ಅಧಿಕಾರ ಬಲವುಳ್ಳ ಓರ್ವನೆಂದು ಇವರು ಮನಗಂಡಿದ್ದರೆ ಒಂದು ಭೌತವಸ್ತು ಎಂಬಂತೆ ದೇವರನ್ನು ಕೂಡ ಇಷ್ಟಾನುಸಾರ ಪರೀಕ್ಷಿಸಿ ತಿಳಿಯಲಿಕ್ಕೆ ಸಾಧ್ಯವಾಗಬೇಕಾಗಿದೆ ಎಂಬ ಬೇಡಿಕೆಗೆ ಅವಕಾಶವುಂಟಾಗುತ್ತಿರಲಿಲ್ಲ. ಧರ್ಮಗಳು, ಮುಖ್ಯವಾಗಿ ಇಸ್ಲಾಂ ಧರ್ಮ ತೋರಿಸಿ ಕೊಡುವ ದೇವರು ಒಂದು ತತ್ವ ಅಥವಾ ಒಂದು ಶಕ್ತಿ ಮಾತ್ರವಲ್ಲ; ಅಧಿಕಾರವೂ ಇಚ್ಛೆಯೂ ಜೀವವೂ ಇರುವ ಪರಮವಾದ ಒಂದು ಸತ್ತೆ ಕೂಡ ಆಗಿದೆ. ಪರಿಮಿತವಾದ ಶಕ್ತಿ ಮತ್ತು ಅಧಿಕಾರವಿರುವ ರಾಜರು ಕೂಡ ನಾವು ಇಚ್ಛಿಸುವಾಗೆಲ್ಲಾ ಮಾತನಾಡಬೇಕೆಂದಾಗಲಿ ನಮ್ಮ ಅಪೇಕ್ಷೆಗಳಿಗೆ ಉತ್ತರ ಹೇಳಬೇಕೆಂದಾಗಲಿ ನಮಗೆ ಸಂದರ್ಶನಕ್ಕೆ ಅನುಮತಿ ನೀಡಬೇಕೆಂದಾಗಲಿ ನಾವು ಉದ್ದೇಶಿಸುವುದಿಲ್ಲ. ಅದೇ ಪ್ರಕಾರ ನಮ್ಮ ಎಲ್ಲಾ ಪ್ರವರ್ತನೆಗಳಿಗೂ ಅವರಿಂದ ಪ್ರತಿಕ್ರಿಯೆ ಉಂಟಾಗಬೇಕೆಂಬುದು ಕಡ್ಡಾಯವಲ್ಲ. ನಮ್ಮ ಕ್ರಿಯೆಗಳಿಗೆ ಯಾವಾಗಲೂ ಪ್ರತಿಕ್ರಿಯೆ ಕಂಡು ಬರುವುದು ಅಧಿಕಾರಬಲವಾಗಲಿ ಇಚ್ಛಾ ಶಕ್ತಿಯಾಗಲಿ ಇಲ್ಲದ ಭೌತವಸ್ತುವಿನಿಂದ ಮಾತ್ರವಾಗಿದೆ. ಉದಾಹರಣೆಗೆ, ವಿದ್ಯುಚ್ಛಕ್ತಿಯನ್ನು ನಾವು ಸ್ಪರ್ಶಿಸುವುದಾದರೆ ಅದರ ಪ್ರತಿಶಕ್ತಿ ಒಂದು ಆಘಾತ ಮೂಲಕ ನಮಗೆ ಅನುಭವವಾಗುತ್ತದೆ. ಬಿಸಿನೀರನ್ನು ಮುಟ್ಟಿದರೆ ಅದರ ಪ್ರತಿಕ್ರಿಯೆ ಅನುಭವವಾಗುತ್ತದೆ. ಹೀಗೆ ಭೌತವಸ್ತುಗಳ ಪ್ರತಿವರ್ತನೆ ಯಾವಾಗಲೂ ನಮಗೆ ಅನುಭವಿಸಿ ತಿಳಿಯಲು ಸಾಧ್ಯವಾಗುವಂತೆ ದೇವರನ್ನು ಸಹ ಪರೀಕ್ಷಿಸಿ ತಿಳಿಯಲು ಸಾಧ್ಯವಾಗಬೇಕೆಂದು ಭಾವಿಸುವುದು ಸರಿಯಲ್ಲ. ಇಂಡಿಯಾದ ವೈಸ್‌ರಾಯನ್ನು ಕಾಣಲು ಬಯಸುವ ಪ್ರತಿಯೊಬ್ಬನಿಗೂ ಅವರು ಸಂದರ್ಶನ ನೀಡಬೇಕೆಂದು ಹೇಳುವುದು ಸಮಂಜಸವಲ್ಲ

ವೆಂಬ ಸ್ಥಿತಿಯಲ್ಲಿ, ದೇವರನ್ನು ತಿಳಿಯುವರೆ ಬಯಸುವ ಪ್ರತಿಯೋರ್ವನಿಗೂ ಅವನು ಅವರ ಇಚ್ಛೆಯಂತೆ ತಿಳಿಯುವಂತಾಗಬೇಕೆಂದು ಹೇಳುವುದು ಹೇಗೆ ಸಮಂಜಸವಾಗುವುದು? ವೈಸ್‌ರಾಯನ್ನು ಕಾಣುತ್ತಲೂ ಸಮಾಲೋಚನೆ ಮಾಡುತ್ತಲೂ ಇರುವ ಮಂತ್ರಿಗಳು ಅವರಿಗೆ ಸಾಕ್ಷಿಯಾಗಿರುವಂತೆ ದೇವರ ಮಂತ್ರಿಗಳು ಸಹ ಅವನ ಕಾರ್ಯದಲ್ಲಿ ಸಾಕ್ಷಿಗಳಾಗುತ್ತಾರೆ. ತಾನು ನಿಯೋಜಿಸಿ ಕಳುಹಿಸುವ ಪ್ರವಾದಿಗಳೇ ಅವನ ಮಂತ್ರಿಗಳು. ಅವರು ಅವನ ಪ್ರವೃತ್ತಿಯನ್ನೂ ಶಕ್ತಿಯನ್ನೂ' ಅನುಭವಿಸಿ ತಿಳಿದುಕೊಂಡು ಹಾಗೂ ಅವನ ದರ್ಶನವನ್ನು ಪಡೆದುಕೊಂಡು ಇರುವುದರಿಂದ ಅವರು ಅವನ ಇರುವಿಕೆ ಮತ್ತು ಗುಣಮಹಿಮೆಗಳ ಕುರಿತು ಲೋಕಕ್ಕೆ ಸಾಕ್ಷಿ ಹೇಳುತ್ತಾರೆ.

ದಿವ್ಯದರ್ಶನವು ದೇವಾಸ್ತಿಕ್ಯವನ್ನು ಸಾಬೀತುಪಡಿಸುವ ಒಂದು ಸಾಕ್ಷ್ಯವಿಲ್ಲವೆಂಬುದಕ್ಕೆ ಹೇಳಲಾಗುವ ಎರಡನೆಯ ಪ್ರತಿವಾದ, ದೂರದರ್ಶಕ ಮೊದಲಾದ ಉಪಕರಣಗಳ ಮೂಲಕ ವೈಜ್ಞಾನಿಕ ಸಿದ್ಧಾಂತಗಳನ್ನು ಇತರರಿಗೆ ಪರಿಶೋಧಿಸಿ ತಿಳಿಯಲು ಸಾಧ್ಯವಾಗುವಂತೆ ದಿವ್ಯದರ್ಶನ ವಾದವನ್ನು ಅನ್ಯರಿಗೆ ಯಾವ ರೀತಿಯಲ್ಲೂ ಪರಿಶೋಧಿಸಿ ನೋಡಲಿಕ್ಕೆ ಸಾಧ್ಯವಿಲ್ಲವೆಂದಾಗಿದೆ. ದೇವರು ಇಚ್ಛಾಶಕ್ತಿ ಮತ್ತು ಅಧಿಕಾರಬಲ ಉಳ್ಳ ಒಂದು ಜೀವಂತ ಸತ್ತೆ ಎಂದು ತಿಳಿಯದೆ ಇರುವುದಾಗಿದೆ ಈ ವಾದಕ್ಕೆ ಕಾರಣ. ಅವನು ಅಧಿಕಾರಶಕ್ತಿಯುಳ್ಳವನಾದುದರಿಂದ ನಮ್ಮ ಅಪೇಕ್ಷೆಗಳನ್ನು ಈಡೇರಿಸದೆಯೂ ಅವನ್ನು ಗಣ್ಯಮಾಡದೆಯೂ ಇರಬಹುದು. ನಾವು ಬಯಸುವ ರೀತಿಯಲ್ಲಿ ಅವನನ್ನು ನಮಗೆ ಅರಿಯಲಾಗದಿದ್ದರೆ ಅವನನ್ನು ನಂಬಲಾಗುವುದಿಲ್ಲವೆಂದು ಹೇಳುವುದು, ವೈಸ್‌ರಾಯಿಯು ಭೇಟಿಯಾಗದಿದ್ದರೆ ಹಾಗೆ ಓರ್ವ ಅಧಿಕಾರಿಯೇ ಇಲ್ಲವೆಂದು ಹೇಳುವಂತಾಗಿದೆ. ಅದು ನಿರರ್ಥಕವಾದ ಒಂದು ವಾದವೆಂದು ಯಾರೂ ಒಪ್ಪುವರು. ವೈಸ್‌ರಾಯಿಯೊಂದಿಗೆ ನಿಕಟ ಸಂಪರ್ಕವನ್ನಿಟ್ಟು ಭೇಟಿಯಾಗುತ್ತಿರುವವರ ಮೂಲಕ ನಮಗೆ ಆತನ ಕುರಿತು ತಿಳಿಯಲು ಸಾಧ್ಯವಾಗುವ ಕಾಲದವರೆಗೆ ಹಾಗೆ ಒಬ್ಬ ಮೇಲಧಿಕಾರಿ ಇಲ್ಲವೆಂದು ಹೇಳಿದರೆ ಅದು ಸ್ವೀಕಾರಾರ್ಹವಲ್ಲ.

ಮೂರನೆಯದಾಗಿ ಹೇಳುವ ಪ್ರತಿವಾದ, ದಿವ್ಯದರ್ಶನವು ಮನುಷ್ಯನ ಬೇರೆ ವಿಧ ಅನುಭವಗಳಿಂದ ಸಾಕ್ಷೀಕರಿಸಲ್ಪಡುವುದಿಲ್ಲವಾದುದರಿಂದ ಅದು ದೇವರ ಅಸ್ತಿತ್ವಕ್ಕೆ ಒಂದು ಪುರಾವೆಯಾಗುವುದಿಲ್ಲವೆಂದಾಗಿದೆ. ಈ ಪ್ರತಿವಾದ ಕೂಡ ಆಧಾರರಹಿತವಾದುದು, ಏಕೆಂದರೆ ಮನುಷ್ಯನ ಬೇರೆ ವಿಧ ಅನುಭವಗಳಿಂದ ದಿವ್ಯದರ್ಶನವಾದ ಸಾಕ್ಷೀಕರಿಸಲ್ಪಡುತ್ತದೆ. ಇದಕ್ಕೆ ಕೆಳಗೆ ಹೇಳುವ ಉದಾಹರಣೆಗಳು ಸಾಕ್ಷ್ಯಗಳಾಗಿವೆ. ವಾಗ್ದತ್ತ ಮಸೀಹ್ (ಮತ ಸುಧಾರಕ) ಆಗಿ ಈ ಕಾಲದಲ್ಲಿ ದೇವರಿಂದ ನಿಯೋಜಿಸಲ್ಪಟ್ಟ ಹಝ್ರತ್ ಅಹ್ಮದ್ (ಅ) ಅವರು, ಕೈಬೆರಳುಗಳಿಂದ ಎಣಿಸಬಹುದಾಗಿದ್ದ ಕೆಲವು ಸ್ನೇಹಿತರು ಮಾತ್ರ ತನ್ನೊಂದಿಗಿದ್ದ ಕಾಲದಲ್ಲಿ, ತನಗೆ ದೇವರಿಂದ ಈ ರೀತಿ ಸಂದೇಶ ಲಭಿಸಿದುದಾಗಿ ಘೋಷಿಸಿದರು:

يأتيك من كل فج عميق
و يأتون من كل فج عميق

ಇದರ ತಾತ್ಪರ್ಯ: "ಹಲವು ದೂರದೇಶಗಳಿಂದ ಬಹಳ ಮಂದಿ ಜನರು ನಿನ್ನ ಸಮೀಪಕ್ಕೆ ಬರುತ್ತಲೇ ಇರುವರು" ಎಂದಾಗಿದೆ. ದೇವರಿಂದ ಲಭ್ಯವಾದ ಈ ವಚನ ಪರಮ ಸತ್ಯವಾಗಿ ಪರಿಣಮಿಸಿದೆಯೆಂದು ಇಂದು ಲೋಕಕ್ಕೆ ಅನುಭವಗೋಚರವಾಗಿದೆ. ಇದೇ ಪ್ರಕಾರ ಹಝ್ರತ್ ಅಹ್ಮದ್‌ರವರು, ದೇವರು ತನಗೆ ಹೀಗೆ ದಿವ್ಯಾರಿವು ನೀಡಿರುವನೆಂದು ಹೇಳಿದರು: "ನಾನು ನಿನ್ನ ದೌತ್ಯವನ್ನು ಜಗತ್ತಿನ ಮೂಲೆ ಮೂಲೆಗಳಿಗೂ ತಲಪಿಸುವೆನು". ಈ ಭವಿಷ್ಯ ನುಡಿ ಸಹ ಸತ್ಯವಾಗಿ ಪರಿಣಮಿಸಿದ್ದು ಲೋಕಕ್ಕೆ ಕಾಣಲು ಸಾಧ್ಯವಾಯಿತು. ಕಳೆದ ಕೆಲವು ವರ್ಷಗಳಿಗೆ ಹೋಲಿಸಿದರೆ ಈ ದೌತ್ಯಕ್ಕೆ ಇತ್ತೀಚೆಗೆ ಹೆಚ್ಚಿನ ಪ್ರಚಾರ ಸಿದ್ಧಿಸಿದೆ. ಇದಕ್ಕೆ ಮುಂಚೆ ಹಝ್ರತ್ ಅಹ್ಮದ್‌ರವರ ದೌತ್ಯ ಜಪಾನ್, ಚೀನಾ ಎಂಬೀ ದೇಶಗಳಿಗೆ ತಲಪಿರಲಿಲ್ಲ. ಆದರೆ ಈಗ ಅಲ್ಲಿ ಸಹ ಪ್ರಚಾರ ಕಾರ್ಯ ಆರಂಭವಾಗಿದೆ.

ಅದೇ ಪ್ರಕಾರ ಮುಹಮ್ಮದ್ ಪೈಗಂಬರ್ (ಸ) ಅವರ ಕಾಲದಲ್ಲುಂಟಾದ ಒಂದು ಸಂಭವವನ್ನು ಕೂಡ ಇಲ್ಲಿ ಉದಾಹರಿಸಬಹುದು. ಪುಣ್ಯಪುರುಷರಾದ ಆ ಪ್ರವಾದಿವರ್ಯರು ತನ್ನ ಪ್ರಥಮ ಶಿಷ್ಯ ಹಝ್ರತ್

ಅಬೂಬಕ್ಕರ್ ಅವರೊಂದಿಗೆ ಆಶ್ರಯಾರ್ಥಿಯಾಗಿ ಮದೀನಕ್ಕೆ ದೇಶಾಂತರ ಹೋಗುವ ಸಂದರ್ಭದಲ್ಲಿ ಪೈಗಂಬರರನ್ನು ಸುರಾಖಃ ಎಂಬ ಒಬ್ಬ ಶತ್ರು ಬೆನ್ನಟ್ಟಿದನು. ನಿರ್ವಾಹವಿಲ್ಲದೆ ನಿಸ್ಸಹಾಯಕನಾಗಿ ಸ್ವದೇಶವನ್ನು ತ್ಯಜಿಸಿ ವಲಸೆ ಹೋಗಬೇಕಾದ ಆ ದಿವ್ಯಪುರುಷ, ತನ್ನನ್ನು ಸುರಾಖಃ ಸಮೀಪಿಸಿದಾಗ ಆತನೊಡನೆ ಹೀಗೆ ಹೇಳಿದರು: "ಎಲೈ ಸುರಾಖಾ, ಕಿಸ್ರಾದ ರಾಜಚಿಹ್ನೆಯಾದ ಕಂಕಣವು ನಿಮ್ಮ ಕೈಯಲ್ಲಿ ಧರಿಸುವ ಕಾಲದಲ್ಲಿ ನಿಮ್ಮ ಸ್ಥಿತಿ ಏನಾಗಿರಬಹುದು ?" ಸುರಾಖಃ ಆಶ್ಚರ್ಯಚಕಿತನಾಗಿ "ಏನು ? ಹುರ್ಮುಸಿನ ಪುತ್ರ ಕಿಸ್ರಾ ರಾಜನ ಬಳೆಯೇ ?" ಎಂದು ಪ್ರಶ್ನಿಸಿದ್ದಕ್ಕೆ ಪೈಗಂಬರರು "ಹೌದು" ಎಂದು ಉತ್ತರಿಸಿದರು. ಈ ಭವಿಷ್ಯ ನುಡಿ ಹಝ್ರತ್ ಉಮರ್ ಅವರ ಆಳ್ವಿಕೆಯ ಕಾಲದಲ್ಲಿ ಸತ್ಯವಾಗಿ ಪರಿಣಮಿಸಿದ್ದು ಜಗತ್ತಿಗೆ ಕಾಣಲು ಸಾಧ್ಯವಾಯಿತು. ಅಂದು ಕಿಸ್ರಾ (ಇರಾನ್) ಚಕ್ರವರ್ತಿಯ ರಾಜಧಾನಿಯನ್ನು ಮುಸ್ಲಿಮರು ಗೆದ್ದು ಸ್ವಾಧೀನಪಡಿಸಿದಾಗ ಅಲ್ಲಿ ದೊರೆತ ಅಮೂಲ್ಯ ವಸ್ತುಗಳಲ್ಲಿ ಆ ರಾಜಕಂಕಣ ಸೇರಿತ್ತು. ಹಝ್ರತ್ ಉಮರ್‌ರವರು ರತ್ನಖಚಿತವಾದ ಈ ಬಳೆಯನ್ನು, ಮಕ್ಕಾ ವಿಜಯದ ಬಳಿಕ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಸುರಾಖಃರವರನ್ನು ಕರೆದು ಕೈಗೆ ತೊಡಿಸಿದರು. ಹೀಗೆ ಎಷ್ಟೋ ವರ್ಷಗಳಿಗೆ ಮುಂಚೆ ದೇವರಿಂದ ಮುಹಮ್ಮದ್ ಪೈಗಂಬರರಿಗೆ ಉಂಟಾದ ದಿವ್ಯ ಪ್ರಕಟಣೆ ಜಗತ್ತಿಗೆ ಅನುಭವಗೋಚರವಾಯಿತು.

ದಿವ್ಯದರ್ಶನ ಅಥವಾ ದಿವ್ಯಾನುಭೂತಿ ದೈವಾಸ್ತಿತ್ವವನ್ನು ರುಜುಪಡಿಸುವ ಒಂದು ಸಾಕ್ಷ್ಯವಲ್ಲವೆಂಬುದಕ್ಕೆ ಮಿ। ಬರ್ಟ್ರ್ಯಾಂಡ್ ರಸ್ಸೆಲ್ ಮಾಡಿದ ಒಂದನೆಯ ಆಕ್ಷೇಪಣೆಯನ್ನೂ ಅದನ್ನು ಪುಷ್ಟೀಕರಿಸುವ ಮೂರು ವಾದಗಳನ್ನೂ ಸಂಕ್ಷಿಪ್ತವಾಗಿ ನಿರೂಪಿಸಲಾಯಿತು. ಇನ್ನು ಅವರ ಮತ್ತೊಂದು ಆಕ್ಷೇಪಣೆಯ ಕುರಿತು ಚಿಂತನ ಮಾಡುವುದಕ್ಕೆ ಮುಂಚೆ ಇಲ್ಲಿ ಉಂಟಾಗಬಹುದಾದ ಒಂದು ಸಂಶಯಕ್ಕೆ ಸಹ ಸಮಾಧಾನ ಹೇಳುವುದು ಉಚಿತವೆಂದು ಭಾವಿಸುತ್ತೇನೆ. ಪರೋಕ್ಷ ಜ್ಞಾನವನ್ನು ಅಭ್ಯಾಸದಿಂದಲೂ ಶಾಸ್ತ್ರಸಹಾಯದಿಂದಲೂ ಗಳಿಸಬಹುದೆಂದೂ ಹಾಗಿರುವ ಯಾವುದಾದರೂ ವಿದ್ಯೆಯಿಂದಾಗಿರಬೇಕು ದಿವ್ಯಾನುಭೂತಿಯುಂಟಾದವರೆಂದು ಹೇಳುವವರು ತಮಗೆ ಮತ್ತೆ ಸಿದ್ಧಿಸಬಹುದಾಗಿದ್ದ ವಿಜಯಗಳ ಕುರಿತು ಪ್ರತಿಕೂಲವಾದ ಪರಿಸ್ಥಿತಿಯಲ್ಲೇ ಮುಂಚಿತವಾಗಿ ಪ್ರವಾದನೆ ಮಾಡುವರೆ ಸಾಧ್ಯವಾಯಿತೆಂಬ ಒಂದು ಸಂದೇಹವು ಈ ಸಂದರ್ಭದಲ್ಲಿ ಉಂಟಾಗಲೆಡೆಯಿದೆ. ಅದಕ್ಕೆ ಉತ್ತರ ಈರೀತಿಯಾಗಿದೆ:

ಪ್ರವಾದಿಗಳ ಪ್ರವಾದನೆಗಳಲ್ಲಿ ಭಾವೀ ವಿಚಾರಗಳಿಗೆ ಸಂಬಂಧಿಸಿದ ವಿವರಗಳು ಮಾತ್ರವಲ್ಲ ಅಡಕವಾಗಿರುವುದು: ಅವು ಇಚ್ಛಾನುಸಾರ ಪ್ರವರ್ತಿಸುವರೆ ಎಲ್ಲಾ ಪ್ರಕಾರದಲ್ಲಿ ಸ್ವತಂತ್ರನೂ ಭಾವೀ ವಿಚಾರಗಳ ಮೇಲೆ ಪೂರ್ಣಾಧಿಕಾರವುಳ್ಳ ಸರ್ವಶಕ್ತನೂ ಆದವನಿಂದ ಇರುವ ಸಂದೇಶವೆಂದು ಸಾಬೀತುಪಡಿಸಲು ಪರ್ಯಾಪ್ತವಾದ ಲಕ್ಷ್ಯವೂ ಅವುಗಳಲ್ಲಿ ಅಡಕವಾಗಿದೆ. ಉದಾಹರಣೆಗೆ, ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್ (ಅ) ತನಗೆ ದೇವರಿಂದುಂಟಾದ ಪ್ರಕಟಣೆಯನ್ನು ಅನುಸರಿಸಿ ಈ ದೇಶದಲ್ಲಿ ಪ್ಲೇಗ್, ಭಯಂಕರವಾದ ಭೂಕಂಪ ಮೊದಲಾದ ನಾಶಗಳು ಉಂಟಾಗುವುವೆಂದು ಭವಿಷ್ಯ ನುಡಿದರು. ಅಭ್ಯಾಸದಿಂದ ಸಂಪ್ರಾಪ್ತವಾಗುವ ಯಾವುದಾದರೂ ವಿದ್ಯೆಯಿಂದಾಗಲಿ ಗಣಿತದಂತಹ ಮನುಷ್ಯ ಸೃಷ್ಟಿತ ಯಾವುದಾದರೂ ಶಾಸ್ತ್ರ ಮೂಲಕವಾಗಲಿ ಅನೇಕ ವರ್ಷಗಳ ಬಳಿಕ ಸಂಭವಿಸಲಿರುವ ಇಂತಹ ವಿಚಾರಗಳ ಕುರಿತು ಮುಂಚಿತವಾಗಿ ಅರಿಯಲು ಸಾಧ್ಯವೆಂದಾಗುವುದಾದರೆ ಕೂಡ, ಆ ರೀತಿ ಸಂಭವಿಸುವ ಕಾಲದಲ್ಲಿ ಪ್ರವಾದನೆ ಮಾಡಿದ ವ್ಯಕ್ತಿಯ ಅನುಯಾಯಿಗಳು ಆ ವಿಧ ನಾಶಫಲಗಳಿಂದ ಬಹುಮಟ್ಟಿಗೆ ಸುರಕ್ಷಿತರಾಗುವರೆಂದೂ ಅಂತಹ ನಾಶನಷ್ಟಗಳಿಗೆ ಅನ್ಯರು ಹೆಚ್ಚಾಗಿ ಈಡಾಗುವರೆಂದೂ ತಿಳಿಸುವರೆ ಸಹ ಅಂತಹ ವಿದ್ಯೆಗಳು ಸಮರ್ಥವಾಗಿರಬಹುದೆಂದು ಊಹಿಸಲು ಸಾಧ್ಯವಿಲ್ಲ. ಆದರೆ ಪುಣ್ಯಪುರುಷರಾದ ಹಝ್ರತ್ ಅಹ್ಮದ್ ಅವರು ಪ್ರಸ್ತುತ ನಾಶ ಸಂಭವಗಳ ಕುರಿತು ಪ್ರಕಟಿಸಿದ ಭವಿಷ್ಯವಾಣಿಗಳಲ್ಲಿ, ತನ್ನ ಮೇಲೆ ಪ್ರಾಮಾಣಿಕವಾಗಿ ವಿಶ್ವಾಸವಿರಿಸಿದವರು ಅಂತಹ ವಿಪತ್ತುಗಳಿಂದ

ಪ್ರಾಯೇಣ ಸುರಕ್ಷಿತರಾಗುವರೆಂದೂ ಸ್ಪಷ್ಟವಾಗಿ ಪ್ರಸ್ತಾಪಿಸಿರುವುದನ್ನು ಕಾಣಬಹುದು. ಆ ಭವಿಷ್ಯನುಡಿಯ ಪ್ರಕಾರ ಜಗತ್ತಿನಲ್ಲುಂಟಾದ ನಾಶನಷ್ಟಗಳಿಂದೆಲ್ಲಾ ಅವರ ಅನುಯಾಯಿಗಳು ಸರ್ವ ಸಾಮಾನ್ಯವಾಗಿ ಸುರಕ್ಷಿತರಾಗಿರುತ್ತಾರೆಂಬುದು ಒಂದು ವಾಸ್ತವಾಂಶವಾಗಿದೆ. ಇದು ದೇವರ ಶಕ್ತಿ ಮಹಾತ್ಮೆಗಳನ್ನು ಪ್ರಕಟಪಡಿಸುವಂತಹದ್ದೂ ಅವನ ಅಸ್ತಿತ್ವವನ್ನು ಅಲ್ಲಗಳೆಯುವವರಿಗೆ ಸತ್ಯವನ್ನು ತಿಳಿಸಿಕೊಡುವ ಸೂಚಕಕಾರ್ಯವೂ ಆಗಿದೆ.

ಇದೇ ಪ್ರಕಾರ, ಮುಹಮ್ಮದ್ ಪೈಗಂಬರರ ಜೀವಿತದಿಂದಲೂ ಒಂದು ಉದಾಹರಣೆಯನ್ನು ತೋರಿಸಬಹುದು. ಮಕ್ಕಾ ನಿವಾಸಿಗಳಿಗೆ ದೈವಶಿಕ್ಷೆ ಉಂಟಾಗುವುದೆಂದು ಪ್ರವಾದಿವರ್ಯರು ಒಮ್ಮೆ ಭವಿಷ್ಯ ನುಡಿದಿದ್ದರು. ಆದರೆ ಅದು ಈಡೇರಲಿಕ್ಕೆ ತನ್ನ ಅಸಾನ್ನಿಧ್ಯವನ್ನು ಒಂದು ನಿಬಂಧನೆಯಾಗಿ ನಿಶ್ಚಯಿಸಲಾಗಿತ್ತು. ಎಂದರೆ ತಾನು ಅವರೆಡೆಯಲ್ಲಿ ಮಕ್ಕಾದಲ್ಲಿ ಇರುವ ಕಾಲದ ವರೆಗೆ ಆ ಶಿಕ್ಷೆ ಎರಗಲಾರದೆಂದು ಸಹ ಪೈಗಂಬರರು ಭವಿಷ್ಯ ನುಡಿದರು. ಈ ಭವಿಷ್ಯದ್ವಚನ ಅಕ್ಷರಶಃ ಈಡೇರಿದುದಾಗಿ ಚರಿತ್ರೆ ಸಾಕ್ಷ್ಯವಹಿಸುತ್ತದೆ. ಪೈಗಂಬರರು ಮಕ್ಕಾ ಬಿಟ್ಟು ಮದೀನದಲ್ಲಿ ಆಶ್ರಯಪಡೆದ ಬಳಿಕ ಮಕ್ಕಾ ನಿವಾಸಿಗಳಿಗೆ ಭವಿಷ್ಯ ನುಡಿಯ ಪ್ರಕಾರದ ದೇವಶಿಕ್ಷೆಯು ಒಂದು ಭಯಂಕರ ಕ್ಷಾಮದ ರೂಪದಲ್ಲಿ ಎರಗಿತು. ಆ ಬರಗಾಲದ ಕಾಠಿಣ್ಯ ನಿಮಿತ್ತ ಅವರು ತೊಗಲು ತುಂಡುಗಳನ್ನೂ ಸೊಪ್ಪುಗಳನ್ನೂ ತಿನ್ನಲು ಕೊಳ್ಳಲು ನಿರ್ಬಂಧಿತರಾದರು. ಆದರೆ ಈ ಕ್ಷಾಮ ಬಾಧೆಯ ಕುರಿತಾದ ಮುನ್ನರಿವು ಪೈಗಂಬರರಿಗೆ ಯಾವುದಾದರೂ ವಿದ್ಯೆ ಅಥವಾ ಶಾಸ್ತ್ರದ ಸಹಾಯದಿಂದ ಲಭಿಸಿದ್ದಾಗಿರಬಹುದೆಂದು ಊಹಿಸುವುದಾದರೆ ಕೂಡ, ಅದು ತಾನು ಆ ನಗರವನ್ನು ಬಿಟ್ಟುಹೋದರೆ ಮಾತ್ರ ಸಂಭವಿಸುವುದೆಂದು ಮುಂತಿಳಿಸುವರೆ ಪೈಗಂಬರರಿಗೆ ಸಾಧ್ಯವಾಗುವಂತಹ ಒಂದು ವಿದ್ಯೆ ಸಹ ಉಂಟೆಂದು ಹೇಳಲು ಯಾರಾದರೂ ಧೈರ್ಯಪಡುವರೆಂದು ತೋಚುವುದಿಲ್ಲ. ಹಾಗಿರುವಾಗ, ಈ ಪ್ರವಾದನೆಯು ಭವಿಷ್ಯಜ್ಞಾನವನ್ನು ಒಳಗೊಂಡಿರುವುದು ಮಾತ್ರವಲ್ಲ, ಸರ್ವಶಕ್ತನೂ ಸರ್ವಜ್ಞನೂ ಆದ ಓರ್ವನ ಇಚ್ಛೆ ಮತ್ತು ಅಧಿಕಾರಬಲಗಳನ್ನು ಸಹ ಕೂಡಿಕೊಂಡಿದೆಯೆಂದು ಸ್ಪಷ್ಟವಾಗುತ್ತದೆ. ಇದು ಪ್ರಸ್ತುತ ಪ್ರವಾದನೆಯು ಇಚ್ಛಿಸುವುದನ್ನೆಲ್ಲಾ ಮಾಡಲಿಕ್ಕೆ ಸರ್ವಸಮರ್ಥನಾದ ದೇವನಿಂದಿರುವುದೆಂದು ಸಾಬೀತುಪಡಿಸುತ್ತದೆ.

ದೇವ ಸಾಕ್ಷಾತ್ಕಾರವು ದೈವಾಸ್ತಿತ್ವವನ್ನು ರುಜುಪಡಿಸುವ ಒಂದು ಸಾಕ್ಷ್ಯವಲ್ಲವೆಂದು ತೋರಿಸಲು ಮಿ। ರಸ್ಸೆಲ್ ಹೇಳುವ ಎರಡನೆಯ ಆಕ್ಷೇಪಣೆ, ಈ ಅನುಭವವಾದಕ್ಕೆ ಸಂಬಂಧಿಸಿದ ಮಟ್ಟಿಗೆ ವಿವಿಧ ಮತಸ್ಥರಿಗೆ ಸುಮಾರಾಗಿ ಒಮ್ಮತಾಭಿಪ್ರಾಯವಿದ್ದರೂ ಹಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದೆಯೆಂದಾಗಿದೆ. ಈ ವಾಸ್ತವಾಂಶವನ್ನು ನಾವು ಸಹ ಒಪ್ಪುತ್ತೇವೆ. ಸಾಕ್ಷಿಗಳ ಪ್ರಸ್ತಾವನೆಗಳ ವೈಪರೀತ್ಯವು ಒಂದು ಕಾರ್ಯಕ್ಕೆ ಸಂಬಂಧಿಸುವ ಚಿಲ್ಲರೆ ವಿಷಯಗಳಲ್ಲಾದರೂ ಅದು ಆ ಸಾಕ್ಷ್ಯದ ಘನತೆಯನ್ನು ಕಡಿಮೆಗೊಳಿಸಿಯೇ ಬಿಡುತ್ತದೆ. ಆತ್ಮವಾದಿಗಳ ಸಿದ್ಧಾಂತದ ವಿರುದ್ಧವಾಗಿ ಕಠಿಣವಾದ ಆಕ್ಷೇಪಣೆಗಳು ಎತ್ತಲ್ಪಡುವುದೇ ಅವರು ಆಕರ್ಷಿಸಿ ಬರಿಸುವುದೆಂದು ಹೇಳಲ್ಪಡುವ ಆತ್ಮಗಳ ನುಡಿಗಳು ಒಂದು ಇನ್ನೊಂದರೊಂದಿಗೆ ವ್ಯತ್ಯಾಸವನ್ನು ಹೊಂದಿದೆ ಎಂಬುದರಿಂದಾಗಿದೆ. ಆದರೂ ವಿವಿಧ ಮತಸ್ಥರಾದ ರಹಸ್ಯಾರ್ಥ ಸಿದ್ಧಾಂತಿಗಳ ಅನುಭವಗಳಲ್ಲಿರುವ ವೈಪರೀತ್ಯ ನಿಮಿತ್ತ ದಿವ್ಯದರ್ಶನ ವಾದವು ಪ್ರಮಾಣಯೋಗ್ಯವಲ್ಲವೆಂದು ಭಾವಿಸುವುದು ಕೇವಲ ಅಬದ್ಧ. ಧರ್ಮದ ಯಾಥಾರ್ಥ್ಯವನ್ನು ಗ್ರಹಿಸದೆ ಇರುವುದರಿಂದ ಇಂತಹ ಆಕ್ಷೇಪಣೆಗಳನ್ನು ಹೊರಡಿಸಲಾಗುತ್ತದೆ. ಇಂದಿನ ವಿವಿಧ ಮತಗಳ ಅನುಯಾಯಿಗಳು ಎಲ್ಲರೂ ಸಾಕ್ಷಾತ್ ಮತೋಪದೇಶ ಪ್ರಕಾರ ಜೀವಿಸುವವರು ಅಲ್ಲವಾದುದರಿಂದ ಅವರಿಗುಂಟಾದುದೆಂದು ಹೇಳಲ್ಪಡುವ ಅನುಭವವು ಧರ್ಮವಿಚಾರದಲ್ಲಿ ಆಧಾರವಾಗುವುದಿಲ್ಲ. ಪ್ರವಾದಿಗಳ ಮತ್ತು ದೇವನಿಯೋಜಿತರಾದ ಇತರ ಯಾವುದೇ ಮಹಾತ್ಮರುಗಳ ದೈವೀಪ್ರಕಾಶನಗಳನ್ನಾಗಲಿ ಸತ್ಯಮತಾನುಯಾಯಿಗಳಿಗೆ ಉಂಟಾಗುವ ಅನುಭವಗಳನ್ನಾಗಲಿ ಮಾತ್ರವೇ ಆಧಾರವಾಗಿ ತೆಗೆಯಲು ನಿರ್ವಾಹವಿದೆ. ಆದರೆ ದೇವನಿಯುಕ್ತರಾದ ಪುಣ್ಯವಂತರಿಗೆ ಸಿದ್ಧಿಸುವ ದಿವ್ಯಾನುಭೂತಿಗಳಲ್ಲೂ ಸತ್ಯಮತಾನುಯಾ

ಯಿಗಳಿಗೆ ಉಂಟಾಗುವ ಅನುಭವಗಳಲ್ಲೂ ಕಾಣಲ್ಪಡುವ ಕೆಲವು ವ್ಯತ್ಯಾಸಗಳು ಈ ಅನುಭವ ಸಾಕ್ಷ್ಯದ ಘನತೆಯನ್ನು ಹಾನಿಗೊಳಿಸುವಂಥದ್ದಲ್ಲ. ದೇವರ ಗುಣಮಹಿಮೆಗಳಲ್ಲಿ ಒಂದು ಒಬ್ಬರಿಗೂ ಇನ್ನೊಂದು ಇನ್ನೊಬ್ಬರಿಗೂ ಪ್ರತ್ಯಕ್ಷಗೊಳ್ಳಬಹುದು. ಆಗ ಅವರ ಅನುಭವಗಳಲ್ಲಿ ಕಾಣಲ್ಪಡುವ ವ್ಯತ್ಯಾಸ ಅವರಿಗೆ ಪ್ರಕಟವಾಗುವ ಗುಣಗಳ ಮಟ್ಟವನ್ನನುಸರಿಸಿರುವುದರಿಂದ ಅದು ಆ ದಿವ್ಯ ಸಾಕ್ಷ್ಯವನ್ನು ಲಘೂಕರಿಸುವುದೇ ಇಲ್ಲ.

ದಿವ್ಯಾನುಭೂತಿಯು ದೈವಾಸ್ತಿತ್ವವನ್ನು ಸಾಬೀತುಪಡಿಸುವ ಸಾಕ್ಷ್ಯವಲ್ಲವೆಂದು ತೋರಿಸಲಿಕ್ಕೆ ಮಿ। ರಸ್ಸೆಲ್ ಹೇಳುವ ಮೂರನೆಯ ಆಕ್ಷೇಪಣೆ, ವೈಜ್ಞಾನಿಕ ಸಿದ್ಧಾಂತಗಳನ್ನು ಪರೀಕ್ಷಿಸಿ ನೋಡಬಹುದಾದ ರೀತಿಯಲ್ಲಿ ದಿವ್ಯದರ್ಶನ ವಾದವನ್ನು ಪರೀಕ್ಷಿಸಲು ಅಸಾಧ್ಯವೆಂದಾಗಿದೆ. ಈ ಆಕ್ಷೇಪಣೆಗೆ ಉತ್ತರ ಒಂದನೆಯ ಆಕ್ಷೇಪಣೆಯ ನಿರೂಪಣ ಘಟ್ಟದಲ್ಲಿ ಹೇಳಿಯಾಗಿದೆ. ಎಂದರೆ, ದೇವರು, ಬಯಸುವವರಿಗೆಲ್ಲ ಪರೀಕ್ಷಿಸಿ ನೋಡಬಹುದಾದ ವಿದ್ಯುಚ್ಛಕ್ತಿ, ಊರ್ಜ ಇತ್ಯಾದಿಗಳಂತೆ ಒಂದು ಪ್ರಕೃತಿ ಶಕ್ತಿಯಲ್ಲ. ದೇವರೆಂಬುದು ಇಚ್ಛಾಶಕ್ತಿಯೂ ಅಧಿಕಾರಬಲವೂ ಇರುವ ಜೀವಂತ ಸತ್ತೆ. ಅವನು ತಾನು ಆಶೀರ್ವದಿಸಲು ಇಚ್ಛಿಸುವವರನ್ನು ತನ್ನ ದರ್ಶನದಿಂದ ಅನುಗ್ರಹಿಸುತ್ತಾನೆ. ಅವನು ತನ್ನನ್ನು ಪರಿಶೋಧಿಸಲು ಹೊರಡುವ ಒಬ್ಬೊಬ್ಬರಿಗೂ ಅವರ ಇಷ್ಟಾನುಸಾರ ತನ್ನ ಶಕ್ತಿಯನ್ನು ಪ್ರಕಟಪಡಿಸುವುದಾದರೆ ಮತ್ತೆ ಅವನು ದೇವರಾಗಿರಲಿಕ್ಕಿಲ್ಲ, ಕೇವಲ ಒಂದು ಆಟಿಕೆಯಂತೆ ಮಾತ್ರ ಆಗುವನು. ಒಬ್ಬ ಸಾಮಾನ್ಯನಿಗೆ ಸಹ ಕೆಲವು ವಿಚಾರಗಳಲ್ಲಿ ಸುಮಾರಾಗಿ ಇಷ್ಟಾನುಸಾರ ವರ್ತಿಸಲು ಸ್ವಾತಂತ್ರ್ಯವಿರುತ್ತದೆ. ಅವನು ತನ್ನೊಡನೆ ಕೇಳಲಾಗುವ ಪ್ರಶ್ನೆಗಳಲ್ಲಿ ತನಗೆ ಇಷ್ಟವಿರುವುದನ್ನು ಮಾತ್ರ ಉತ್ತರಿಸಿ ಇಷ್ಟವಿಲ್ಲದವುಗಳ ಕುರಿತು ಚಕಾರವೆತ್ತುವುದಿಲ್ಲ. ಈ ಸ್ಥಿತಿಯಲ್ಲಿ, ಸರ್ವ ಅಧಿಕಾರ ಮತ್ತು ಶಕ್ತಿಗಳ ಒಡೆಯನಾದ ದೇವರು ಯಾವೊಬ್ಬನ ಪ್ರಶ್ನೆಗೂ ಉತ್ತರ ಹೇಳಬೇಕೆಂದಾಗಲಿ ಅಗತ್ಯಪಡಿಸುವ ಯಾವುದೇ ರೀತಿಯ ಪರೀಕ್ಷಣೆಗೂ ಈಡಾಗಬೇಕೆಂದಾಗಲಿ ಭಾವಿಸುವುದು ನ್ಯಾಯವಾಗುವುದು ಹೇಗೆ? ಆದರೆ ಯಾರಾದರೂ ಒಂದು ವಿಶಿಷ್ಟ ತರದಲ್ಲಿ ದಿವ್ಯದರ್ಶನವನ್ನು ಸಾಧಿಸಲಿಕ್ಕೆ ದೇವನಿಯೋಜಿತನಾದ ಓರ್ವ ಮಹಾತ್ಮನ ಮೂಲಕ ಅವಶ್ಯಪಟ್ಟು ಆ ಮಹಾತ್ಮನನ್ನು ಅಂತಹ ಒಂದು ಪರೀಕ್ಷಣೆಗೆ ಆಹ್ವಾನಿಸಿದರೆ, ಆ ಆಹ್ವಾನದಲ್ಲಿ ಧರ್ಮದೃಷ್ಟ್ಯಾ ದೋಷವೇನೂ ಇಲ್ಲದಿದ್ದರೆ, ದೇವರು ತನ್ನ ಅನುಗ್ರಹ ಮೂಲಕ ಆ ಪ್ರಕಾರ ಒಂದು ಅನುಭವ ಸಾಕ್ಷ್ಯವನ್ನು ನೀಡಲೂ ಬಹುದು. ಈ ಕಾಲದಲ್ಲಿ ವಾಗ್ದತ್ತ ಮಸೀಹ್ (ಮೆಸ್ಸೀಯ) ಆಗಿ ಆಗಮಿಸಿದ ಹಝ್ರತ್ ಅಹ್ಮದ್ ಅವರು ತನಗೆ ದೇವರಿಂದ ಪರೋಕ್ಷ ವಿಚಾರಗಳ ಕುರಿತು ಅರಿವು ಲಭಿಸುತ್ತಿರುವುದಾಗಿ ಘೋಷಿಸಿದಾಗ, ಓರ್ವ ಪಾದ್ರಿಯು, ತಾನು ಕೆಲವು ಪ್ರಶ್ನೆಗಳನ್ನು ಬರೆದು ಒಂದು ಲಕೋಟೆಯಲ್ಲಿ ಮುಚ್ಚಿ ಮುಂದಿಟ್ಟರೆ, ಅದನ್ನು ದೇವರಿಂದ ಓದಿಸಿ ಅದರ ಪ್ರಶ್ನೆಗಳು ಇಂತಹವುಗಳೆಂದು ಹೇಳಿಕೊಡುವಿರಾ ಎಂದು ಅವರೊಡನೆ ಕೇಳಿದರು. ಅದಕ್ಕೆ ಆ ಪುಣ್ಯ ಪುರುಷರು ನೀಡಿದ ಉತ್ತರದ ಸಾರಾಂಶ ಹೀಗಿದೆ: "ಒಳ್ಳೆಯದು. ನಾನು ಆ ಪ್ರಕಾರ ಸರಿಯಾದ ಉತ್ತರ ಹೇಳಿದ ಪಕ್ಷದಲ್ಲಿ, ತಾವು ಇಸ್ಲಾಂ ಧರ್ಮವನ್ನು ಸ್ವೀಕರಿಸುವುದಾಗಿ ಕ್ರೈಸ್ತರ ಒಂದು ಪ್ರತಿನಿಧಿ ಸಂಘ ಪ್ರತಿಜ್ಞೆ ಮಾಡುವುದಾದರೆ, ನಾನು ನಿಮ್ಮ ಬೇಡಿಕೆಗೆ ಒಪ್ಪುವೆನು. ಇದಕ್ಕೆ ಸಿದ್ಧವಿಲ್ಲದಿದ್ದರೆ, ತಿಳಿದುಕೊಳ್ಳಿರಿ: ದೇವರು ಜನರ ಇಷ್ಟದಂತೆ ಅದ್ಭುತವನ್ನು ತೋರಿಸಿಕೊಡುವ ಒಬ್ಬ ಆಟಗಾರನಲ್ಲ."

ದಿವ್ಯದರ್ಶನವು ದೈವಾಸ್ತಿತ್ವವನ್ನು ಸಾಬೀತುಪಡಿಸಲು ಯುಕ್ತವಾದೊಂದು ಸಾಕ್ಷ್ಯವಲ್ಲವೆಂದು ತೋರಿಸಲು ಹೇಳಲ್ಪಡುವ ನಾಲ್ಕನೆಯ ಆಕ್ಷೇಪಣೆಯು, ಮತವಾದಿಗಳು ವ್ರತ, ಪ್ರಾಣಾಯಾಮ ಮೊದಲಾದ ಕೆಲವು ಯೋಗನಿಷ್ಠೆಗಳನ್ನು ದೇವಸಾಕ್ಷಾತ್ಕಾರಕ್ಕಿರುವ ಕ್ರಮಗಳಾಗಿ ನಿಶ್ಚಯಿಸಿರುವರೆಂಬುದಾಗಿದೆ. ದೇವದರ್ಶನವನ್ನು ಅನುಭವಪಡಿಸುವುದಕ್ಕೆ ಅಭ್ಯಸಿಸಲ್ಪಡುವ ಈ ವಿಧ ತೀವ್ರ ಕರ್ಮಗಳ ನಿಮಿತ್ತ ಅನುಷ್ಠಾನಿಗಳ ದರ್ಶನ, ಶ್ರವಣ, ಪ್ರಜ್ಞೆ ಮುಂತಾದ ಶಕ್ತಿಗಳಿಗೆ ಒಂದು ತರದ ಮಾರ್ಪಾಟೇ ಸಂಭವಿಸುವುದು. ಈ ಬದಲಾವಣೆ ಆರೋಗ್ಯಪೂರ್ಣವಾದುದಲ್ಲ; ಒಂದು ರೀತಿಯ ಪೀಡಿತಾವಸ್ಥೆ ಮಾತ್ರವಾಗಿದೆ. ರೋಗವಿರುವ ಕಾಲದ ಕಾಣುವಿಕೆ ಮತ್ತು ಕೇಳುವಿಕೆಗಿಂತ ಆರೋಗ್ಯ ಕಾಲದ ಕಾಣುವಿಕೆ ಮತ್ತು ಕೇಳುವಿಕೆ ಹೆಚ್ಚು ಗುಣಕರವಾಗಿರುತ್ತವೆ.

ಸಾಮಾನ್ಯ ಅವಸ್ಥೆಯಲ್ಲಿರುವ ಪ್ರಜ್ಞೆಗೆ ಹೋಲಿಸಿದರೆ, ಮನುಷ್ಯನ ಇಂದ್ರಿಯಗಳನ್ನು ದುರುಪಯೋಗಪಡಿಸಿ ದುದರ ಫಲವಾಗಿ ಮಾರ್ಪಾಟು ಹೊಂದಿದ ಪ್ರಜ್ಞೆ ವಿಶ್ವಾಸಯೋಗ್ಯವಾದ ನೆಲೆಯಲ್ಲಿರುವುದಿಲ್ಲ. ಇದಾಗಿದೆ ಪ್ರಸ್ತುತ ಆಕ್ಷೇಪಣೆಯ ಸಾರ.

ಈ ಆಕ್ಷೇಪಣೆಯಲ್ಲಿ ಹೇಳಲಾದ ಸಂಗತಿಗಳೆಲ್ಲ ಸರಿಯೇ. ಎಂದರೆ, ಮನುಷ್ಯನ ದರ್ಶನ ಶಕ್ತಿಯನ್ನು ವಿಕಾರಗೊಳಿಸುವ ಅಭ್ಯಾಸಗಳ ಮೂಲಕ ಕಾಣಲ್ಪಡುವ ದೃಶ್ಯ ಬರೇ ಒಂದು ತೋಚುವಿಕೆ ಮಾತ್ರವಾಗಿರುವು ದೆಂದು ನಾವು ಸಹ ಹೇಳುತ್ತೇವೆ. ದರ್ಶನ ಶಕ್ತಿಗೆ ಹೀಗಿರುವ ವಿಕಾರವೇನೂ ಸಂಭವಿಸದಿರುವ ಸಾಮಾನ್ಯ ಸ್ಥಿತಿಯಲ್ಲಿ ಕಾಣಲಾಗುವ ನೋಟ ದೋಷರಹಿತವಾಗಿ ರುತ್ತದೆ. ಯೋಗಾಭ್ಯಾಸ, ಪ್ರಾಣಾಯಾಮ ಮೊದ ಲಾದ ತೀವ್ರ ಕರ್ಮಗಳನ್ನು ಅನುಷ್ಠಿಸುವವರಿಗೆ ಕಾಣ ಲ್ಪಡುವ ದೃಶ್ಯಗಳು ಬರೇ ತೋಚುವಿಕೆಯಾದುದರಿಂದ ಅವು ದೈವಜ್ಞಾನ ಲಬ್ಧಿಗಿರುವ ಮಾರ್ಗಗಳಲ್ಲವೆಂದೇ ನಾವು ಸಹ ಹೇಳುತ್ತೇವೆ. ಇಂತಹ ಅಭ್ಯಾಸಗಳು ಮನ ಸ್ಸನ್ನು ದಣಿಸುವಂತಹವೂ ಮನಸ್ಸಿನ ದಣಿದ ಅವಸ್ಥೆ ಯಲ್ಲಿ ಉಂಟಾಗುವ ತೋರಿಕೆಗಳು ಆ ದಣಿವಿನ ಫಲ ದಿಂದುಂಟಾದುವೆಂದೂ ಹೇಳುವುದರಲ್ಲಿ ತಪ್ಪಿಲ್ಲ. ಹೆಚ್ಚೆಂದರೆ ಈ ವಿಧ ತೋರಿಕೆಯ ಬಗ್ಗೆ ಹೀಗೆ ಹೇಳ ಬಹುದು: ಎಂದರೆ, ಅವು ಈ ಭೌತಲೋಕದಲ್ಲಿ ಸಂಭವಿ ಸುವ ಅತ್ಯಂತ ಸೂಕ್ಷ್ಮವಾದ ಕೆಲವು ಕಾರ್ಯಗಳು ಮಾನಸಿಕಾಭ್ಯಸನದಿಂದ ತೀಕ್ಷ್ಣತೆ ಪಡೆದ ಪ್ರಜ್ಞೇಂದ್ರಿ ಗಳಿಗೆ ವಿಷಯೀಭವಿಸುವುದರ ಫಲಗಳಾಗಿರಬಹುದು. ಸಂಮೋಹಿನಿ ವಿದ್ಯೆಯಿಂದ ಒಬ್ಬನಿಗೆ ತಾನಿರುವ ಸ್ಥಳದ ಹತ್ತಿರದ ಕೋಣೆಯಲ್ಲಿ ಒಂದು ಸೂಜಿ ಬೀಳುವ ಶಬ್ದ ಕೂಡ ಆಲಿಸಲು ಸಾಧ್ಯವಿದೆಯೆಂದು ಹೇಳಲಾಗುತ್ತದೆ. ಇದು ಶರೀರದಲ್ಲಿ ಕೆಲವು ಮಾರ್ಪಾ ಟುಗಳನ್ನು ಉಂಟುಮಾಡುವುದರಿಂದ ಪ್ರಜ್ಞೇಂದ್ರಿಗಳಿಗೆ ಲಭಿಸುವ ತೀಕ್ಷ್ಣತೆಗಳ ಫಲವೆಂದು ಹೇಳಬಹುದು. ಯೋಗಾಭ್ಯಾಸ ಮುಂತಾದ ಅನುಷ್ಠಾನಗಳಿಂದ ಇಂತಹ ಮಾರ್ಪಾಟು ಸಂಭವಿಸುತ್ತಿರಬಹುದು. ಆದರೆ ಅವ್ಯಾವು ದನ್ನೂ ದಿವ್ಯದರ್ಶನವೆಂದು ಹೇಳಲಾಗದು. ಒಟ್ಟಾರೆ, ಇಂತಹ ಅನುಷ್ಠಾನಫಲದಿಂದಾಗುವ ದೃಶ್ಯಗಳು ಬರೇ ತೋಚುವಿಕೆಗಳೆಂಬ ಆಕ್ಷೇಪಣೆ ಸಾಕ್ಷಾತ್ ದಿವ್ಯದರ್ಶನ ವಾದಕ್ಕೆ ಅನ್ವಯಿಸುವುದಿಲ್ಲ. ಏಕೆಂದರೆ, ಆ ಬಗೆಯ ದೃಶ್ಯಗಳು ದೇವರ ಅನುಗ್ರಹದಾನಗಳೆಂದಾಗಲಿ ಇಂತಹ ಉಗ್ರಕರ್ಮಗಳ ಮೂಲಕ ದೇವಪ್ರಾಪ್ತಿಯಾಗುವು ದೆಂದಾಗಲಿ ನಾವು ಹೇಳುವುದಿಲ್ಲ. ಪ್ರವಾದಿಗಳ ಧ್ಯಾನ ನಿಷ್ಠೆ ಮೊದಲಾದ ಕರ್ಮಗಳು ಪರಿಮಿತವಾಗಿರುತ್ತವೆ. ಅವರು ಒಂದು ಕ್ಲಪ್ತಕಾಲದ ವರೆಗೆ ವ್ರತವನ್ನನುಷ್ಠಿಸು ವರಾದರೂ ಯೋಗಾಭ್ಯಾಸಿಗಳಂತೆ ನಿರಂತರ ವ್ರತವನ್ನ ನುಷ್ಠಿಸಿ ಶರೀರವನ್ನು ದಂಡಿಸುವುದಿಲ್ಲ. ದಿವ್ಯಾನುಭೂತಿ ಯನ್ನು ಗಳಿಸುವ ಮಾರ್ಗ ಈ ವಿಧ ಕಠಿಣ ಅನುಷ್ಠಾನ ಮಾತ್ರವೆಂದಾದ ಪಕ್ಷದಲ್ಲಿ, ಧರ್ಮೋಪದೇಶ ಆದರ ಕುರಿತು ಮಾತ್ರವಾಗಿರಬೇಕಾಗಿದೆ. ಇಸ್ಲಾಂ ಧರ್ಮದ ವಿಚಾರಯುತ ಆಜ್ಞೆಗಳಲ್ಲಿ ಇಂತಹ ಕರ್ಮಗಳ ಕುರಿತು ಹೇಳಿರುವುದಾದರೂ ಅವು ಸುಲಭೆದಲ್ಲಿ ಅನುಷ್ಠಿಸಾವ ತರದಲ್ಲಿ ಅವುಗಳಿಗೆ ಕೆಲವು ವ್ಯವಸ್ಥೆಗಳನ್ನೂ ಸೀಮೆ ಗಳನ್ನೂ ನಿರ್ದೇಶಿಸಿದೆ. ಸದಾ ವ್ರತಾನುಷ್ಠಾನ ಮಾಡಿ ಧ್ಯಾನನಿಷ್ಠೆಯಲ್ಲಿದ್ದುಕೊಂಡು ಐಹಿಕ ಸುಖಗಳನ್ನೆಲ್ಲಾ ತ್ಯಜಿಸಿ ಶರೀರಕ್ಕೆ ಹಿಂಸೆ ಕೊಡುವುದನ್ನು ಇಸ್ಲಾಂ ವಿರೋಧಿಸುತ್ತದೆ. ಅದು ಉಪವಾಸ, ಪ್ರಾರ್ಥನೆ ಮೊದಲಾದ ಕರ್ಮಾನುಷ್ಠಾನಗಳನ್ನು ವಿಧಿಸಿದುದರ ಜೊತೆಯಲ್ಲೇ ಅವುಗಳ ಅನುಷ್ಠಾನ ಕಾರ್ಯದಲ್ಲಿ ಕೆಲವು ಸೀಮೆಗಳನ್ನು ನಿಶ್ಚಯಿಸಿ ಆ ಸೀಮೆಗಳನ್ನು ಉಲ್ಲಂಘಿಸ ಬಾರದೆಂದೂ ಆ ಕರ್ಮಗಳಲ್ಲೇ ಸ್ವಯಂ ವಿಸ್ಮೃತರಾಗಿ ಮಗ್ನರಾಗಬಾರದೆಂದೂ ಉಪದೇಶಿಸಿದೆ. ಪ್ರಾರ್ಥನಾ ಕರ್ಮ ಒಂದೇ ಒಂದು ರೀತಿಯ ಶರೀರ ವಿನ್ಯಾಸದಿಂದ ಅನುಷ್ಠಿಸದೆ ನಿಲ್ಲುವುದು, ಬಾಗುವುದು, ಕುಳಿತುಕೊಳ್ಳು ವುದು ಮೊದಲಾದ ವಿವಿಧ ಶರೀರ ಚಲನೆಗಳನ್ನು ಮಾಡುವರೆ ಆದೇಶಿಸಿರುವುದರಲ್ಲಿ ಅಡಕವಾಗಿರುವ ಒಂದು ಉದ್ದೇಶವು ತದನುಷ್ಠಾನಿಗಳು ಆ ಕರ್ಮದಲ್ಲಿ ಸ್ವಯಂ ವಿಸ್ಮೃತರಾಗಿ ಮಗ್ನರಾಗಬಾರದೆಂದೇ ಆಗಿದೆ.

ಸಂಕ್ಷಿಪ್ತವಾಗಿ, ಮೇಲೆ ಹೇಳಿದಂತಹ ಅಭ್ಯಾಸ ಇತ್ಯಾದಿಗಳು ಮನಃಸಂಸ್ಕರಣಕ್ಕೆ ಸಾಕಷ್ಟು ಉಪಯುಕ್ತ ವಾಗುವುವಾದರೂ ಅವು ದೇವ ಪ್ರಾಪ್ತಿಗಿರುವ ಮಾರ್ಗ ಗಳೆಂದಾಗಲಿ ಅವುಗಳ ಫಲದಿಂದುಂಟಾಗುವ ತೋರಿಕೆ ದಿವ್ಯದರ್ಶನವೆಂದಾಗಲಿ ಹೇಳಲಾಗದು. ದಿವ್ಯ

# ಹಿಂದುಗಳೂ ಪ್ರಾಣಿಹಿಂಸೆಯೂ

★ ಎನ್. ಕೆ. ದಾಮೋದರನ್

ಕೆಲವು ಹಿಂದುಗಳು "ಅಹಿಂಸೋ ಪರಮೋ ಧರ್ಮಃ" ಎಂದು ಘೋಷಿಸುತ್ತಾ, ಅವರ ಸನಾತನವಾದ ಹಿಂದೂ ಧರ್ಮದಲ್ಲಿ ಹಿಂಸೆಯೆಂಬುದೇ ಇಲ್ಲವೆಂದೂ ಅಹಿಂಸಾ ಧರ್ಮವನ್ನು ಲೋಕದ ಮುಂದಿರಿಸಿದುದು ಸಹ ಅವರೆಂದೂ ಹೇಳುತ್ತಿದ್ದಾರೆ. ಅವರ ಈ ವಾದ ಸರಿಯೇ ?

ಭಾರತದ ಆದಿಕಾಲೀನ ಚರಿತ್ರೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಹಿಂದುಗಳು ಅಹಿಂಸಾವಾದಿಗಳೆಂದು ಹೇಳಲು ತಕ್ಕುದಾದ ಸಾಕ್ಷ್ಯಗಳು ದೊರೆಯುವುದಿಲ್ಲ. ವೇದಕಾಲದಲ್ಲಿ ಪಂಚನದಿಗಳ ತೀರದಲ್ಲಿ ವಾಸಿಸುತ್ತಿದ್ದ ಹಿಂದುಗಳ ಪ್ರಧಾನ ಆಹಾರ ಮಾಂಸವಾಗಿತ್ತು. ಹಸು, ಎತ್ತು, ಕೋಣ ಇವುಗಳ ಮಾಂಸವನ್ನು ಪಾಕಮಾಡುವ ರೀತಿಯನ್ನು ಸವಿಸ್ತಾರವಾಗಿ ಋಗ್ವೇದದಲ್ಲಿ ಪ್ರತಿಪಾದಿಸಲಾಗಿದೆ. ಜೋಳ, ಗೋಧಿ ಮೊದಲಾದುವುಗಳನ್ನು ಅರೆದು ಮಾಡುವ ತಿಂಡಿಗಳೂ ಮೊಸರು, ಬೆಣ್ಣೆಗಳೂ ತಿನ್ನುವ ಪದಾರ್ಥಗಳಾಗಿದ್ದರೂ ಮಾಂಸಾಹಾರವನ್ನು ಉತ್ತಮವೆಂದು ಅವರು ಗ್ರಹಿಸಿದ್ದರು. "ಏತದ್ ಉಹ ವೈಪರಮಂ ಅನ್ನಾದ್ಯಂ ಯನ್ಮಾಂಸಂ" (ಸತ್ಯ ಹೇಳುವುದಾದರೆ ಮಾಂಸವೇ ಉತ್ತಮ ಆಹಾರ) ಎಂದು "ಶತಪಥ ಬ್ರಾಹ್ಮಣ"ದ ಸೂಕ್ತವು ಸಾಕ್ಷ್ಯ ವಹಿಸುತ್ತದೆ. ಬೃಹದಾರಣ್ಯಕೋಪನಿಷತ್ ಉಪದೇಶಿಸುವುದು ಈ ರೀತಿಯಾಗಿದೆ: "ವಿದುಷಿಯೂ ಆಯುಷ್ಮತಿಯೂ ಆಗಿರುವ ಪುತ್ರಿ ಜನಿಸಬೇಕೆಂದು ಆಶಿಸುವವರು ಅನ್ನದಲ್ಲಿ ಎಳ್ಳನ್ನೂ ಬೆಣ್ಣೆಯನ್ನೂ ಸೇರಿಸಿ ತಿನ್ನಬೇಕು". "ವಿದ್ಯಾಸಂಪನ್ನನೂ ಪ್ರಸಿದ್ಧನೂ ದೀರ್ಘಾಯುಷ್ಯವಂತನೂ ವಾಗ್ಮಿಯೂ ಆಗಿರುವ ಪುತ್ರನು ಜನಿಸಬೇಕೆಂದು ಅಭಿಲಾಷೆಯುಳ್ಳವರು ಅನ್ನವನ್ನೂ ಎತ್ತಿನ ಮಾಂಸವನ್ನೂ ಬೆಣ್ಣೆಯನ್ನೂ ಸೇರಿಸಿ ತಿನ್ನಬೇಕು". ಈ ಉಪದೇಶಗಳೂ ಸನಾತನ ಹಿಂದುಗಳ ಮಾಂಸಾಹಾರವನ್ನು ಸಾದರಪಡಿಸುತ್ತವೆ. ಪ್ರಾಣಿಗಳನ್ನು ಆಹಾರಕ್ಕಾಗಿ ಕೊಲ್ಲುವುದು ಅವರ ದೈನಂದಿನ ಜೀವನದ ಒಂದು ಭಾಗವಾಗಿತ್ತು. ನಾವು ತಿನ್ನಲು ನಿಷಿದ್ಧವೆಂದು ಗ್ರಹಿಸಿರುವ ಆನೆ, ಕತ್ತೆ, ಕುದುರೆ, ಸಿಂಹ, ನಾಯಿ ಮೊದಲಾದುವುಗಳನ್ನು ಸಹ ಆರ್ಯರು ತಿನ್ನಲಿಕ್ಕಾಗಿ ಕೊಲ್ಲುತ್ತಿದ್ದರು. ಈ ವಾಸ್ತವಿಕ ಸಂಗತಿ

---

(ಹತ್ತನೆಯ ಪುಟದಿಂದ)

ದರ್ಶನವು ದೇವರ ಕರುಣೆಯಿಂದ ಲಭಿಸುವ ಒಂದು ಅನುಗ್ರಹದಾನವಾಗಿದೆ. ಅಭ್ಯಾಸಗಳಿಂದ ದೇವದರ್ಶನ ಸಾಧ್ಯವಾಗಬಹುದೆಂದು ಹೇಳುವುದು ಮದ್ಯ, ಗಾಂಜಾ, ಅಫೀಮು, ಮುಂತಾದ ಮಾದಕ ಪದಾರ್ಥಗಳನ್ನು ಸೇವಿಸುವವರಿಗೆ ಉಂಟಾಗುವ ತೋರಿಕೆ ದೇವದರ್ಶನವೆಂದು ಭಾವಿಸಿ ಅದಕ್ಕೋಸ್ಕರ ಈ ಮಾದಕ ವಸ್ತುಗಳನ್ನು ಸೇವಿಸಬೇಕೆಂದು ಹೇಳುವುದಕ್ಕೆ ಸಮಾನವಾಗಿದೆ. ಆದರೆ ಈ ಬಗೆಯ ದರ್ಶನಗಳಿಗೆ ಪ್ರವಾದಿಗಳ ಸಾಕ್ಷಾತ್ ದಿವ್ಯದರ್ಶನದೊಂದಿಗೆ ಯಾವುದೇ ಸಂಬಂಧವಿಲ್ಲ. ಆ ಪುಣ್ಯಪುರುಷರಿಗುಂಟಾಗುವ ದರ್ಶನ ಪ್ರಜ್ಞೇಂದ್ರಿಯಗಳನ್ನು ವಿಕಾರಗೊಳಿಸಿದುದರ ಫಲದಿಂದ ಉಂಟಾದುದು ಕೂಡ ಅಲ್ಲ. ಮಾತ್ರವಲ್ಲ, ಆ ಅನುಭವವು ಅಧಿಕಾರಬಲವೂ ಇಚ್ಛಾಶಕ್ತಿಯೂ ಇರುವವನಿಂದಿರುವುದೆಂಬುದಕ್ಕೆ ಸ್ವಯಂ ಪುರಾವೆ ಅಡಕವಾಗಿರುವಂತಹದ್ದೂ ಬಾಹ್ಯ ಸಂಭವಗಳಿಂದ ಸಾಕ್ಷೀಕರಿಸಲ್ಪಡುವಂತಹದ್ದೂ ಆಗಿದೆ. ಅಂತಹ ಅನುಭವವು ಈ ಜಗತ್ತಿಗೆ ಸರ್ವಾಧಿಕಾರಿಯಾಗಿ, ಇಚ್ಛಾನುಸಾರ ವರ್ತಿಸಲಿಕ್ಕೆ ಸರ್ವರೀತಿಯಲ್ಲಿಯೂ ಸ್ವತಂತ್ರನಾಗಿ, ಸರ್ವಶಕ್ತನಾಗಿ ಬಾಳುವ ಓರ್ವ ನಿಯಾಮಕನಿರುವನೆಂದೂ ಅವನು ತನ್ನ ಇಷ್ಟದಾಸರಿಗೆ ತನ್ನ ಕುರಿತು ಅರಿವು ನೀಡುತ್ತಾನೆಂಬುದಕ್ಕೂ ಅತ್ಯಂತ ಬಲವತ್ತಾದ ಒಂದು ಸಾಕ್ಷ್ಯವಾಗಿದೆ. ★

ಯನ್ನು ತಿಳಿಯುವಾಗ ಮಾಂಸಭಕ್ಷಣವನ್ನು ನಿಷಿದ್ಧವೆಂದು ಗ್ರಹಿಸಿರುವವರು ಆಶ್ಚರ್ಯಚಕಿತರಾಗುವುದು ಸ್ವಾಭಾವಿಕವಾಗಿದೆ. ಆದರೆ ಮಹಾಪಂಡಿತರಾದ ಡಾಕ್ಟರ್ ರಾಜೇಂದ್ರಲಾಲ್ ಮಿತ್ರ ಎಲ್.ಎಲ್.ಡಿ. ತನ್ನ ಇಂಡೋ ಆರ್ಯನ್ಸ್ (Indo Aryans) ಎಂಬ ಗ್ರಂಥದಲ್ಲಿ ಸೂಚಿಸಿರುವ ಹಾಗೆ ಈ ವಾಸ್ತವಿಕತೆ ಪ್ರಬಲವಾದ ಸಾಕ್ಷ್ಯಗಳಿಂದ ಸಾಬೀತಾದುದೂ ಯಾವುದೇ ರೀತಿಯಲ್ಲಿ ನಿಷೇಧಿಸಲು ಅಸಾಧ್ಯವಾದುದೂ ಆಗಿದೆ.

ಒಬ್ಬ ಅತಿಥಿ ಮನೆಗೆ ಬಂದರೆ ಆತನಿಗೆ ಆದರವನ್ನು ಸೂಚಿಸಲಿಕ್ಕಾಗಿ ಗೋಮಾಂಸದ ಅಡುಗೆಯನ್ನು ಮಾಡಿ ಆತನಿಗೆ ಬಡಿಸುವುದು ಪುರಾತನವಾದ ಒಂದು ಅತಿಥಿ ಸತ್ಕಾರ ಕ್ರಮವಾಗಿದ್ದಿತ್ತು. ರಾಜನೋ ಪೂಜ್ಯನಾದ ಅತಿಥಿಯೋ ಬರುವಾಗ ಎತ್ತನ್ನೋ ಗರ್ಭವಿಲ್ಲದ ಹಸುವನ್ನೋ ಕೊಂದು ಆಹಾರ ಸಿದ್ಧಪಡಿಸಿ ಉಣಬಡಿಸಬೇಕೆಂದು "ಐತ್ತರೇಯ ಬ್ರಾಹ್ಮಣ"ದಲ್ಲಿ ಹೇಳಲಾಗಿದೆ. ಅತಿಥಿಯ ಆಗಮನದಿಂದ ಗೋವಧೆ ಸಂಭವಿಸುವುದರಿಂದ ಅತಿಥಿಯನ್ನು "ಗೋಘ್ನ" ಎಂದರೆ (ಪಶುವನ್ನು ಕೊಲ್ಲುವವ) ಎಂಬ ಉಪನಾಮದಿಂದ ಕರೆಯಲಾಗುತ್ತಿತ್ತು. The Vicissitudes of Aryan Civilisation in India (ಭಾರತದ ಆರ್ಯನಾಗರಿಕತೆಯ ಪರಿವರ್ತನೆಗಳು) ಎಂಬ ಗ್ರಂಥದ ಲೇಖಕ ಮಿ। ಕುನ್ನೇ ಬಿ. ಎ. ಈ ರೀತಿ ಬರೆದಿರುತ್ತಾರೆ:

"ಪ್ರಾಚೀನ ಭಾರತೀಯರಿಗೆ ಆತಿಥ್ಯವೆಂಬುದು ಒಂದು ನಿತ್ಯಕರ್ಮವಾಗಿತ್ತು. ಬಹಳ ಆಡಂಬರದೊಂದಿಗೆ ಅತಿಥಿಗಳನ್ನು ಸತ್ಕರಿಸಲಾಗುತ್ತಿತ್ತು. ಅವರಿಗೆ ಬೇಕಾಗಿ ಹೆಚ್ಚಾಗಿ ಹಸುಗಳನ್ನು ಕೊಲ್ಲಲಾಗುತ್ತಿತ್ತು. ವಾಲ್ಮೀಕಿ ಮಹರ್ಷಿಯ ಆಶ್ರಮಕ್ಕೆ ವಸಿಷ್ಠಮಹರ್ಷಿ ಬಂದಾಗ ಪುಷ್ಟಿಯಾದ ಕರುಗಳನ್ನು ಅತಿಥಿ ಸತ್ಕಾರಕ್ಕಾಗಿ ಕೊಂದುದಾಗಿ ಭವಭೂತಿಯ "ಉತ್ತರರಾಮಚರಿತ್ರೆ"ಯಲ್ಲಿ ಬರೆಯಲಾಗಿದೆ. ಇದೇ ಪ್ರಕಾರ ವಿಶ್ವಾಮಿತ್ರ, ಜನಕ, ಶತಾನಂದ ಮೊದಲಾದವರನ್ನು ಸತ್ಕರಿಸಲಿಕ್ಕಾಗಿ ಕೊಬ್ಬಿದ ಕರುಗಳನ್ನು ವಸಿಷ್ಠನೂ ಕೊಂದುದಾಗಿ ಬರೆಯಲಾಗಿದೆ.

ಆರ್ಯರು ತಮ್ಮ ಶವವನ್ನು ಚಿತೆಗರ್ಪಿಸುವಾಗ ಶವದ ಜೊತೆ ಇನ್ನಿತರ ವಸ್ತುಗಳೊಂದಿಗೆ ಒಂದು ಪಶುವನ್ನೂ ಸಹ ದಹಿಸುತ್ತಿದ್ದರು. ಅವರು ಗೋಮಾಂಸ ಭಕ್ಷಣೆಗೆ ನೀಡುತ್ತಿದ್ದ ಪ್ರಾಮುಖ್ಯತೆಯನ್ನು ಗಮನಿಸಿದರೆ ಈ ಸಂಗತಿ ಆಶ್ಚರ್ಯಕರವಲ್ಲ.

ಹಸು, ಎತ್ತು, ಕೋಣ ಮೊದಲಾದುವುಗಳನ್ನು ಸಂಹರಿಸಿ ಮಾಡುವ ಅನೇಕ ಯಾಗಗಳ ಕುರಿತು ವೇದಗಳಲ್ಲಿ ವಿವರಿಸಲಾಗಿದೆ. ಯಜುರ್ವೇದದ "ತೈತ್ತರೇಯ ಬ್ರಾಹ್ಮಣ"ದಲ್ಲಿ ಒಬ್ಬೊಬ್ಬ ದೇವತೆಗೆ ಬೇಕಾಗಿ ಕೊಲ್ಲಬೇಕಾದ ಗೋವುಗಳ ಲಕ್ಷಣಗಳನ್ನು ಈ ಪ್ರಕಾರವಾಗಿ ನೀಡಲಾಗಿದೆ:

ಇಂದ್ರನಿಗೆ ಬಲಿಷ್ಠವಾದ ಕಾಲುಗಳುಳ್ಳ ಗೋವು, ವಿಷ್ಣುವಿಗೂ ವರುಣನಿಗೂ ಬಂಜೆಗೋವು, ಪೂಷನ್‌ನಿಗೆ ಕಪ್ಪು ಹಸು, ವಾಯುವಿಗೆ ಒಮ್ಮೆ ಮಾತ್ರ ಕರುಹಾಕಿದ ಹಸು, ಮಿತ್ರಾನಿಗೂ ವರುಣನಿಗೂ ಎರಡು ಬಣ್ಣಗಳಿರುವ ಹಸು, ರುದ್ರನಿಗೆ ಕೆಂಪು ಹಸು, ಸೂರ್ಯನಿಗೆ ಬಿಳಿ ಬಂಜೆ ಹಸು ಇತ್ಯಾದಿ. ಅದೇ ಗ್ರಂಥದಲ್ಲಿ ಈ ದೇವತೆಗಳಿಗೆ ಬಲಿಯಾಗಿ ನೀಡಬೇಕಾದ ಎತ್ತುಗಳ ಮೈಬಣ್ಣಗಳ ವಿವರ ಸಹ ಇದೆ.

ಹಿಂದಿನ ಕಾಲದಲ್ಲಿ ವಿವಿಧ ರೀತಿಯ ಯಾಗಗಳನ್ನು ಹಿಂದುಗಳು ಮಾಡುತ್ತಿದ್ದರು. ಐದು ವರ್ಷಗಳಿಗೊಮ್ಮೆ ಮಾಡುತ್ತಿದ್ದ ಒಂದು ಮಹಾಯಾಗದ ಹೆಸರು 'ಪಂಚಶರದೀಯಸವಂ' ಎಂದಾಗಿತ್ತು. "ದೊಡ್ಡ ಮನುಷ್ಯನಾಗಲು ಇಚ್ಛಿಸುವವನು ಪಂಚಶರದೀಯಸವಂ ಯಾಗ ನಡೆಸಲಿ. ಅವನು ದೊಡ್ಡ ಮನುಷ್ಯನಾಗುವನು" ಎಂದು ತೈತ್ತರೀಯ ಬ್ರಾಹ್ಮಣ ಹೇಳುತ್ತಿರುವ ಯಜ್ಞವನ್ನು ಮಾಡಲು ಎಳೆಪ್ರಾಯದ ಹದಿನೇಳು ಹಸುಗಳನ್ನು ಕೊಲ್ಲಲಾಗುತ್ತಿತ್ತು.

ವೈದಿಕ ಕಾಲದ ನಂತರ ಪ್ರಚಾರಕ್ಕೆ ಬಂದ ಒಂದು ಯಾಗವಾಗಿತ್ತು "ಅಶ್ವಮೇಧ". ಈ ಯಾಗ ನಡೆಸುವಾಗ 180 ಸಾಕುಮೃಗಗಳನ್ನು ಕುದುರೆಯೊಂದಿಗೆ ಕೊಲ್ಲಲಾಗುತ್ತಿತ್ತು. ಯಾಗದಲ್ಲಿ ಮೃಗಗಳನ್ನು ಕೊಲ್ಲಬೇಕಾದ ರೀತಿ ಸಹ ಋಗ್ವೇದದಲ್ಲಿ ವಿವರಿಸಲಾಗಿದೆ. ಯಜ್ಞದಲ್ಲಿ ಕೊಂದ ಮೃಗಗಳ ಮಾಂಸವನ್ನು ಯಾವ ರೀತಿ ಹಂಚಬೇಕೆಂದು ತೈತ್ತರೀಯ ಬ್ರಾಹ್ಮಣದಲ್ಲಿ ವಿವರಿಸಲಾಗಿದೆ. ಇದಲ್ಲದೆ ಆಥರ್ವಣ ವೇದದ "ಗೋಪಥ

ಬ್ರಾಹ್ಮಣ"ದಲ್ಲಿ ಹವಿರ್ಭಾಗ ಲಭಿಸಬೇಕಾದವರ ವಿವರವಾದ ಪಟ್ಟಿಯನ್ನು ನೀಡಲಾಗಿದೆ.

ಯಾಗದಲ್ಲಿ ನಡೆಸಲಾಗುವ ವಧೆಯ ಕುರಿತು ಮನು ಈ ರೀತಿ ಹೇಳಿರುವನು:

ಯಜ್ಞಾರ್ಥಂ ಬ್ರಾಹ್ಮಣೈರ್ವಧ್ಯಾಃ
ಪ್ರಶಸ್ತಾ ಮೃಗಪಕ್ಷಿಣಃ
ಭೃತ್ಯಾನಾಂಚೈವವೃತ್ಯರ್ಥಂ
ಅಗಸ್ತ್ಯೋಹ್ಯಾಚರಲ್‌ಪುರಾಃ

"ಬ್ರಾಹ್ಮಣರು ಯಾಗಕ್ಕಾಗಿ ಒಳ್ಳೆಯ ಮೃಗಗಳನ್ನೂ ಒಳ್ಳೆಯ ಪಕ್ಷಿಗಳನ್ನೂ ವಧಿಸಬೇಕು. ಭೃತ್ಯರ ವಯಸ್ಸಾದ ಮಾತಾಪಿತರ ಉಪಜೀವನಕ್ಕಾಗಿ ಅಗಸ್ತ್ಯನು ಸಹ ಹಿಂದೆ ಮೃಗವಧೆಯನ್ನು ಮಾಡಿದನು".

ಶಂಕರಾಚಾರ್ಯರಿಗೆ ಈ ವಿಷಯದಲ್ಲಿ ಯಾವುದೇ ಅಭಿಪ್ರಾಯ ವ್ಯತ್ಯಾಸವಿಲ್ಲ. ಅವರು ತನ್ನ "ಲಘು ಧರ್ಮ ಪ್ರಕಾಶಿಕ"ದಲ್ಲಿ ಈ ರೀತಿ ಹೇಳಿರುತ್ತಾರೆ:

ಕ್ರತ್ವಾರ್ಥಾಃ ಪಶವಃಪೂರ್ವಂ
ವಿಸೃಷ್ಟಾಃ ಪರಮೇಷ್ಟಿನಾ
ಕ್ರತು ಭೂತ್ಯೈಹಿ ತಿದ್ದೀಪ್ತಾಃ
ಕ್ರತೌ ತಸ್ಮಾದ್ವಧೋ ವಧಾಃ

"ಬ್ರಹ್ಮನು ಪಶುಗಳನ್ನು ಯಾಗಕ್ಕಾಗಿ ಸೃಷ್ಟಿಸಿರುವನು. ಆದುದರಿಂದ ಅದಕ್ಕಾಗಿ ಹಿಂಸೆ ಮಾಡುವುದರಲ್ಲಿ ವಿರೋಧವಿಲ್ಲ."

ಆರ್ಯರ ದೈನಂದಿನ ನಡವಳಿಕೆಗಳಲ್ಲೂ ಆಚಾರಗಳಲ್ಲಿಯೂ ಅವರ ವಿಶ್ವಾಸಾದರ್ಶಗಳ ಒಂದು ಚಿತ್ರ ಪ್ರತಿಬಿಂಬಿಸುತ್ತಿದೆಯೆಂಬುದರಲ್ಲಿ ಸಂಶಯವಿಲ್ಲ. ಆರ್ಯ ಜೀವಿತ ಕ್ರಮವನ್ನು ಅಧ್ಯಯನ ಮಾಡಿದರೆ ಪ್ರಾಣಿ ಹಿಂಸೆ ಅವರ ಜೀವಿತದ ಒಂದು ಸಾಮಾನ್ಯ ನಡವಳಿಕೆಯಾಗಿತ್ತೆಂಬುದು ಸ್ಪಷ್ಟವಾಗುತ್ತಿದೆ. ಆಹಾರಕ್ಕಾಗಿಯೂ ಯಾಗಗಳಿಗಾಗಿಯೂ ಅನೇಕ ಮೃಗಗಳನ್ನು ಅವರು ದಿನಂಪ್ರತಿ ವಧಿಸುತ್ತಿದ್ದರೆಂಬುದರಲ್ಲಿ ಯಾವುದೇ ಸಂಶಯವಿಲ್ಲ.

(ಮಲೆಯಾಳ ಭಾಷೆಯ **"ನವಜೀವನ್"** ಪತ್ರಿಕೆಯಿಂದ ಸಂಗ್ರಹಿತ. ಸಂಗ್ರಹ: **ಎಂ. ಉಬೈದುಲ್ಲಾ**)


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು : 48 ಬೆಲೆ : **ಒಂದು ರೂಪಾಯಿ** ಅಂಚೆ ವೆಚ್ಚ : **ಉಚಿತ**

ಬರೆಯಿರಿ : Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

ಇಸ್ಲಾಂ ಮತ್ತು ವಿಜ್ಞಾನ* – 2

# ಇಸ್ಲಾಮಿನಲ್ಲಿ ವಿಜ್ಞಾನಕ್ಕೆ ಅವನತಿ ಹೇಗಾಯಿತು?

—ಡಾ। ಅಬ್ದುಸ್ಸಲಾಂ.

ಇಂದು ಜಗತ್ತಿನಲ್ಲಿ ವಿಜ್ಞಾನವು ಅತ್ಯಂತ ಅವನತಿಯ ಸ್ಥಿತಿಯಲ್ಲಿರುವುದು ಇಸ್ಲಾಮಿ ರಾಷ್ಟ್ರಗಳಲ್ಲಾಗಿದೆ. ನಮ್ಮಂತೆ ಕೆಲವು ಮುಸ್ಲಿಮರು ನಂಬುವುದೇನೆಂದರೆ ತಾಂತ್ರಿಕ ವಿದ್ಯೆ ಮೂಲಭೂತವಾಗಿ ನಿಷ್ಪಕ್ಷವೂ ವಿಜ್ಞಾನ ಮೌಲ್ಯನಿರ್ಭರಿತವೂ ಎಂದಾಗಿದೆ. ನಿಷ್ಪಕ್ಷವಾದ ತಾಂತ್ರಿಕ ವಿದ್ಯೆಯನ್ನು ಇಸ್ಲಾಮಿನ ನೈತಿಕ ಮೌಲ್ಯಗಳ ಮೂಲಕ ಕ್ರಮಬದ್ಧವಾಗಿಯೂ ಭದ್ರವಾಗಿಯೂ ಹಿಡಿದುಕೊಂಡು ಪಳಗಿಸಿ ತೆಗೆಯಬಹುದೆಂದೂ ನಾವು ಕೆಲವರು ಭಾವಿಸುತ್ತೇವೆ. ಆಧುನಿಕ ವಿಜ್ಞಾನ "ವಿಚಾರ ಭದ್ರತೆ"ಯ ಕಡೆಗೆ ಹಾಗೂ ಅಂತಿಮವಾಗಿ ನಾಸ್ತಿಕತೆಯ ಕಡೆಗೆ ಮಾತ್ರವೇ ಕೊಂಡೊಯ್ಯಬಹುದೆಂದು ಸಾಮಾನ್ಯವಾಗಿ ಭಾವಿಸಲ್ಪಡುತ್ತದೆ. ಅರಿಸ್ಟೋಟಲ್ ಪ್ರಾಪಂಚಿಕ ನಿಯಮಗಳಲ್ಲಿ ವಿಚಾರ ರಹಿತವೂ ಅಸಹಿಷ್ಣುತಾಪರವೂ ಆದ ವಿಶ್ವಾಸವನ್ನರ್ಪಿಸಿದವರನ್ನು ವಿಚಾರಭದ್ರರೆಂದು ಸಹ ಕರೆಯಲ್ಪಡುವ ದಾರ್ಶನಿಕರು ಕಳೆದ ಕಾಲದಲ್ಲಿ ವೈಜ್ಞಾನಿಕ ಸತ್ಯವೂ ವಿಶ್ವಾಸವೂ ತಮ್ಮೊಳಗೆ ವೈರುಧ್ಯ ಕಂಡಾಗ ನಡೆಸಿದ ಯುದ್ಧಗಳ ಪಾರಂಪರ್ಯವಾಗಿಧ ನಾಸ್ತಿಕತೆಯೆಡೆಗೆ ವಿಜ್ಞಾನವು ಸಾಗಿಸುತ್ತದೆಂಬ ಭಾವನೆಗೆ ಆಧಾರವೆಂದು ನನಗೆ ತೋಚುತ್ತದೆ.

ಇದಕ್ಕಿಂತ ಭೀಕರವಾಗಿ ಇಂತಹ ಯುದ್ಧಗಳು ಮಧ್ಯ ಕಾಲಗಳಲ್ಲಿ ಕ್ರಿಸ್ತೀಯ ವಿಭಾಗಗಳೆಡೆಯಲ್ಲಿ ನಡೆದುದನ್ನು ನಾವು ಸ್ಮರಿಸಬೇಕು. ಮುಖ್ಯವಾಗಿ. ಪ್ರಾಪಂಚಿಕ ಶಾಸ್ತ್ರ ಮತ್ತು ಆಧಿಭೌತಿಕ ಶಾಸ್ತ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನಾಗಿತ್ತು ಕ್ರೈಸ್ತ ಗುಂಪುಗಳು ಎದುರಿಸಿದ್ದು. ಅಚಲವಾದ ಒಂದು ಸ್ಥಾನವೇ ಭೂಮಿಯ ಸ್ಥಿತಿ? ಪ್ರಪಂಚದ ಚಲನವಲನಗಳನ್ನು ನಿಯಂತ್ರಿಸುವುದು ಒಂದು ಶಕ್ತಿಯೋ ಒಂದಕ್ಕಿಂತ ಹೆಚ್ಚು ಶಕ್ತಿಗಳೋ? ಅಭೌಮವಾದ ಈ ನಿಯಂತ್ರಕ ಶಕ್ತಿಗಳಿಗೆ ಬಲಹೀನತೆಯಾಗಲಿ ದಣಿವಾಗಲಿ ಅನುಭವವಾಗುತ್ತದೆಯೇ? ಇವುಗಳಲ್ಲಿ ಭೌತಶಾಸ್ತ್ರದ ಸೀಮೆಯೊಳಗೆ ಸೇರುವ ಪ್ರಶ್ನೆಗಳನ್ನು ಬೇರ್ಪಡಿಸಿ ಭೌತಶಾಸ್ತ್ರದ ಪರೀಕ್ಷಣೆಗಳ ಮೂಲಕ ಅವುಗಳಿಗೆ ಪರಿಹಾರವನ್ನು ಕಾಣಲಿಕ್ಕೆ ಮೊತ್ತಮೊದಲಿಗೆ ಗಲೀಲಿಯೋ ಪ್ರಯತ್ನಿಸಿದಾಗ ಆತನು ಪೀಡನೆಗೆ ಗುರಿಯಾದನು. 18ನೇ ಶತಮಾನದ ತನಕವಾದರೂ ಇಟೆಲಿಯಲ್ಲಿ ವಿಜ್ಞಾನದ ಬೆಳವಣಿಗೆ ಕುಂಠಿತವಾಗಲು ಕಾರಣ ಗಲೀಲಿಯೋ ಅನುಭವಿಸಿದ ಪೀಡನೆಯೇ ಆಗಿದೆ. ಇಂದು ಸುಮಾರು 350 ವರ್ಷಗಳ ಬಳಿಕ ಆ ಪೀಡನೆಗೆ ಪ್ರತ್ಯಯಶಾಸ್ತ್ರಪರವಾದ ವಿಶದೀಕರಣಗಳನ್ನು ನೀಡಲು ಶ್ರಮಿಸಲಾಗುತ್ತದೆ.

1983 ಮೇ 9ರಂದು ವಟಿಕನ್‌ನಲ್ಲಿ ನಡೆದ ಒಂದು ವಿಶೇಷ ಸಮಾರಂಭದಲ್ಲಿ ಮಾರ್ಗೆಟ್ ಜೋನ್ ಪೌಲ್ ದ್ವಿತೀಯ ಹೇಳಿದರು: "ಗಲೀಲಿಯೋ ಸಂಭವದ ಸಮಯದ ಹಾಗೂ ಆದರ ನಂತರದ ಅನುಭವ ಹೆಚ್ಚಿನ ಪಕ್ವತೆಯನ್ನು ಹೊಂದಿದ ಒಂದು ಕ್ರಮವನ್ನು ಕೈಗೊಳ್ಳುವರೆ ಸಭೆಗೆ ಸಹಾಯವಾಯಿತು. ಸಂಶೋಧನೆಯ ಮೂಲಕ ಮನುಷ್ಯನು ಸತ್ಯವನ್ನು ಕಂಡುಕೊಳ್ಳುತ್ತಾನೆ. ಆದ್ದರಿಂದ ವಿಜ್ಞಾನವೂ ವಿಶ್ವಾಸವೂ ಪರಸ್ಪರ ಯಥಾರ್ಥದಲ್ಲಿ ವೈರುದ್ಧ್ಯವೇನೂ ಇಲ್ಲವೆಂದು ಸಭೆ ದೃಢವಾಗಿ ನಂಬುತ್ತದೆ. ಹೇಗಿದ್ದರೂ ಅತ್ಯಂತ ವಿನಯದಿಂದಲೂ ಅತ್ಯಾಸಕ್ತಿಯಿಂದಲೂ ಕೂಡಿದ ಅಧ್ಯಯನದಿಂದ ಒಂದು ಪ್ರತ್ಯೇಕ ಕಾಲಘಟ್ಟದ ಶಾಸ್ತ್ರ ಪದ್ಧತಿಗಳಿಂದ ನಂಬಿಕೆಯ ತಿರುಳನ್ನು ಬೇರ್ಪಡಿಸಿ ತೆಗೆಯಲು ಸಭೆ ಯತ್ನಿಸುತ್ತದೆ."

## ವಿಜ್ಞಾನದ ಪರಿಮಿತಿಗಳು

ಮೇಲಿನ ಉದ್ಧರಣದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿ ಸಭೆ ಕೈಗೊಂಡ ಪಕ್ವತೆಯ ಬಗ್ಗೆ ಪೋಪರು ಒತ್ತಿ

* ಮಾತೃಭೂಮಿ, ಮೇ 14–18, 1986

ಹೇಳಿದ್ದು ಕಂಡುಬಂತು. ಆದರೆ ಇಲ್ಲೊಂದು ವಿಚಾರ ವನ್ನು ನೆನಪಿಸಬೇಕು. ಇದಕ್ಕೆ ವಿರುದ್ಧವುಳ್ಳ ವಾದ ಗತಿಯ ಕುರಿತು ಸಹ ಪೋಪರು ಒತ್ತಿಹೇಳಬಹುದಿತ್ತು— ಗಲೀಲಿಯೋನ ನಂತರದ ವಿಜ್ಞಾನಿಗಳು ವಿಜ್ಞಾನದ ಪರಿ ಮಿತಿಗಳನ್ನು ಅಂಗೀಕರಿಸುತ್ತಾರೆಂಬ ವಸ್ತುಸ್ಥಿತಿಯಲ್ಲಿ. ಈಗ ಇರುವಂತಹ ಒಂದು ವೇಳೆ ಬರಲಿಕ್ಕಿರುವಂತಹ ವಿಜ್ಞಾನದ ಸೀಮೆಯ ಆಚೆ ಸಹ ಕೆಲವು ಸಮಸ್ಯೆಗಳಿವೆ ಯೆಂದೂ ಒಂದು ವಿಶೇಷ ತರದ ಸಂಶೋಧನೆಯಲ್ಲಿ ಮಾತ್ರ ಸ್ವಯಂ ಪರಿಕ್ಲುಪ್ತವಾಗಿದ್ದುಕೊಂಡು ವಿಜ್ಞಾನವು ವಿಜಯಹೊಂದಿದೆ ಎಂಬ ವಸ್ತುಸ್ಥಿತಿಯನ್ನು ಪೋಪರು ಬೊಟ್ಟುಮಾಡಿ ಹೇಳಬಹುದಿತ್ತು. ಈ ಕಿರುರೂಪದಲ್ಲಿ ಯೋಚಿಸುವಾಗಲೂ ಇಂದಿನ ವಿಜ್ಞಾನಿಗೆ ತಾನು ಯಾವಾಗ, ಎಲ್ಲಿ ಬರೇ ಊಹಾಪೋಹಗಳನ್ನು ಮಾತ್ರ ಅವಲಂಬಿಸುವನೆಂದು ಚೆನ್ನಾಗಿ ತಿಳಿಯಬಹುದು. ಅವುಗಳ ಮೂಲಕ ಲಭಿಸುವ ಫಲಗಳಿಗೆ ಅಂತಿಮವಾದ ಪರಿಪೂರ್ಣತೆಯನ್ನು ಆತನು ಬಯಸುವುದಿಲ್ಲ. ಭೌತ ಶಾಸ್ತ್ರದಲ್ಲಿ ಈ ಶತಮಾನದ ಆದಿಯಲ್ಲಿ ಎರಡು ಸಲ ಇದು ಸಂಭವಿಸಿತು – ಮೊದಲು ಸ್ಥಳಕಾಲಗಳ ಆಪೇಕ್ಷಿ ಕತೆ ಕಂಡುಹಿಡಿಯಲ್ಪಟ್ಟಾಗ ಮತ್ತು ನಂತರ ಕ್ವಾಂಟಂ ಸಿದ್ಧಾಂತ ಕಂಡುಹಿಡಿಯಲ್ಪಟ್ಟ ಸಂದರ್ಭದಲ್ಲಿ. ಇನ್ನೂ ಇದು ಸಂಭವಿಸಬಹುದು.

ಸ್ಥಳಕಾಲಗಳ ಕುರಿತು ಐನ್‌ಸ್ಟೈನನ ಅಭಿಪ್ರಾಯ ಗಳು ಭೌತಶಾಸ್ತ್ರಜ್ಞನ ಚಿಂತನೆಯಲ್ಲಿ ಒಂದು ಕ್ರಾಂತಿಗೆ ದಾರಿ ಮಾಡಿಕೊಟ್ಟಿತು. ಆ ಮೂಲಕ, ಭೌತಶಾಸ್ತ್ರದಲ್ಲಿ ಅಷ್ಟರ ತನಕವಿದ್ದ ಚಿಂತನಾಕ್ರಮಗಳನ್ನು ತೊರೆಯ ಬೇಕಾಯಿತು. ಇದನ್ನು ಹೇಳುವಾಗ, ನನ್ನನ್ನು ಸದಾ ಚಕಿತಗೊಳಿಸುವ ಒಂದು ವಿಷಯವನ್ನು ಹೇಳಬಹುದು: 19ನೇ ಶತಮಾನದ ಮತ್ತು ಅದಕ್ಕೆ ಪೂರ್ವದ ದಾರ್ಶ ನಿಕರು ಕಾಲದೇಶಗಳನ್ನು ತಮ್ಮ ಪ್ರತ್ಯೇಕ ಹಕ್ಕೆಂದು ಭಾವಿಸಿದ್ದರು. ಐನ್‌ಸ್ಟೈನನ ಸಿದ್ಧಾಂತವನ್ನು ಅವಲಂ ಬಿಸಿ ಇದುವರೆಗೆ ಯಾರೂ ಸಹ ಒಂದು ದಾರ್ಶನಿಕ ಪದ್ಧತಿಯನ್ನು ಏಕೆ ಎತ್ತಿಹಿಡಿಯಲಿಲ್ಲ ?

ನಾವು ಗಳಿಸಬಹುದಾದ ವಿಜ್ಞಾನಕ್ಕೆ ಪರಿಮಿತಿ ಗಳಿವೆಯೆಂದು 1926ರಲ್ಲಿ ಹೀಸನ್‌ಬರ್ಗ್ ಕಂಡುಹಿಡಿ ದಾಗ ಎರಡನೆಯ ಹಾಗೂ ಹೆಚ್ಚು ವಿಸ್ಫೋಟಕವಾದ ಚಿಂತನಾಕ್ರಾಂತಿ ಉಂಟಾಯಿತು. ಒಂದು ಮೇಜಿನ ಮೇಲೊಂದು ಇಲೆಕ್ಟ್ರೋನ್ ಇದೆಯೆಂದೂ ಅದು ಅಚಲವಾಗಿರುವುದೆಂದೂ ಅದನ್ನು ಭೌತಶಾಸ್ತ್ರ ಮಾನ ದಂಡದಿಂದ ಹೇಳಲು ಅಸಾಧ್ಯವೆಂದು ಹೀಸನ್‌ಬರ್ಗ್‌ನ ಅನಿಶ್ಚಿತತ್ವ ನಿಯಮ ಒತ್ತಿ ಹೇಳಿತು. ಇಲೆಕ್ಟ್ರೋನ್ ಎಲ್ಲಿರುವುದೆಂದು ಕಂಡುಹಿಡಿಯಲು ಪರೀಕ್ಷಣೆಗಳನ್ನು ನಡೆಸಬಹುದು. ಆದರೆ ಈ ಪರೀಕ್ಷಣೆಗಳು, ಅದೇ ಸಮಯದಲ್ಲೇ ಇಲೆಕ್ಟ್ರೋನ್ ಚಲಿಸುತ್ತದೆಯೇ ಎಂದೂ ಚಲಿಸುತ್ತಿರುವುದಾದರೆ ಎಷ್ಟು ವೇಗದಲ್ಲೆಂದೂ ಕಂಡು ಹಿಡಿಯುವ ಸಾಧ್ಯತೆಯನ್ನು ಬಲಗುಂದಿಸುತ್ತದೆ. ಬದಲು, ನಮ್ಮ ವಿಜ್ಞಾನಕ್ಕೆಯೇ ಅಂತರ್ಗತವಾದ ಪರಿಮಿತಿಗಳಿವೆಯೆಂದೂ "ಅದು ಹಾಗೆ ಆಗಬೇಕೆಂದೇ ವಿಧಿಸಲ್ಪಟ್ಟಿದೆ" ಎಂದೂ ಹೇಳಬಹುದು. ಮಧ್ಯಕಾಲ ಗಳಲ್ಲಿ ಹೀಸನ್‌ಬರ್ಗ್ ಜನಿಸಿರುತ್ತಿದ್ದರೆ ಆತನ ಗತಿ ಏನಾಗಿರುತ್ತಿತ್ತೆಂದು ಊಹಿಸಲಿಕ್ಕೆ ಕೂಡ ನಾನು ಹೆದರು ತ್ತೇನೆ. ದೇವರ ವಿಜ್ಞಾನಕ್ಕೆ ಸಹ ಹೀಗೆ ಒಂದು ಪರಿಮಿತಿ ಉಂಟೆಂದು ಅಂದು ಹೇಳಿದರೆ ಉಂಟಾಗುವ ದೇವಶಾಸ್ತ್ರ ಪರವಾದ ಹೋರಾಟಗಳು ಏನಾಗಿರಬಹುದು ?

ಎಷ್ಟಾದರೂ ಇಪ್ಪತ್ತನೆಯ ಶತಮಾನದ ಭೌತ ಶಾಸ್ತ್ರಜ್ಞರು ತಮ್ಮೊಳಗೆ ಮಾತ್ರವೇ ಹೋರಾಡುತ್ತಾರೆ. ಸಕಲ ಪರೀಕ್ಷಣೆಗಳ ಬೆಂಬಲವಿರುವ ಹೀಸನ್‌ಬರ್ಗ್‌ನ ಕ್ರಾಂತಿಕಾರಿ ಚಿಂತನೆಯನ್ನು ಎಲ್ಲಾ ಭೌತಶಾಸ್ತ್ರಜ್ಞರು ಒಪ್ಪುವುದಿಲ್ಲ. ಮಾನವ ಇತಿಹಾಸದಲ್ಲಿ ಅತ್ಯಂತ ಪ್ರತಿಭಾ ಸಂಪನ್ನನಾದ ಭೌತಶಾಸ್ತ್ರಜ್ಞ ಐನ್‌ಸ್ಟೈನ್ ತನ್ನ ಜೀವಿ ತದ ಹೆಚ್ಚಿನ ಕಾಲವನ್ನು ವ್ಯಯಿಸಿದ್ದು ಹೀಸನ್‌ಬರ್ಗ್‌ನ ವಾದಮುಖಗಳ ಕುಂದುಕೊರತೆಗಳನ್ನು ಕಂಡುಹಿಡಿಯ ಲಿಕ್ಕಾಗಿತ್ತು. ಐನ್‌ಸ್ಟೈನಿಗಾದರೋ, ಇದಕ್ಕೆ ಶಿಕ್ಷಣಾತ್ಮ ಕವಾದ ಪುರಾವೆಗಳನ್ನೇನೂ ಸಾಧಿಸಲಾಗಲಿಲ್ಲ. ಆದರೆ, ಸಿದ್ಧಾಂತಪರವಾದ ಇನ್ನೊಂದು ಸೀಮೆಯೊಳಗೆ ಪುರಾವೆ ಗಳು ಲಭಿಸಬಹುದೆಂಬ ಪ್ರತ್ಯಾಶೆ ಮಾತ್ರ ಬಾಕಿ ಯಾಯಿತು. ಆದರೂ ಹಾಗಿರುವ ಸಿದ್ಧಾಂತವನ್ನು ಇಷ್ಟರವರೆಗೆ ರೂಪಿಸಲು ಸಾಧ್ಯವಾಗಿಲ್ಲ. ಆದರೆ, ಇದು ಕಥೆಯ ಅಂತ್ಯವೆಂದು ಯಾರೂ ಕನಿಷ್ಟಪಕ್ಷ ಓರ್ವ ಭೌತ ವಿಜ್ಞಾನಿಯಾಗಲಿ ಹೇಳಲು ಧೈರ್ಯಪಡಲಿಲ್ಲ.

ಆದರೆ, ವಾಸ್ತವದಲ್ಲಿ ಇಂದಿನ ವಿಜ್ಞಾನ ಮತ್ತು ಆಧಿಭೌತಿಕ ಚಿಂತನೆ ಪರಸ್ಪರ ವಿರುದ್ಧ ಕಣಗಳಲ್ಲಿವೆಯೇ? ಈ ಪ್ರಶ್ನೆ ಇಸ್ಲಾಮಿಗೆ ಅನ್ವಯಿಸುವಂಥದ್ದಲ್ಲ. ಸಾಮಾನ್ಯವಾಗಿ ವಿಜ್ಞಾನ ಮತ್ತು ವಿಶ್ವಾಸಕ್ಕೆ ಅನ್ವಯಿಸುತ್ತದೆ. ಸಂಪೂರ್ಣ "ಸೌಹಾರ್ದಪರವಾದ ಪರಸ್ಪರ ಪೂರಕತ್ವದಲ್ಲಿ" ವಿಜ್ಞಾನ ಮತ್ತು ವಿಶ್ವಾಸ ಒಟ್ಟುಗೂಡಿ ಬಾಳಲು ಸಾಧ್ಯವೇ ? ಆಧುನಿಕ ವೈಜ್ಞಾನಿಕ ಚಿಂತನೆಯಿಂದ ಕೆಲವು ಪ್ರಸಕ್ತವಾದ ಉದಾಹರಣೆಗಳನ್ನು ನಾವು ಕಾಣಬಹುದು:

ನಿಶ್ಶೂನ್ಯತೆಯಿಂದ ಪ್ರಪಂಚಸೃಷ್ಟಿ ಉಂಟಾಗಿದೆಯೆಂಬ ಆಧಿಭೌತಿಕ ಸಿದ್ಧಾಂತಕ್ಕೆ ಸಂಬಂಧಿಸಿದುದಾಗಿದೆ ನನ್ನ ಮೊದಲನೆಯ ಉದಾಹರಣೆ.

ಪ್ರಪಂಚದ ಪಿಂಡ ಮತ್ತು ಊರ್ಜದ ಸಾಂದ್ರತೆಯ ಅತ್ಯಂತ ಸಾಧ್ಯತೆಯಿರುವ ಮೌಲ್ಯವನ್ನು ಅಳೆಯುವಾಗ, ಪ್ರಪಂಚದ ಪಿಂಡವು ಶೂನ್ಯವೆಂದು ತಿಳಿದು ಬರುತ್ತದೆಂದು ಇಂದು ಕೆಲವು ಪ್ರಪಂಚಶಾಸ್ತ್ರಜ್ಞರು ಭಾವಿಸುತ್ತಾರೆ. ಹೀಗೆ ಭಾವಿಸುವ ಶಾಸ್ತ್ರಜ್ಞರ ಸಂಖ್ಯೆ ವರ್ಧಿಸುತ್ತಿದೆ. ಪಿಂಡವು ಶೂನ್ಯವೆಂದಾದರೆ – ಇದನ್ನು ಪರೀಕ್ಷಿಸಿ ಲೆಕ್ಕಹಾಕಬಹುದಾಗಿದೆ – ಪಿಂಡವಿಲ್ಲದ ನಿಶ್ಶೂನ್ಯಾವಸ್ಥೆಯಲ್ಲಿದೆ ಪ್ರಪಂಚ.

ಪ್ರಪಂಚವು ನಿಶ್ಶೂನ್ಯತೆಯ ಒಂದು ಪರಿಣಾಮವೆಂಬ ಆಧಾರದಲ್ಲಿ 10 ವರ್ಷ ಮುಂಚೆಯೇ ಧೀರವಾದ ಒಂದು ಪರೀಕ್ಷಣೆ ನಡೆಸಲ್ಪಟ್ಟಿತ್ತು. ಪ್ರಪಂಚದ ಸಾಂದ್ರತೆಯನ್ನು ಅಳೆದು ತಿಳಿದುಕೊಳ್ಳುವುದರಲ್ಲಿ ಭೌತಶಾಸ್ತ್ರ ಮತ್ತು ಆಧಿಭೌತಿಕ ಶಾಸ್ತ್ರಗಳೊಳಗೆ ವ್ಯತ್ಯಾಸವಿದೆ. ಹೀಗೆ ಅಳೆದು ನೋಡುವಾಗ ಲಭಿಸುವುದು ಶೂನ್ಯವಲ್ಲವಾದರೆ ಪ್ರಪಂಚವು ನಿಶ್ಶೂನ್ಯತೆಯೆಂಬ ಆಧಿಭೌತಿಕ ಸಿದ್ಧಾಂತವನ್ನು ನಮಗೆ ತಳ್ಳಿಹಾಕಬಹುದು.

ಭೌತಶಾಸ್ತ್ರದಲ್ಲೂ ಇತ್ತೀಚೆಗೆ ಸಂಭವಿಸಿದ ಆವೇಶಕರವಾದ ಇನ್ನೊಂದು ವಿಕಾಸವಾಗಿದೆ ನನ್ನ ಎರಡನೆಯ ಉದಾಹರಣೆ. ಪ್ರಕೃತಿಯ ಎರಡು ಶಕ್ತಿಗಳನ್ನು– ವಿದ್ಯುಚ್ಛಕ್ತಿ, ದುರ್ಬಲ ನ್ಯೂಕ್ಲಿಯರ್ ಶಕ್ತಿ – ಸಂಯೋಜಿಸುವುದರಲ್ಲೂ ಅವುಗಳಲ್ಲಿ ಒಂದೊಂದನ್ನು ಗುರುತಿಸುವುದರಲ್ಲೂ ನಾವು ಗಳಿಸಿದ ವಿಜಯದ ಪರಿಣಾಮವಾಗಿದೆ ಇದು. ಕಾಲದೇಶಗಳಿಗೆ ಹತ್ತು ಮಾನಗಳಿರಬಹುದೆಂಬ (ಸಿದ್ಧಾಂತದ ಇತರ ಕೆಲವು ಆವೃತ್ತಿಗಳ ಪ್ರಕಾರ ಹನ್ನೊಂದರ ವರೆಗೆ) ಸಾಧ್ಯತೆಯನ್ನು ನಾವೀಗ ಪರಿಗಣಿಸುತ್ತಿದ್ದೇವೆ. ಬೇರೆ ಎರಡು ಶಕ್ತಿಗಳಾದ ಗುರುತ್ವಾಕರ್ಷಣ ಶಕ್ತಿ, ಸುಶಕ್ತ ನ್ಯೂಕ್ಲಿಯರ್ ಶಕ್ತಿಗಳೊಂದಿಗೆ ದುರ್ಬಲ ವಿದ್ಯುಚ್ಛಕ್ತಿಯನ್ನು ಸಂಯೋಜಿಸಲು ಸಾಧ್ಯವಿದೆಯೆಂದು ಸಹ ನಾವೀಗ ಪ್ರತ್ಯಾಶೆಯುಳ್ಳವರಾಗಿದ್ದೇವೆ.

ಕಾಲದೇಶಗಳ ಹತ್ತು ಮಾನಗಳಲ್ಲಿ ನಾಲ್ಕು ನಮಗೆ ಮೊದಲೇ ಪರಿಚಯವುಳ್ಳದ್ದು. ಕಾಲ ಮತ್ತು ದೇಶದ ಪರಿಚಿತವಾದ ಈ ನಾಲ್ಕು ಮಾನಗಳ ವಕ್ರರೇಖೆ ನಮ್ಮ ಪ್ರಪಂಚದ ಗಾತ್ರವನ್ನೂ ಆಯುಸ್ಸನ್ನೂ ನಿರ್ಣಯಿಸುತ್ತದೆಂದು ಐನ್‌ಸ್ಟೈನ್‌ನ ಅಭಿಪ್ರಾಯವಾಗಿದೆ. ಈಗ ಕಂಡುಹಿಡಿಯಲಾದ ಉಳಿದ ಆರು ಮಾನಗಳು ವೈದ್ಯುತ - ಅಣುವಿಕರಣಕ್ಕೆ ಸಂಬಂಧಿಸಿದ್ದು. ಆದರೆ, ಈ ಆರು ಮಾನಗಳನ್ನು ನಮಗೆ ಏಕೆ ನೇರವಾಗಿ ಗ್ರಹಿಸಲಿಕ್ಕೆ ಸಾಧ್ಯವಾಗುವುದಿಲ್ಲ ? ವಿದ್ಯುತ್ - ಅಣುವಿಕಿರಣದ ಸಾನಿಧ್ಯದ ಮೂಲಕ ಮಾತ್ರವೇ ಅವುಗಳನ್ನು ಗುರುತಿಸಲು ಸಾಧ್ಯವೆಂಬುದು ಏಕೆ ? ನಮಗೆ ಗೊತ್ತಿರುವ ನಾಲ್ಕು ಕಾಲದೇಶ ಮಾನಗಳು ಮತ್ತು 10–33 ಸೆ. ಮೀಟರಿಗಿಂತ ಹೆಚ್ಚಿಲ್ಲದ ಇತರ ಆರು ಮಾನಗಳಿಗೆ ಮಧ್ಯೆ ಏನು ವ್ಯತ್ಯಾಸ ?

ಇದಕ್ಕೋಸ್ಕರ ನಮಗೆ ಸ್ವಾಭಾವಿಕವಾದ ಪೂರ್ವಾಪರಾನುರೂಪ್ಯವುಳ್ಳ ಒಂದು ಸಿದ್ಧಾಂತವನ್ನು ರೂಪೀಕರಿಸಬೇಕಾಗಿದೆ. ಆದರೆ ಹೊಸ ಮಾನಗಳು ಆರು, ಅಥವಾ ಹೆಚ್ಚೆಂದರೆ ಏಳು ಮಾತ್ರ ಇವೆಯೆಂದಾದರೆ ಮಾತ್ರವೇ ಆ ಸಿದ್ಧಾಂತಕ್ಕೆ ಪ್ರಸಕ್ತಿ ಇರುತ್ತದೆ. ಈ ಸಿದ್ಧಾಂತ ಸರಿಯೆಂದಾದರೆ, ಪ್ರಪಂಚದಲ್ಲಿ ಮೂರನೆಯ ಡಿಗ್ರಿಬ್ಲಾಕ್ – ಬೋಡಿ ರೇಡಿಯೋ ಪ್ರಸರಣ ತುಂಬಿರಬೇಕಾಗಿದೆ. ಇದಾದರೋ, ಪ್ರಪಂಚವಿಕಾಸದ ಯಾವುದೋ ಪೂರ್ವ ಘಟ್ಟದಲ್ಲಿ ಉಂಟಾದುದಾಗಿರಬೇಕಾಗಿದೆ. ಇವುಗಳನ್ನು ಕಂಡುಹಿಡಿದರೆ, ಆರು ಅಥವಾ

ಏಳು ಹೊಸ ಮಾನಗಳು ಕಾಲದೇಶಗಳಿಗೆ ಸಹ ಇವೆಯೆಂದು ನಮಗೆ ದೃಢಪಡಿಸಲು ಸಾಧ್ಯ. ಕಂಡುಹಿಡಿಯದಿದ್ದರೆ ಆ ಸಿದ್ಧಾಂತವನ್ನು ನಾವು ತಳ್ಳಿಹಾಕಬಹುದು.

ನಿಶ್ಶೂನ್ಯತೆಯಿಂದ ಸೃಷ್ಟಿ, ಕಾಲದೇಶಗಳ ಮೂಲಕ ಹೊಸ ಮಾನಗಳು ಎಂಬವು 20ನೇ ಶತಮಾನದ ಅಂತ್ಯದಲ್ಲಿರುವ ಭೌತಶಾಸ್ತ್ರಕ್ಕೆ ಹೊಸದಾಗಿ ತೋಚಬಹುದು. ಆದರೆ ಆದಿಕಾಲಗಳಲ್ಲಿ ಅಧಿಭೌತಿಕ ದಾರ್ಶನಿಕರು ಇವುಗಳ ಕುರಿತು ಆಲೋಚಿಸಿದ್ದರು. ಹೇಗಿದ್ದರೂ ಈ ಹೊಸ ಕಲ್ಪನೆಗಳು ವಿಜ್ಞಾನಕ್ಕೆ ಸಂಬಂಧಿಸಿದ ಮಟ್ಟಿಗೆ ಅದರ ಸೈದ್ಧಾಂತಿಕ ಸ್ವರೂಪದ ತಾತ್ಕಾಲಿಕ ಸ್ವಭಾವದ ಮತ್ತು ಪ್ರತಿಯೊಂದು ಘಟ್ಟದಲ್ಲೂ ಪ್ರಯೋಗದ ಮೂಲಕ ಸಿದ್ಧಾಂತವನ್ನು ಪರೀಕ್ಷಿಸಿ ದೃಢಪಡಿಸುವುದರ ಆವಶ್ಯಕತೆಯ ಪ್ರಸಕ್ತಿಯನ್ನು ಹೆಚ್ಚಿಸುತ್ತವೆ.

ಅವಿಶ್ವಾಸಿಗೆ ಸಂಬಂಧಿಸಿದ ಮಟ್ಟಿಗೆ, ಸ್ವಾಭಾವಿಕ ಪೌರ್ವಾಪರ್ಯ ಸಿದ್ಧಾಂತ (ಜಯ ಗಳಿಸಿದರೆ) ದೇವರ ಅಗ್ರಸಕ್ತಿಯ ಉದಾಹರಣೆಯಾಗಬಹುದು.

ವಿಶ್ವಾಸಿಗಾದರೋ, ಅದು ದೇವರ ಸರ್ಗಾತ್ಮಕತೆಯ ಉದಾಹರಣೆಯಾಗುತ್ತದೆ. ದೈವಿಕವಾದ ಆ ರೂಪಕಲ್ಪನೆಯೊಂದಿಗೆಯೇ, ಅದರ ಸೌಂದರ್ಯದಿಂದಲೂ ಗಾಂಭೀರ್ಯದಿಂದಲೂ ವಿಶ್ವಾಸಿಗೆ ಭಕ್ತಿ ತೋರುತ್ತದೆ. ನಮ್ಮ ಕಾಲದ ಅತ್ಯಂತ ಮಹಾನ್ ಭೌತಶಾಸ್ತ್ರಜ್ಞರಲ್ಲಿ ಓರ್ವರಾದ, ಒಂದು ವೇಳೆ ಬದುಕಿರುವವರಲ್ಲಿ ಅತ್ಯಂತ ಮಹಾನ್ ಭೌತಶಾಸ್ತ್ರಜ್ಞನೆಂದು ಕರೆಯಬಹುದಾದ ಫೆಯ್ನ್‌ಮಾನ್‌ರ ಕುರಿತು ಹೈನ್ಸ್ ವಾಗೆಲ್ಸ್ ಒಮ್ಮೆ ಒಂದು ಕಥೆ ಹೇಳಿದರು:

ಒಳಗಡೆ ಇರುವಾಗ ಇಂದ್ರಿಯಗಳಿಗೆ ಏನನ್ನೂ ತಿಳಿಯಲು ಸಾಧ್ಯವಿಲ್ಲದ ಒಂದು ತೊಟ್ಟಿ: ಅದರಲ್ಲಿ ಕುಳಿತುಕೊಳ್ಳುವಾಗ ಫೆಯ್ನ್‌ಮಾನ್‌ರಿಗೆ ಶರೀರಬಾಹ್ಯವಾದ ಒಂದು ಅನುಭವವುಂಟಾಯಿತು – ತಾನು ತನ್ನ ಶರೀರದಿಂದ ಹೊರಗೆ ಬಂದುದಾಗಿ ಅವರಿಗೆ ತೋಚಿತು. ತನ್ನ ಮುಂದೆ ತನ್ನ ಶರೀರ ಮಲಗಿರುವುದನ್ನು ಅವರು ಕಂಡರು. ಈ ಅನುಭವ ನಿಜವೇ ಎಂದು ತಿಳಿಯಲಿಕ್ಕಾಗಿ ಅವರು ತನ್ನ ಕೈಯನ್ನು ಅಲ್ಲಾಡಿಸಲು ತೊಡಗಿದರು. ಆಗ ತನ್ನ ಶರೀರದಲ್ಲಿ ಚಲನೆ ಅವರಿಗೆ ಕಂಡಿತು. ಇಷ್ಟಾಗುವಾಗ, ತಾನು ಸದಾ ಶರೀರದಿಂದ ಹೊರಗಿದ್ದು ಬಿಡುವೆನೋ ಎಂಬ ಉತ್ಕಂಠತೆಯಿಂದ ಅವರು ಶರೀರಕ್ಕೆ ಹಿಂತಿರುಗಿ ಹೋಗಲು ನಿರ್ಧರಿಸಿದರು. ತನ್ನ ಈ ಅನುಭವವನ್ನು ಫೆಯ್ನ್‌ಮಾನ್ ಹೇಳಿ ಮುಗಿಸಿದಾಗ ವಾಗಲ್ಸ್ ಅವರೊಡನೆ ಈ ಅಸಾಧಾರಣ ಅನುಭವ ಉಂಟಾಗಲು ತಮ್ಮನ್ನು ಪ್ರಾಪ್ತನನ್ನಾಗಿ ಮಾಡಿದ್ದು ಏನಾಗಿತ್ತೆಂದು ಕೇಳಿದರು. ಒಬ್ಬ ಯಥಾರ್ಥ ವಿಜ್ಞಾನಿಯ ನಿರೀಕ್ಷಣಪರವಾದ ನಿಷ್ಕೃಷ್ಟತೆಯೊಂದಿಗೆ ಫೆಯ್ನ್‌ಮಾನ್ ಆಗ ಹೇಳಿದರು: "ಭೌತಶಾಸ್ತ್ರದ ಯಾವುದೇ ನಿಯಮವು ಉಲ್ಲಂಘಿಸಲ್ಪಡುವುದಾಗಿ ನಾನು ಕಂಡಿಲ್ಲ......"

ನಾನು ಮೊದಲು ಹೇಳಿದ ಪ್ರಕಾರ, ಭೌತಶಾಸ್ತ್ರ ನಿಶ್ಶಬ್ದವಾಗಿರುವ ಅನೇಕ ವಿಚಾರಗಳಲ್ಲಿ ಇಸ್ಲಾಂ ನೀಡುವ ಕಾಲಾತೀತವಾದ ಆಧ್ಯಾತ್ಮಿಕ ಸಂದೇಶವಾಗಿದೆ ನನ್ನ ವಿಶ್ವಾಸಕ್ಕೆ ಆಧಾರ. ಪವಿತ್ರ ಖುರ್‌ಆನಿನ ಪ್ರಾರಂಭದ ನಂತರವುಳ್ಳ ಮೊತ್ತಮೊದಲಿನ ಸಾಲುಗಳೇ ಇದಕ್ಕೆ ಅರ್ಥನೀಡುತ್ತವೆ: "ಇದು ಮಹತ್ತಾದ ಒಂದು ಗ್ರಂಥವಾಗಿದೆ. ಇದರಲ್ಲಿ ಸಂಶಯಕ್ಕೆ ಎಡೆಯೇ ಇಲ್ಲ. ಅಗೋಚರ ವಿಚಾರಗಳನ್ನು ನಂಬುವ ದೇವ ವಿಶ್ವಾಸಿಗಳಿಗೆ ಇದೊಂದು ಮಾರ್ಗದರ್ಶನವಾಗಿದೆ."

(ಸಶೇಷ)


## 'ಯುಗರಶ್ಮಿ'ಗೆ ಚಂದಾದಾರರಾಗಿರಿ

ಬಿಡಿಪ್ರತಿ: ರೂ. 1-00

ವಾರ್ಷಿಕ ಚಂದಾ: ರೂ. 4-00
ಅಂಚೆ ಮೂಲಕ: ರೂ. 6-00

# ಇಸ್ಲಾಮೀ ಕುಟುಂಬ ಜೀವನ*

—ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಒಂದು ಕುಟುಂಬದ ಸದಸ್ಯರ ಪರಸ್ಪರವುಳ್ಳ ಸಂಬಂಧದಲ್ಲಿ ಅತಿ ಹೆಚ್ಚು ಪ್ರಾಧಾನ್ಯವಿರುವುದು ಪತಿ ಪತ್ನಿಯರ ಅನ್ಯೋನ್ಯ ಸಂಬಂಧವಾಗಿದೆ. ಏಕೆಂದರೆ, ಇಡೀ ಕುಟುಂಬದ, ಮಾತ್ರವಲ್ಲ ವಿಶಾಲವಾದ ಅರ್ಥದಲ್ಲಿ ಇಡೀ ರಾಷ್ಟ್ರದ ಕ್ಷೇಮ ಈ ಸಂಬಂಧವನ್ನು ಅವಲಂಬಿಸಿರುತ್ತದೆ. ಈ ಬಗ್ಗೆ ಇಸ್ಲಾಂ ನೀಡುವ ಒಂದನೆಯ ನಿರ್ದೇಶವು, ಈ ಸಂಬಂಧ ಸಂಪೂರ್ಣ ನೈತಿಕವಾದ ಪರಿಗಣನೆಗಳನ್ನು ಅವಲಂಬಿಸಿರಬೇಕು; ಸೌಂದರ್ಯವನ್ನಾಗಲಿ, ಸಂಪತ್ತನ್ನಾಗಲಿ, ಸ್ಥಾನಮಾನನ್ನಾಗಲಿ ಮುಂದಿಟ್ಟಾಗಬಾರದು ಎಂದಾಗಿದೆ.

ಉದ್ದಿಷ್ಟ ವಿವಾಹಸಂಬಂಧ ನಿಮ್ಮ ಜೀವನ ಪಾವಿತ್ರ್ಯದ ಮೇಲೆ ಎಷ್ಟರಮಟ್ಟಿಗೆ ಪ್ರಭಾವಬೀರುತ್ತದೆಂದೂ ಎಂತಹ ಸಂತಾನಗಳನ್ನು ಅದು ಒದಗಿಸುತ್ತದೆಂದೂ ಚೆನ್ನಾಗಿ ಯೋಚಿಸಬೇಕೆಂದೂ ಪವಿತ್ರ ಖುರ್‌ಆನ್ ವಿವಾಹಿತರಾಗುವ ಸ್ತ್ರೀ ಪುರುಷರಿಗೆ ಆದೇಶಿಸುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಹೇಳುತ್ತಾರೆ: "ಕೆಲವರು ಸೌಂದರ್ಯವನ್ನೂ ಬೇರೆ ಕೆಲವರು ಸ್ಥಾನಮಾನವನ್ನೂ ಇನ್ನು ಕೆಲವರು ಸಂಪತ್ತನ್ನೂ ಪರಿಗಣಿಸಿ ಮದುವೆಯಾಗುತ್ತಾರೆ. ಆದರೆ ನೀವು ಸುಶೀಲೆಯೂ ಭಕ್ತೆಯೂ ಆದ ಸ್ತ್ರೀಯನ್ನು ಮದುವೆಯಾಗಬೇಕಾಗಿದೆ" (ಬುಖಾರಿ, ಕಿತಾಬುನ್ನಿಕಾಹ್). ವಿವಾಹ ಸಂಬಂಧದ ಯಥಾರ್ಥ ತಳಹದಿ ಇದಾಗಿರಬೇಕು. ಒಬ್ಬ ಸಂಗಾತಿಯನ್ನು ಆಯ್ಕೆಮಾಡುವಾಗ ಈ ವಿಚಾರವನ್ನು ಗಮನಿಸದಿದ್ದ ಪಕ್ಷದಲ್ಲಿ ಸತಿಪತಿ ಸಂಬಂಧ ಎಂದಿಗೂ ಸ್ನಿಗ್ಧವಾಗಿ ಮುಂದುವರಿದುಕೊಂಡು ಹೋಗಲಾರದು. ಮಾತ್ರವಲ್ಲ, ಅದರ ದುಷ್ಫಲಗಳು ಸಂತಾನಗಳಲ್ಲಿ ಪ್ರಕಟವಾಗುವುದು. ಮಾತಾಪಿತರ ನೈತಿಕ ಮತ್ತು ಮಾನಸಿಕವಾದ ಗುಣಾವಗುಣಗಳು ಸಂತಾನಗಳಲ್ಲಿ ಸಂಕ್ರಮಿಸುವುದು ಖಂಡಿತ. ಈ ಸತ್ಯಾಂಶವು ಉತ್ತಮಸಂತಾನಶಾಸ್ತ್ರ (Eugenics) ಮೂಲಕ ಹೆಚ್ಚು ಸ್ಪಷ್ಟವಾಗಿರುತ್ತದೆ. ಉತ್ತಮ ಸಂತಾನಶಾಸ್ತ್ರಜ್ಞರ ಅಭಿಪ್ರಾಯಗಳು ಅತಿಶಯೋಕ್ತಿಯಿಂದ ಮುಕ್ತವಲ್ಲವಾದರೂ ಮಾತಾಪಿತರಲ್ಲಿರುವ ಸಾನ್ಮಾರ್ಗಿಕವೂ ಬುದ್ಧಿಪರವೂ ಆದ ಗುಣವಿಶೇಷಗಳು ಮಕ್ಕಳಲ್ಲಿ ಹೆಚ್ಚುಕಮ್ಮಿ ಪ್ರತಿಫಲಿಸುವುದೆಂಬುದರಲ್ಲಿ ಏನೂ ಸಂಶಯಕ್ಕೆ ಎಡೆಯಿಲ್ಲ. ಆದಕಾರಣ, ಒಬ್ಬ ಪತಿ ಅಥವಾ ಪತ್ನಿಯನ್ನು ಆಯ್ಕೆ ಮಾಡುವುದೆಂಬುದು ಅತಿ ಪ್ರಧಾನವಾದ ಒಂದು ಸಮಸ್ಯೆಯಾಗುತ್ತದೆ. ಆದ್ದರಿಂದ, ಈ ವಿಚಾರದಲ್ಲಿ ಬಾಹ್ಯವಾದ ಸೌಂದರ್ಯಕ್ಕಿಂತಲೂ ಸಂಪತ್ತಿಗಿಂತಲೂ ಸ್ಥಾನಮಾನಗಳಿಗಿಂತಲೂ ಮಿಗಿಲಾಗಿ ಬುದ್ಧಿಪರವೂ ನೈತಿಕವೂ ಆದ ವೈಶಿಷ್ಟ್ಯಗಳನ್ನು ಪರಿಗಣಿಸಬೇಕೆಂದು ಇಸ್ಲಾಂ ಪ್ರಥಮವಾಗಿ ನಿರ್ದೇಶಿಸುತ್ತದೆ. ಬೇರೆ ವಿಷಯಗಳನ್ನು ಇಸ್ಲಾಂ ತೀರಾ ಅವಗಣಿಸುತ್ತದೆಂದು ನಾನು ಹೇಳುವುದರ ಅರ್ಥವಲ್ಲ. ವಿವಾಹದ ಮೂಲೋದ್ದೇಶ ಅವು ಮಾತ್ರ ಆಗಿರಬಾರದೆಂದಾಗಿದೆ. ಓರ್ವ ಪುರುಷ ಮತ್ತು ಓರ್ವ ಸ್ತ್ರೀ ಜೀವನ ಪಾವಿತ್ರ್ಯವನ್ನೂ ಸಾನ್ಮಾರ್ಗಿಕತೆಯನ್ನೂ ಬುದ್ಧಿಶಕ್ತಿಯನ್ನೂ ನೋಡಿ ಪರಸ್ಪರ ಆಕರ್ಷಿಸಲ್ಪಟ್ಟು, ಅದೇ ಸಂದರ್ಭದಲ್ಲಿ ಸೌಂದರ್ಯದಲ್ಲೂ ಸಂಪತ್ತಿನಲ್ಲೂ ಸ್ಥಾನಮಾನಗಳಲ್ಲೂ ಅವರು ಅನುಗ್ರಹೀತರಾಗಿರುವರೆಂದಾದರೆ ಅದು ಬಹಳ ಉತ್ತಮವೇ ಸರಿ. ಆದರೆ ವೈವಾಹಿಕ ಸಂಬಂಧದ ಲಕ್ಷ್ಯ ಸಂಪತ್ತು, ಸೌಂದರ್ಯ ಮೊದಲಾದ

* 1924ರಲ್ಲಿ ಲಂಡನಿನ ವಿಂಬ್ಲೀ ಎಂಬಲ್ಲಿ ಜರಗಿದ ಕಾಮನ್‌ವೆಲ್ತ್ ಧರ್ಮ ಸಮ್ಮೇಳನದಲ್ಲಿ ಸಾದರಪಡಿಸಲು ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫಾರವರು ಸಿದ್ಧಪಡಿಸಿದ "AHMADIYYATH OR THE TRUE ISLAM" ಎಂಬ ಪುಸ್ತಕದಿಂದ ಸಂಗ್ರಹಿತ.

ಬಾಹ್ಯಗುಣಗಳಾಗಿರಬಾರದು. ಎಲ್ಲಾ ಮದುವೆಗಳೂ ಈ ಉತ್ಕೃಷ್ಟ ತತ್ವವನ್ನು ಅವಲಂಬಿಸಿ ನಡೆಯುವುದಾದರೆ ಜಗತ್ತಿನಲ್ಲಿ ಕೂಡಲೇ ಒಂದು ನೈತಿಕ ಕ್ರಾಂತಿ ಸಂಭವಿಸುವುದು ಮಾತ್ರವಲ್ಲ, ಅಂತಹ ವಿವಾಹಗಳ ಫಲವಾಗಿ ಜನಿಸುವ ಸಂತಾನಗಳು ಅತಿ ವಿಶಿಷ್ಟಗುಣಗಳಿಂದ ಕೂಡಿದವು ಆಗುವುವು.

## ಮುಂಜಾಗರೂಕತೆಗಳು

ವಿವಾಹ ಸಂಬಂಧದಲ್ಲಿ ತೊಡಗುವ ವ್ಯಕ್ತಿಗಳು ಅನ್ಯೋನ್ಯ ಅವರ ಸ್ವಭಾವಗುಣಗಳಿಗೆ ಸಂಬಂಧಿಸಿ ಸಂತೃಪ್ತರಾಗಬೇಕೆಂದು ಮಾತ್ರವಲ್ಲ, ನಿರ್ದಿಷ್ಟ ವರನು ವಧುವಿಗೆ ಅನುರೂಪನಾದ ಗಂಡನೂ ಅವಳ ಭಾವೀ ಸಂತಾನಗಳಿಗೆ ಒಬ್ಬ ಉತ್ತಮ ತಂದೆಯೂ ಆಗಿರಲಿಕ್ಕೆ ಅರ್ಹನೇ ಎಂಬ ವಿಚಾರದಲ್ಲಿ ಹೆಣ್ಣಿನ ಕಡೆಯವರು ಸಹ ತೃಪ್ತಿ ಹೊಂದಿರಬೇಕೆಂಬುದು ಇಸ್ಲಾಂ ನಿರ್ದೇಶಿಸುವ ಇನ್ನೊಂದು ನಿಯಮವಾಗಿದೆ. 'ನಿಕಾಹ್' ಮಾಡುವುದಕ್ಕೆ ಮೊದಲು ವಧೂವರರ ಒಪ್ಪಿಗೆ ಮಾತ್ರವಲ್ಲದೆ, ವಧುವಿನ ರಕ್ಷಕನ ಸಮ್ಮತಿ ಲಭಿಸಬೇಕೆಂಬುದು ಇಸ್ಲಾಮೀ ವಿವಾಹ ನಿಯಮದ ಒಂದು ಶರ್ತವಾಗಿದೆ. ಮದುವೆಯ ವೇಳೆಯಲ್ಲಿ ಆಕೆಯ ರಕ್ಷಕನಾಗಿ ತಂದೆ, ಸಹೋದರ ಅಥವಾ ಹತ್ತಿರದ ಪುರುಷ ಸಂಬಂಧಿ ಯಾರೂ ಬದುಕಿಲ್ಲವೆಂದಾಹರೆ, ಖಾರಿಯ ಒಪ್ಪಿಗೆ ಬೇಕಾಗಿದೆ. ವಧುವಿಗೆ ಯಾವುದೇ ತರದ ಮೋಸವಾಗಲಿ ವಂಚನೆಯಾಗಲಿ ಪ್ರಯೋಗಿಸಲಾಗಿಲ್ಲ ಎಂದು ಅವರಿಗೆ ಮನವರಿಕೆಯೂ ಆಗಬೇಕಾಗಿದೆ. ಸ್ತ್ರೀಯು ಸ್ವಾಭಾವಿಕವಾಗಿ ಮೃದು ಸ್ವಭಾವಿಯೂ ಚಂಚಲೆಯೂ ಆಗಿರುವುದರಿಂದಲೂ ತನ್ನಿಮಿತ್ತ ಆಕೆಗೆ ತನ್ನ ಭಾವೀ ವರನಾಗಲಿರುವ ವ್ಯಕ್ತಿಯ ಕುರಿತು, ಒಬ್ಬ ಪುರುಷನು ತನ್ನ ವಧುವಿನ ಬಗ್ಗೆ ತಿಳಿಯಲು ಸಾಧ್ಯವಿರುವಂತೆ, ವಿಚಾರಿಸಿ ತಿಳಿಯಲು ಅಸಾಧ್ಯವಾದುದರಿಂದಲೂ ಇಸ್ಲಾಂ ಸ್ತ್ರೀಗೆ ಈ ರೀತಿಯ ವಿಶೇಷ ರಕ್ಷಣಾ ವ್ಯವಸ್ಥೆಗಳನ್ನು ಮಾಡಿರುತ್ತದೆ. ಮಾತ್ರವಲ್ಲ ಓರ್ವ ಸ್ತ್ರೀ ಸುಲಭದಲ್ಲಿ ವಶೀಕರಿಸಲ್ಪಡಲು ಎಡೆಯಿರುವುದರಿಂದ ಆಕೆ ವಂಚನೆಗೆ ಶೀಘ್ರವಾಗಿ ಗುರಿಯಾಗುತ್ತಾಳೆ. ಆದ್ದರಿಂದಲೇ ಆಕೆಯ ಮದುವೆಯ ವಿಚಾರದಲ್ಲಿ ರಕ್ಷಕನ ಅಥವಾ ಖಾರಿಯ ಒಪ್ಪಿಗೆ ಅನಿವಾರ್ಯವೆಂದು ಇಸ್ಲಾಮೀ ನಿಯಮ ಆದೇಶಿಸುತ್ತದೆ. ಈ ನಿಯಮ ನಿಷ್ಕೃಷ್ಟವಾಗಿ ಪಾಲಿಸಲ್ಪಡುತ್ತಿದ್ದರೆ, ಮಾನಮರ್ಯಾದೆಯೂ ಕುಲೀನತೆಯೂ ಉಳ್ಳ ಅನೇಕಾನೇಕ ನಾರೀಮಣಿಗಳೊಡನೆ ವಂಚನೆಯಿಂದ ವರ್ತಿಸುವುದರ ಬಗ್ಗೆ ನಮಗೆ ಕೇಳಬೇಕಾಗಿ ಬರುತ್ತಿರಲಿಲ್ಲ. ಸ್ತ್ರೀ–ಪುರುಷರು ಭೇದಭಾವವಿಲ್ಲದೆ ಬೆರೆಯುವುದನ್ನು ಇಸ್ಲಾಂ ವಿರೋಧಿಸುವುದಾದರೂ ಮದುವೆ ನಿಶ್ಚಯಿಸಲ್ಪಟ್ಟ ಸ್ತ್ರೀ–ಪುರುಷ ಈರ್ವರೂ ಪರಸ್ಪರ ಹಾವಭಾವಾದಿಗಳಲ್ಲಿ ತೃಪ್ತಿಪಟ್ಟುಕೊಳ್ಳುವುದಕ್ಕೋಸ್ಕರ ಅಭಿಮುಖದರ್ಶನ ಮಾಡಲು ಇಸ್ಲಾಂ ಅನುಮತಿ ನೀಡುತ್ತದೆ. ಈರ್ವರೂ ಪರಸ್ಪರ ತೃಪ್ತಿಪಡುವುದಾದರೆ ವಿವಾಹ ನಡೆಯುತ್ತದೆ.

ಇಸ್ಲಾಂ ಧರ್ಮವು ವಿವಾಹವಾಗುವ ಸ್ತ್ರೀಗೆ ಸಂಪತ್ತನ್ನು ನೀಡುವ ವ್ಯವಸ್ಥೆಯನ್ನೂ ಮಾಡಿರುತ್ತದೆ. "ಮಹರ್" ಎಂದು ಕರೆಯಲ್ಪಡುವ ಈ ವಿವಾಹ ಶುಲ್ಕ ಇಸ್ಲಾಮೀ ವಿವಾಹ ನಿಯಮಗಳಲ್ಲಿ ಮುಖ್ಯವಾದ ಒಂದು ಅಂಶವಾಗಿದೆ. ಪತ್ನಿಗೆ ಸ್ವತಂತ್ರವಾದ ಸೊತ್ತಿನ ಮಾಲೀಕತ್ವ ಹಕ್ಕೂ ತನ್ನ ಸೊತ್ತಿನಿಂದ ತನ್ನ ಇಚ್ಛೆಯಂತೆ ದಾನ ಧರ್ಮಾದಿಗಳನ್ನು ಮಾಡುವ, ಬಂಧುಮಿತ್ರಾದಿಗಳಿಗೆ ಪಾರಿತೋಷಕಗಳನ್ನು ನೀಡುವ ಇತ್ಯಾದಿ ಸ್ವಾತಂತ್ರ್ಯ ಸಹ ಇರಬೇಕೆಂಬುದಾಗಿದೆ ಈ ವ್ಯವಸ್ಥೆಯ ಉದ್ದೇಶ. ಪತ್ನಿಯ ಸ್ವತಂತ್ರವಾದ ಸೊತ್ತು, ಮಾಲೀಕತ್ವ ಮತ್ತು ಪತಿಗೆ ಸ್ವೇಚ್ಛೆಯಂತೆ ಉಪಭೋಗಿಸಲು ಅಸಾಧ್ಯವಾಗುವ ತರದಲ್ಲಿ ಸೊತ್ತುಗಳನ್ನು ಸಂಪಾದಿಸಿ ಸಂರಕ್ಷಿಸುವ ಆಕೆಯಹಕ್ಕಿನ ಪ್ರಾಯೋಗಿಕವಾದ ಒಂದು ಅಂಗೀಕಾರವಾಗಿದೆ 'ಮಹರ್'.

## ಪತಿ - ಪತ್ನಿ ಸಂಬಂಧ

ಪತಿಪತ್ನಿಯರು ತಮ್ಮೊಳಗೆ ಜಗಳಾಡುವುದಾದರೆ, ಅವಳನ್ನು ಶಿಕ್ಷಿಸುವ ಯಾವ ಅಧಿಕಾರವೂ ಪತಿಗಿಲ್ಲ— ಪ್ರತ್ಯಕ್ಷವಾದ ಕೆಲವು ದುರ್ವರ್ತನೆಗಳಿಗೆ ಹೊರತು, ಅಂತಹ ಸಂದರ್ಭಗಳಲ್ಲಿ ಅವಳು ಅನೈತಿಕ ವ್ಯವಹಾರಗಳಲ್ಲಿ ತೊಡಗಿದ್ದಳೆಂದು ಸಮೀಪವಾಸಿಗಳಾದ ನಾಲ್ಕು ಮಾನ್ಯ ವ್ಯಕ್ತಿಗಳು ಸಾಕ್ಷಿಗಳಾಗಬೇಕಾಗಿದೆ. ಆದರೂ ಆತನು ಪ್ರಾರಂಭದಲ್ಲಿ ಅವಳಿಗೆ ಬುದ್ಧಿ ಹೇಳಬೇಕಾಗಿದೆ.

ಅವಳು ದುರ್ನಡತೆಗಳನ್ನು ತೊರೆಯದಿದ್ದರೆ, ನಾಲ್ಕು ಮಾಸಗಳು ಮೀರದ ಕಾಲಾವಧಿ ವರೆಗೆ ಗಂಡನು ಅವಳ ಸಹವಾಸವನ್ನು ವರ್ಜಿಸಬೇಕಾಗಿದೆ. ಅಷ್ಟು ಕಾಲ ಸಹಶಯನವನ್ನು ಬೇರ್ಪಡಿಸಬೇಕೆಂದು ಮಾತ್ರ ಇದರ ಅರ್ಥ. ಪತ್ನಿಯನ್ನು ಸಂರಕ್ಷಿಸಿಕೊಳ್ಳಲು ಆ ಸಂದರ್ಭದಲ್ಲೂ ಆತನೇ ಹೊಣೆಗಾರನು. ನಾಲ್ಕು ತಿಂಗಳು ಕಳೆಯುವಾಗ ಸಂಬಂಧವನ್ನು ಪುನಸ್ಥಾಪಿಸಲಿಕ್ಕೆ ಪತಿಯು ನಿಯಮ ಪ್ರಕಾರ ನಿರ್ಬಂಧಿತನಾಗುತ್ತಾನೆ. ಗಂಡನ ಈ ಕ್ರಮವು ಅವಳಲ್ಲಿ ಯಾವುದೇ ಪರಿವರ್ತನೆಯನ್ನುಂಟುಮಾಡಲು ಪ್ರಯೋಜನಕಾರಿಯಾಗದಿದ್ದರೆ ಹಾಗೂ ನೆರೆಹೊರೆಯ ನಾಲ್ಕು ಸಾಕ್ಷಿಗಳು ಆ ಬಗ್ಗೆ ಸಾಕ್ಷ್ಯವಹಿಸುವವರಾದರೆ ಗಂಡನು ಅವಳನ್ನು ಶಿಕ್ಷಿಸಬಹುದು. ಆದರೆ ಅವಳನ್ನು ಗಾಸಿಗೊಳಿಸುವುದಾಗಲಿ ಶರೀರದಲ್ಲಿ ಊನವಾಗುವ ರೀತಿಯಲ್ಲಿ ಹೊಡೆಯುವುದಾಗಲಿ ಮಾಡಬಾರದು. ಪ್ರತ್ಯಕ್ಷವಾದ ಅನೈತಿಕ ವರ್ತನೆಗೆ ಮಾತ್ರವೇ ಇಂತಹ ಕ್ರಮಗಳನ್ನು ತೆಗೆದುಕೊಳ್ಳಬಹುದು. ಗೃಹಕೃತ್ಯಕ್ಕೆ ಸಂಬಂಧಿಸಿದ ಲೋಪದೋಷಗಳಿಗಾಗಲಿ ಕರ್ತವ್ಯ ವಿಮುಖತೆಗಾಗಲಿ ಪತ್ನಿಯನ್ನು ಶಿಕ್ಷಿಸಲಿಕ್ಕೆ ಗಂಡನಿಗೆ ಯಾವ ಅಧಿಕಾರವೂ ಇಲ್ಲ.

ಪತ್ನಿ ಧನಿಕೆ ಮತ್ತು ಗಂಡ ದರಿದ್ರನಾಗಿದ್ದರೆ, ತನ್ನ ಪತ್ನಿಯನ್ನು ಸಾಕಿಸಲಹುವರೆ ಗಂಡನೇ ಜವಾಬ್ದಾರನು. ಅವಳೊಡನೆ ಕರುಣೆಯಿಂದಲೂ ಪ್ರೀತಿಯಿಂದಲೂ ವರ್ತಿಸಲು ಅವನು ಆಜ್ಞಾಪಿಸಲ್ಪಟ್ಟಿದ್ದಾನೆ. ಜಗಳಾಡಿರುವಾಗ ಕೂಡ ಗಂಡನು ತನ್ನ ಹೆಂಡತಿಯೊಡನೆ ಸ್ನೇಹದಿಂದಲೂ ದಯೆಯಿಂದಲೂ ಸೌಮ್ಯಭಾವದಿಂದಲೂ ವರ್ತಿಸಬೇಕೆಂದು ಪವಿತ್ರ ಖುರ್‌ಆನ್ ಆದೇಶಿಸುತ್ತದೆ. ಮುಹಮ್ಮದ್ ಪೈಗಂಬರರು ನುಡಿದಿರುವರು: "ಜ್ಞಾಪಕವಿಡಿರಿ, ಸ್ತ್ರೀಯರೊಡನೆ ಕರುಣೆಯಿಂದ ವರ್ತಿಸಲಿಕ್ಕೆ ನಾನು ನಿಮ್ಮೊಡನೆ ಆಜ್ಞಾಪಿಸುತ್ತೇನೆ." ಮತ್ತೂ ಆ ಮಹಾಪುರುಷರು ಹೇಳುತ್ತಾರೆ: "ಒಬ್ಬ ಗಂಡ ಅವನ ಸಹಧರ್ಮಿಣಿಯನ್ನು ದ್ವೇಷಿಸಬಾರದು. ಅವಳ ಬಗ್ಗೆ ಏನನ್ನಾದರೂ ಅವನು ದ್ವೇಷಿಸುವವನಾದರೆ ಅವನು ಇಷ್ಟಪಡುವ ಒಳ್ಳೆಯವು ಸಹ ಅದೇ ಸಂದರ್ಭದಲ್ಲಿ ಅವಳಲ್ಲಿ ಇರಬಹುದು." ಇನ್ನೂ ಪೈಗಂಬರರು ಹೇಳುತ್ತಾರೆ: "ಒಬ್ಬ ಗಂಡ ತನ್ನ ಹೆಂಡತಿಗೆ ತಾನು ಉಡುವ ರೀತಿಯಲ್ಲಿ ಉಡಿಸಬೇಕು; ತಾನು ಉಣ್ಣುವ ರೀತಿಯಲ್ಲಿ ಉಣಿಸಬೇಕು. ಅವಳನ್ನು ಬಯ್ಯುವುದಾಗಲಿ, ಅವಳಿಂದ ಅಗಲಿ ನಿಲ್ಲುವುದಾಗಲಿ ಮಾಡಬಾರದು." ಪುನಃ ಪೈಗಂಬರರು ಉಪದೇಶಿಸುತ್ತಾರೆ: "ತನ್ನ ಎಲ್ಲಾ ಸಮಯವನ್ನು ಆರಾಧನೆ ಅಥವಾ ಬೇರೆ ವಿಷಯಗಳಲ್ಲಿ ಕಳೆದು ತನ್ನ ಪತ್ನಿಯ ಹಕ್ಕುಗಳನ್ನು ಅಲಕ್ಷಿಸುವುದು ಸಲ್ಲದು." ಮತ್ತೂ ಆ ಪುಣ್ಯಪುರುಷರು ನುಡಿಯುತ್ತಾರೆ: "ತಮ್ಮ ಸಹಧರ್ಮಿಣಿಯರೊಡನೆ ಉತ್ತಮವಾಗಿ ವರ್ತಿಸುವವರು ನಿಮ್ಮ ಪೈಕಿ ಉತ್ತಮರು."

ಇನ್ನೊಂದು ಕಡೆಯಲ್ಲಿ, ತನ್ನ ಗಂಡನಿಗೆ ವಿಧೇಯಳಾಗಿದ್ದುಕೊಂಡು ಆತನ ಮಾನವನ್ನೂ ಸಂಪತ್ತನ್ನೂ ರಕ್ಷಿಸಲಿಕ್ಕೂ ಸಂತಾನಗಳನ್ನು ವಾತ್ಸಲ್ಯದಿಂದ ಸಾಕಿಸಲಹಲಿಕ್ಕೂ ಇಸ್ಲಾಂ ಸ್ತ್ರೀಗೆ ಆದೇಶಿಸುತ್ತದೆ.

## ವಿವಾಹ ವಿಚ್ಛೇದನ

ಪತಿ ಪತ್ನಿಯರ ಪರಸ್ಪರ ಸಂಬಂಧಕ್ಕೆ ಹಾನಿತಟ್ಟುವುದಾದರೆ, ಅದರ ಕಾರಣಗಳನ್ನು ನಿವಾರಿಸಿ ಸ್ನೇಹಬಂಧವನ್ನು ಪುನಃಸ್ಥಾಪಿಸಲಿಕ್ಕೆ ಕೈಲಾದಷ್ಟು ಶ್ರಮಿಸಬೇಕೆಂದು ಈರ್ವರೂ ಆಜ್ಞಾಪಿಸಲ್ಪಟ್ಟಿದ್ದಾರೆ. ಅವರ ಪರಸ್ಪರ ವಿರೋಧವು ಗಂಭೀರವೆಂದಾದರೆ, ಈ ಸಮಸ್ಯೆಯನ್ನು ಎರಡು ಮಧ್ಯವರ್ತಿಗಳ ಮುಂದೆ ಸಮರ್ಪಿಸಬೇಕಾಗಿದೆ. ಒಬ್ಬನನ್ನು ಗಂಡನು ಆತನ ಬಂಧುಗಳಿಂದ ಅಥವಾ ಸ್ನೇಹಿತರಿಂದ ಆಯ್ದುಕೊಳ್ಳಬೇಕಾಗಿದೆ. ಇನ್ನೊಬ್ಬನನ್ನು ಹೆಂಡತಿ ಆಕೆಯ ಇಷ್ಟಾನುಸಾರ ತನ್ನ ಸಂಬಂಧಿಕರಿಂದ ಅಥವಾ ಹಿತೈಷಿಗಳಿಂದ ಆರಿಸಿಕೊಳ್ಳಬೇಕಾಗಿದೆ. ಮಧ್ಯವರ್ತಿಗಳು ವಿವಾದ ವಿಷಯದ ಬಗ್ಗೆ ವಿಚಾರಿಸಿ ಪತಿ ಪತ್ನಿಯರನ್ನು ಒಪ್ಪಿಸಲು ಪ್ರಯತ್ನಿಸಬೇಕು. ಇದು ಅಸಾಧ್ಯವಾಗುವುದಾದರೆ ಅಥವಾ ಸಂಧಾನದ ಪ್ರಯತ್ನ ವಿಫಲವಾಗುವುದಾದರೆ ವಿವಾಹ ವಿಚ್ಛೇದನ ಮಾಡಿಕೊಳ್ಳಲು ಪತಿಗೆ ಅನುಮತಿ ಇದೆ. ಅಂದರೆ, ವೈವಾಹಿಕ ಸಂಬಂಧವನ್ನು ಬೇರ್ಪಡಿಸಿದುದಾಗಿ ಸಾರಲು ಆತನಿಗೆ ಸ್ವಾತಂತ್ರ್ಯವಿದೆ. ಈ ಸಾರುವಿಕೆ ಮತ್ತೂ ಹಲವಿಧ ನಿಬಂಧನೆಗಳಿಗೆ ಒಳಪಡುತ್ತದೆ. ಉದಾಹರಣೆಗೆ, ಸಾರುವಿಕೆ ರಹಸ್ಯವಾಗಿರದೆ ಬಹಿರಂಗವಾಗಿರಬೇಕು, ಎರಡು ಬಾರಿಯ ಸಾರುವಿಕೆಯ ಮಧ್ಯೆ ಒಂದು ತಿಂಗಳ ಎಡೆ ಇರುವಂತೆ ಮೂರು ಬಾರಿ

ಇದನ್ನು ಪುನರಾವರ್ತಿಸಬೇಕು. ಕೊನೆಯ ಸಾರುವಿಕೆಯ ಮುಂಚಿತವಾಗಿ ಸಾಮರಸ್ಯವನ್ನುಂಟುಮಾಡಲಿಕ್ಕೂ ದಾಂಪತ್ಯಬಂಧವನ್ನು ಮುಂದುವರಿಸಲಿಕ್ಕೂ ಇಬ್ಬರಿಗೂ ಸ್ವಾತಂತ್ರ್ಯವಿರುತ್ತದೆ.

ಒಬ್ಬಳಿಗೆ ತನ್ನ ಗಂಡನ ಬಗ್ಗೆ ಆಕ್ಷೇಪಣೆ ಇದ್ದು ವಿವಾಹ ವಿಚ್ಛೇದನಕ್ಕೆ ಅವಳು ಬಯಸುವುದಾದರೆ, ಖಾಝಿಯ ಮೂಲಕ ಅಗತ್ಯಪಡಿಸಬಹುದಾಗಿದೆ. ವಿವಾಹವೇ ಅವಳ ರಕ್ಷಕ ಅಥವಾ ಖಾಝಿಯ ಅನುಮತಿಯ ಮೇರೆಗೆ ನಡೆದುದಲ್ಲವೇ. ಅವಳ ದೂರುಗಳು ಸಂಪೂರ್ಣ ಸರಿಯೆಂದು ಖಾಝಿಗೆ ಮನವರಿಕೆಯಾದರೆ ವಿವಾಹ ವಿಚ್ಛೇದನವು ವಿಧಿಸಲ್ಪಡುವುದು. ಆಗ, ಗಂಡನು ಅವಳಿಗೆ ನೀಡಿದ್ದ ಯಾವುದೇ ಸಂಪತ್ತನ್ನು ಅವಳಿಂದ ಹಿಂತಿರುಗಿ ಪಡೆಯಲು ಅವನಿಗೆ ಅವಕಾಶವಿರುವುದಿಲ್ಲ. ಆದರೆ, ಮಧ್ಯಸ್ಥರಾಗಲಿ ಖಾಝಿಯಾಗಲಿ ವಿವಾಹ ವಿಚ್ಛೇದನವನ್ನು ವಿಧಿಸಿ ಹೆಂಡತಿ ಅಪರಾಧಿಯೆಂದು ಸಾಬೀತುಪಡಿಸಿದರೆ ಗಂಡನು ಅವಳಿಗೆ ನೀಡಿದ್ದ, ಅವಳ ಅಧೀನದಲ್ಲಿರುವ ಸಂಪತ್ತನ್ನು ವಾಪಾಸುಕೊಡಲು ಅವಳೊಡನೆ ಅಗತ್ಯಪಡಿಸಬಹುದು. ಎಲ್ಲಾ ಕಾರ್ಯಗಳು ಇತ್ಯರ್ಥಗೊಂಡು ವಿವಾಹ ವಿಚ್ಛೇದನೆ ಆಗುವ ವರೆಗೆ ಅವಳನ್ನು ಸಲಹುವ ಹೊಣೆ ಗಂಡನಿಗೇ ಇರುವುದು.

ಇಸ್ಲಾಮಿ ವಿವಾಹ ಕ್ರಮಾನುಸಾರ ಸ್ತ್ರೀಗೆ ಲಭಿಸುವ ಬೇರೊಂದು ರಕ್ಷಾವ್ಯವಸ್ಥೆಯು, ಅವಳನ್ನು ಮದುವೆ ಮಾಡಿಸಿಕೊಡುವ ಅವಳ ರಕ್ಷಕನು ವಿವಾಹದ ಹೆಸರಿನಲ್ಲಿ ಧನವನ್ನಾಗಲಿ ಬೇರೆ ಯಾವುದೇ ಸಂಪತ್ತನ್ನಾಗಲಿ ಸ್ವೀಕರಿಸುವುದನ್ನು ಅದು ವಿರೋಧಿಸುತ್ತದೆಂಬುದಾಗಿದೆ. ತನ್ನ ಸಂರಕ್ಷಣೆಯಲ್ಲಿರುವ ಹೆಣ್ಣನ್ನು ಮದುವೆಮಾಡಿಸಿ ಕೊಡುವುದರಲ್ಲಿ ಆತನು ತನ್ನ ಅಧಿಕಾರವನ್ನು ದುರುಪಯೋಗಪಡಿಸದಿರಲಿಕ್ಕೂ ಪ್ರಲೋಭನೆಗೆ ಗುರಿಯಾಗದಿರಲಿಕ್ಕೂ ಇಸ್ಲಾಂ ಈ ಕ್ರಮವನ್ನು ನಿರ್ದೇಶಿಸಿದೆ.

## ಬಹುಪತ್ನೀತ್ವ

ನೈತಿಕವೂ ಆಧ್ಯಾತ್ಮಿಕವೂ ಆದ ಪರಿಗಣನೆಯನ್ನು ಮುಂದಿಟ್ಟು ಅಥವಾ ವಂಶವರ್ಧನೆಗಾಗಿ ಅಥವಾ ಆರೋಗ್ಯ ಪರವಾದ ಕಾರಣಗಳಿಂದ ಯಾ ರಾಷ್ಟ್ರೀಯ ಸಂಬಂಧಗಳ ನಿಮಿತ್ತ ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ವರಿಸಲಿಕ್ಕೆ ಪುರುಷನು ನಿರ್ಬಂಧಿತನಾಗುವ ಸಂದರ್ಭಗಳು ಕೆಲವೊಮ್ಮೆ ಒದಗುತ್ತವೆ. ಆದ್ದರಿಂದ ಬಹುಪತ್ನೀತ್ವವನ್ನು ಇಸ್ಲಾಂ ಅನುಮತಿಸಿರುತ್ತದೆ. ಆದರೆ ಪಾಲನೆ ಪೋಷಣೆ ಮಾಡುವುದರಲ್ಲೂ ದೈಹಿಕವಾದ ಸಾಮಿಪ್ಯ ಸಂಪರ್ಕಾದಿಗಳಲ್ಲೂ ಎಲ್ಲಾ ಸತಿಯರೊಂದಿಗೂ ಸಮಾನವಾಗಿ ವರ್ತಿಸಬೇಕೆಂಬ ನಿಬಂಧನೆಯನ್ನು ಆತನು ನಿಷ್ಕೃಷ್ಟವಾಗಿ ಅನುಸರಿಸಬೇಕಾಗಿದೆ. ಗಂಡನು ಪ್ರತಿಯೊಬ್ಬ ಪತ್ನಿಯೊಡನೆ ತುಲ್ಯವಾದ ಕಾಲಾವಧಿಯ ವರೆಗೆ ವಾಸಿಸಬೇಕೆಂದು ಆದೇಶಿಸಲಾಗಿದೆ.

ವಿವಾಹ ವಿಚ್ಛೇದನವನ್ನೂ ಬಹುಪತ್ನೀತ್ವವನ್ನೂ ಪಾಶ್ಚಾತ್ಯ ಪಂಡಿತರು ಮತ್ತು ಚಿಂತಕರು ಹಲವು ಸಲ ಆಕ್ಷೇಪಿಸಿ ಅವಹೇಳನ ಮಾಡಿದ್ದಾರೆ. ವಿವಾಹ ವಿಚ್ಛೇದನಕ್ಕೆ ಅನುಮತಿ ನೀಡಿದ ದೇವರ ಆ ವರಿಷ್ಠ ಪ್ರವಾದಿಯ ವಿರುದ್ಧ ಅಸಂಖ್ಯಾತ ಆಕ್ಷೇಪಣೆಗಳನ್ನು ಮಾಡಿದ ನಂತರ ಪಾಶ್ಚಾತ್ಯ ಲೋಕವು, ಸಿಡಿದು ನಾಶವಾಗಲಿರುವ ತಮ್ಮ ಸಾಮಾಜಿಕ ವ್ಯವಸ್ಥೆಯನ್ನು ಭದ್ರಪಡಿಸಲಿಕ್ಕಾಗಿ ಯಾವುದಾದರೂ ರೀತಿಯ ವಿವಾಹ ವಿಚ್ಛೇದನ ನಿಯಮವನ್ನು ಜಾರಿಗೊಳಿಸುವ ಆವಶ್ಯಕತೆಯನ್ನು ಮನಗಾಣಲು ತೊಡಗಿದೆಂಬುದು ಬಹಳ ಕೌತುಕಕರವಾಗಿದೆ! ದೇವರ ಪುಣ್ಯ ದೂತರನ್ನು ಅಪಮಾನಿಸಲಿಕ್ಕೂ ಆಕ್ಷೇಪಿಸಲಿಕ್ಕೂ ಹೊರಡುವುದಕ್ಕೆ ಮುಂಚಿತವಾಗಿ ಪಾಶ್ಚಾತ್ಯ ಲೋಕವು ಆ ಬಗ್ಗೆ ಸಾಕಷ್ಟು ಪರ್ಯಾಲೋಚನೆ ಮಾಡಿರುತ್ತಿದ್ದರೆ ಇಂದು ಸ್ವಂತ ತಪ್ಪನ್ನು ಒಪ್ಪಿಕೊಂಡು ಅವರಿಗೆ ಈ ಮುಖಭಂಗವನ್ನು ಸಹಿಸಬೇಕಾಗುತ್ತಿರಲಿಲ್ಲ. ಯುರೋಪು ಇಸ್ಲಾಮಿ ವಿವಾಹ ವಿಚ್ಛೇದನ ಕ್ರಮವನ್ನು ಅಂಗೀಕರಿಸಲು ಈಗಲೂ ಹಿಂಜರಿಯುತ್ತಿದೆಂದು ತೋರುವುದರಿಂದ ನಾನು ಅತ್ಯಂತ ವ್ಯಸನಿಸುತ್ತೇನೆ. ಇಸ್ಲಾಮಿ ವಿವಾಹ ವಿಚ್ಛೇದನ ನಿಯಮವು, ಒಂದು ಕಡೆಯಲ್ಲಿ ಸಾಧ್ಯವಿರುವಷ್ಟು ವಿವಾಹ ವಿಚ್ಛೇದನವನ್ನು ತಡೆಯುತ್ತದೆ; ಇನ್ನೊಂದು ಕಡೆಯಲ್ಲಿ ಕೊನೆಯ ಕ್ರಮವೆಂಬಂತೆ ಅದಕ್ಕೆ ಅನುಮತಿ ನೀಡುತ್ತದೆ. ಕೆಲವು ಪಾಶ್ಚಾತ್ಯ ಸರಕಾರಗಳೂ ಶಾಸನಸಭೆಗಳೂ ವಿವಾಹ ವಿಚ್ಛೇದನವನ್ನು ಸುಲಭಗೊಳಿಸುವ ಮಾರ್ಗೋಪಾಯ

ಗಳನ್ನು ರೂಪಿಸಿವೆ. ಆದರೆ ಇಂತಹ ನಿಯಮಗಳು ವಿವಾಹ ವಿಚ್ಛೇದನದ ಸಂಖ್ಯೆಯನ್ನು ಅನಪೇಕ್ಷಿತವಾಗಿ ಹೆಚ್ಚಿಸಿ ಎಲ್ಲಾ ಕುಟುಂಬ ಸಂಬಂಧಗಳ ಜೀವನಾಡಿಯಾಗಿರುವ ವೈವಾಹಿಕ ಪರಿಶುದ್ಧತೆಯನ್ನು ನಾಶಪಡಿಸಿ ಸಂಸಾರ ಜೀವನದ ಅಡಿಪಾಯವನ್ನು ಅಲುಗಾಡಿಸಲು ಹೇತುವಾಗಬಹುದು. ಈ ವಿಚಾರದಲ್ಲಿ ಯುರೋಪು ಇಂದು ಎದುರಿಸುತ್ತಿರುವ ಸಮಸ್ಯೆಗಳ ಸರಿಯಾದ ಪರಿಹಾರ ಮಾರ್ಗವು ಇಸ್ಲಾಮಿ ವಿವಾಹ ವಿಚ್ಛೇದನ ನಿಯಮಗಳನ್ನು ಅಂಗೀಕರಿಸುವುದು ಮಾತ್ರವಾಗಿದೆ.

ಬಹುಪತ್ನೀತ್ವದ ಕುರಿತು ಪಾಶ್ಚಾತ್ಯ ಲೋಕವು ಇದುವರೆಗೆ ಗಂಭೀರವಾಗಿ ಚಿಂತನೆಮಾಡಲು ತೊಡಗಿಲ್ಲವಾದರೂ ಆ ಬಗ್ಗೆ ಸಾಕಷ್ಟು ಪರ್ಯಾಲೋಚನೆ ಮಾಡಲು ಅವರು ನಿರ್ಬಂಧಿತರಾಗುವ ದಿನಗಳು ದೂರವಿಲ್ಲ. ನಿಯತಿನಿಯಮಗಳನ್ನು ಹೆಚ್ಚು ಕಾಲ ಅಲಕ್ಷ್ಯ ಮಾಡಲಿಕ್ಕಾಗದಷ್ಟೆ. ಬಹುಪತ್ನೀತ್ವವು ಲೈಂಗಿಕ ಅರಾಜಕತೆಗೆ ದಾರಿಮಾಡಿಕೊಡುತ್ತದೆಂದು ಕೆಲವರು ವಾದಿಸುತ್ತಾರೆ. ಆದರೆ, ಈ ಅನುಮತಿಯ ಪ್ರಯೋಜನ ಪಡೆಯುವ ಕಾರ್ಯದಲ್ಲಿ ಇಸ್ಲಾಂ ಇಟ್ಟಿರುವ ತಡೆಗಳ ಕುರಿತು ತುಸು ಚಿಂತಿಸುವುದಾದರೆ ಬಹುಪತ್ನೀತ್ವಕ್ಕೆ ಸಂಬಂಧಿಸಿದ ಇಸ್ಲಾಮಿ ನಿಯಮವು ವಿಷಯಲಂಪಟತನಕ್ಕೆ ಎಡೆಗೊಡುವುದಿಲ್ಲವೆಂದು ಮನಗಾಣಲು ಪ್ರಯಾಸವಾಗಲಾರದು. ತದ್ವಿರುದ್ಧವಾಗಿ, ಮನುಷ್ಯನು ಕೆಲವೊಮ್ಮೆ ಕೈಗೊಳ್ಳಲು ನಿರ್ಬಂಧಿಸಲ್ಪಡುವ ದೊಡ್ಡ ತ್ಯಾಗವಾಗಿದೆ ಅದು. ಲಂಪಟತನವೆಂಬುದು ಅನಿಯಂತ್ರಿತವಾಗಿ ಹೃದಯೋಲ್ಲಾಸವನ್ನು ಪಡೆಯುವುದಾಗಿರುವಾಗ, ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ವರಿಸಿ ಅವರೊಡನೆ ಇಸ್ಲಾಮಿ ವಿಧಿಯನುಸಾರ ನಿಷ್ಕೃಷ್ಟವಾದ ಸಮಭಾವನೆಯನ್ನು ಪಾಲಿಸುವ ಓರ್ವನನ್ನು ಲಂಪಟನೆಂದು ಕರೆಯುವುದು ಹೇಗೆಂದು ನನಗೆ ಮನವರಿಯಲು ಸಾಧ್ಯವಾಗುವುದಿಲ್ಲ. ಓರ್ವ ಪತ್ನಿಯೊಡನೆ ನೀವು ಯಾವ ರೀತಿಯಲ್ಲಿ ವರ್ತಿಸುವಿರೋ ಅದರಿಂದ ಯಾವ ತರದಲ್ಲೂ ಭಿನ್ನವಾಗಿರಬಾರದು ಇನ್ನೋರ್ವ ಪತ್ನಿಯೊಡನೆ ನಿಮ್ಮ ವರ್ತನೆ ಎಂದು ಇಸ್ಲಾಂ ಆದೇಶಿಸುತ್ತದೆ. ಓರ್ವ ಪತ್ನಿಯನ್ನು ಮತ್ತೋರ್ವ ಪತ್ನಿಗಿಂತ ಹೆಚ್ಚಾಗಿ ಒಬ್ಬನು ಪ್ರೀತಿಸಲೂ ಬಹುದು. ಆದರೆ ಅವಳಿಗೆ ಇನ್ನೊಬ್ಬ ಪತ್ನಿಗೆ ನೀಡುವುದಕ್ಕಿಂತ ಒಂದು ಪೈಸಾ ಕೂಡ ಹೆಚ್ಚು ಕೊಡುವುದಾಗಲಿ, ಇನ್ನೋರ್ವ ಪತ್ನಿಯ ಜೊತೆಯಲ್ಲಿರುವುದಕ್ಕಿಂತ ಒಂದು ಗಂಟೆಯಾದರೂ ಹೆಚ್ಚು ಕಾಲ ಅವಳ ಜೊತೆಯಲ್ಲಿರುವುದಾಗಲಿ ಸಲ್ಲದು. ಒಬ್ಬ ಪತ್ನಿಯೊಂದಿಗೆ ಒಂದು ದಿನವನ್ನು ಕಳೆಯುವುದಾದರೆ, ಮರುದಿನ ಇನ್ನೊಬ್ಬ ಪತ್ನಿಯೊಂದಿಗೆ ಕಳೆದು ಹಾಗೆ ಈರ್ವರೊಡನೆಯೂ ಸಮಾನವಾಗಿ ವರ್ತಿಸಬೇಕಾಗಿದೆ. ನೀವು ಒಬ್ಬ ಪತ್ನಿಗಿಂತ ಇನ್ನೊಬ್ಬ ಪತ್ನಿಯನ್ನು ಸಾವಿರ ಪಾಲು ಹೆಚ್ಚು ಪ್ರೀತಿಸುವುದಾದರೆ ಸಹ, ಇತರರಿಗೆ ಕಾಣಿಸಲ್ಪಡದ ಹಾಗೂ ಹೃದಯದಲ್ಲಿರುವ ಪ್ರೀತಿಯನ್ನು ಹೊರತು ಪಡಿಸಿ, ಇತರ ಎಲ್ಲಾ ವರ್ತನೆಗಳಲ್ಲೂ ಪರಿಪೂರ್ಣ ಸಮತೆಯನ್ನು ಪಾಲಿಸಬೇಕಾಗಿದೆ.

ಕೆಲವರು ಬಹುಪತ್ನೀತ್ವವನ್ನು ಕ್ರೂರವಾದ ಒಂದು ಸಂಪ್ರದಾಯವೆಂದು ಚಿತ್ರೀಕರಿಸುತ್ತಾರೆ. ಆದರೆ, ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ವರಿಸುವುದಕ್ಕಿರುವ ಅನುಮತಿಯನ್ನು ನಿಷೇಧಿಸುವುದು ಹಲವು ಬಾರಿ ಕ್ರೂರವಾಗಿರುತ್ತದೆಂದು ಹೇಳಬೇಕಾಗಿದೆ. ಉದಾಹರಣೆಗೆ, ಪತ್ನಿಗೆ ಚಿತ್ತರೋಗ ಬಾಧಿಸಿದರೆ, ಅಥವಾ ಗುಣವಾಗದ ವ್ಯಾಧಿಗಳಿಗಾಗಲಿ ಅಸ್ಪರ್ಶ ರೋಗಗಳಿಗಾಗಲಿ ಅವಳು ಈಡಾದರೆ, ಅಥವಾ ಅವಳು ಬಂಜೆಯಾದರೆ ಪತಿ ಏನು ಮಾಡಬೇಕು? ಇನ್ನೊಬ್ಬಳನ್ನು ಅವನು ವರಿಸದಿದ್ದರೆ ಸಮುದಾಯಕ್ಕೂ ಅವನಿಗೂ ದೋಷಕರವಾದ ಕೆಡುಕುಗಳಿಗೆ ಅವನು ಬಲಿಯಾಗುವನು. ಚಿತ್ತಭ್ರಮೆ ಪೀಡಿಸಿದ ಓರ್ವ ಸ್ತ್ರೀಯೊಂದಿಗೆ ಕಾಲಕಳೆಯಬೇಕೆಂದು ಅವನನ್ನು ನಿರ್ಬಂಧಿಸುವುದಾದರೆ ಅದು ಸಮುದಾಯ ಮತ್ತು ಭಾವೀ ಜನಾಂಗದೊಡನೆ ಮಾಡುವ ಕಠಿಣವಾದೊಂದು ಪಾತಕವಾಗಿರಬಹುದು. ಕುಷ್ಠರೋಗಿಯಾದ ಪತ್ನಿಯೊಂದಿಗೆ ಅವನು ಸಹವಾಸ ಮಾಡಬೇಕೆಂದು ನಿರ್ಬಂಧಪಡಿಸಿದರೆ ಅದೊಂದು ನಿಷ್ಠುರತೆಯಾಗಿರಬಹುದು. ಪತ್ನಿ ಬಂಜೆಯಾಗಿದ್ದು ಅವನು ಇನ್ನೊಂದು ಮದುವೆಯನ್ನು ಮಾಡಿಕೊಳ್ಳದಿದ್ದರೆ ಅದು ದೇಶದೊಡನೆ ಮತ್ತು ಜನರೊಡನೆ ತೋರಿಸುವ ಒಂದು ಅನೀತಿಯಾಗಿರಬಹುದು. ಮೇಲೆ ವಿವರಿಸಿದ ಯಾವುದೇ ಸಂದರ್ಭದಲ್ಲಿ ಒಬ್ಬನು ತನ್ನ ಪತ್ನಿಯನ್ನು ಪರಿತ್ಯಜಿಸಲು

ಸನ್ನದ್ಧನಾಗುವ ಪಕ್ಷದಲ್ಲಿ ಅದು ಅವನಿಗೆ ಅಪಮಾನ ಹೇತುವಾಗುವುದು. ಏಕೆಂದರೆ, ಅವಳು ಆರೋಗ್ಯವಾಗಿದ್ದ ಕಾಲದಲ್ಲಿ ಅವಳೊಂದಿಗೆ ಸಹಬಾಳ್ವೆ ಮಾಡಿ, ಅವನ ರಕ್ಷಣೆ ಅವಳಿಗೆ ಅನಿವಾರ್ಯವಾದ ಘಟ್ಟದಲ್ಲಿ ಅವಳನ್ನು ತೊರೆದನೆಂಬ ಆಪಾದನೆಗೆ ಅವನು ಗುರಿಯಾಗುವನು. ಹೀಗೆ ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ವರಿಸುವುದು ಅತ್ಯಾವಶ್ಯಕ ಮಾತ್ರವಲ್ಲ, ರಾಷ್ಟ್ರೀಯವೂ ನೈತಿಕವೂ ಆದ ಒಂದು ಕರ್ತವ್ಯವಾಗುವ ಘಟ್ಟಗಳು ಮಾನವ ಜೀವಿತದಲ್ಲಿ ಉಂಟಾಗಬಹುದು.

## ಮಾತಾಪಿತರು ಮತ್ತು ಮಕ್ಕಳು

ಕುಟುಂಬ ಜೀವನದಲ್ಲಿ ಪರಿಗಣಿಸಲ್ಪಡುವ ಇನ್ನೊಂದು ಸಂಬಂಧ ಮಾತಾಪಿತರು ಮತ್ತು ಮಕ್ಕಳು ಪರಸ್ಪರವುಳ್ಳದ್ದಾಗಿದೆ. ವಿವಾಹವು ಈ ಸಂಬಂಧಕ್ಕೆ ತಳಪಾಯ ಹಾಕುತ್ತದೆ. ಮಕ್ಕಳನ್ನು ಚೆನ್ನಾಗಿ ಪಾಲನೆ ಪೋಷಣೆ ಮಾಡಬೇಕೆಂದು ಇಸ್ಲಾಂ ಮಾತಾಪಿತರಿಗೆ ಆಜ್ಞಾಪಿಸುತ್ತದೆ. ದಾರಿದ್ರ್ಯಕ್ಕೆ ಹೆದರಿ ಶಿಶುಹತ್ಯೆ ಮಾಡುವುದನ್ನು ಇಸ್ಲಾಂ ನಿರೋಧಿಸುತ್ತದೆ. ಕೆಲವು ಪ್ರಾಕೃತ ಗೋತ್ರದವರೆಡೆಯಲ್ಲಿ ಇಂತಹ ಕ್ರಮ ರೂಢಿಯಲ್ಲಿತ್ತು. ಅದೇ ಪ್ರಕಾರ, ಯುದ್ಧಪ್ರಿಯರಾದ ಕೆಲವು ವರ್ಗಗಳೆಡೆಯಲ್ಲಿ ಪ್ರಚಾರದಲ್ಲಿದ್ದ ರೀತಿಯಲ್ಲಿ, ದುರಭಿಮಾನದಲ್ಲಿ ಹೆಣ್ಣು ಮಕ್ಕಳನ್ನು ಕೊಲ್ಲುವ ದುರಾಚಾರವನ್ನು ಇಸ್ಲಾಂ ನಿರೋಧಿಸಿತು. ಮಕ್ಕಳು ಹುಟ್ಟುವುದು ಪತಿಗೆ ಇಷ್ಟವಲ್ಲವಾದರೆ, ಸಂತಾನೋತ್ಪತ್ತಿಯನ್ನು ತಡೆಯುವ ಯಾವುದಾದರೂ ಕ್ರಮವನ್ನು ಕೈಗೊಳ್ಳುವುದಕ್ಕೆ ಮುಂಚೆ ಅವನು ಪತ್ನಿಯ ಸಮ್ಮತಿಯನ್ನು ಪಡೆಯಬೇಕಾಗಿದೆ. ಸಂತಾನಗಳು ಸಮುದಾಯಕ್ಕೆ ಪ್ರಯೋಜನಕಾರಿಗಳಾಗಿ ಶೋಭಿಸುವಂತಾಗಲು ಶೈಶವಾಸ್ಥೆಯಲ್ಲೇ ಸದಾಚಾರ ಶಿಕ್ಷಣವನ್ನು ನೀಡಿ ಬೆಳೆಸಬೇಕೆಂದು ಇಸ್ಲಾಂ ಆದೇಶಿಸುತ್ತದೆ. ಎಲ್ಲಾ ಮಕ್ಕಳೊಡನೆ ಸಮಾನವಾಗಿ ವರ್ತಿಸಬೇಕೆಂದೂ ಅವರು ದೊಡ್ಡವರಾದರೆ ಅವರಲ್ಲಿ ಯಾರಿಗಾದರೂ ಮಾತಾಪಿತರು ಏನನ್ನಾದರೂ ಕೊಡುಗೆ ನೀಡಲು ಬಯಸುವುದಾದರೆ ಎಲ್ಲರಿಗೂ ಸಮಾನವಾಗಿ ಆ ರೀತಿಯ ಕೊಡುಗೆಯನ್ನು ನೀಡಬೇಕೆಂದೂ ಅದು ಅಸಾಧ್ಯವೆಂದಾದರೆ ಯಾರಿಗೂ ಕೊಡಬಾರದೆಂದೂ ಇಸ್ಲಾಂ ಆದೇಶಿಸುತ್ತದೆ.

ಒಂದು ಮಗುವನ್ನು ಶಿಕ್ಷಿಸಬೇಕಾಗಿ ಬರುವಾಗ ತಲೆಗಾಗಲಿ ಮುಖಕ್ಕಾಗಲಿ ಹೊಡೆಯಬಾರದೆಂದೂ ಪ್ರಜ್ಞೇಂದ್ರಿಯಗಳ ಪ್ರಭವಕೇಂದ್ರ ಶಿರವಾದುದರಿಂದ ಅದಕ್ಕೆ ಊನವಾಗುವ ಮೂಲಕ ಮಗುವಿನ ಭಾವೀ ಜೀವನವನ್ನು ಅದು ಬಾಧಿಸುವುದೆಂದೂ ಇಸ್ಲಾಂ ತಂದೆ ತಾಯಿಗಳಿಗೆ ಎಚ್ಚರಿಕೆ ಕೊಡುತ್ತದೆ.

ಹೆಣ್ಮಕ್ಕಳ ಪರಿಪಾಲನೆ ಮತ್ತು ಶಿಕ್ಷಣದ ಬಗ್ಗೆ ವಿಶೇಷ ಲಕ್ಷ್ಯಗೊಡಲಿಕ್ಕೆ ಇಸ್ಲಾಂ ಅಗತ್ಯಪಡಿಸುತ್ತದೆ. ಪೈಗಂಬರರು ನುಡಿಯುತ್ತಾರೆ: "ಓರ್ವನಿಗೆ ಒಬ್ಬ ಪುತ್ರಿ ಇದ್ದು ಆತನು ಅವಳನ್ನು ಉತ್ತಮ ರೀತಿಯಲ್ಲಿ ಪೋಷಿಸುತ್ತಾ ಬಂದರೆ ನರಕ ಶಿಕ್ಷೆಯಿಂದ ಆತನು ರಕ್ಷಿಸಲ್ಪಡುವನು." ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣಕೊಟ್ಟು ಪೋಷಿಸುತ್ತಾ ಬಂದರೆ ದೇವರು ಆತನೊಡನೆ ಕರುಣೆಯಿಂದ ವರ್ತಿಸುವನೆಂದಾಗಿದೆ ಮೇಲೆ ಹೇಳಿದುದರ ತಾತ್ಪರ್ಯ. ಮತ್ತೂ ಪೈಗಂಬರರು ಹೇಳುತ್ತಾರೆ: "ಒಬ್ಬನಿಗೆ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳಾಗಲಿ, ತಮ್ಮಂದಿರು ಮತ್ತು ತಂಗಿಯಂದಿರಾಗಲಿ ಇದ್ದು ಅವರಿಗೆ ಆತನು ಉತ್ತಮ ಶಿಕ್ಷಣ ನೀಡಿ ಅವರ ಆವಶ್ಯಕತೆಗಳನ್ನು ಪೂರೈಸಿ ಕೊಡುವುದಾದರೆ ಆತನು ಸ್ವರ್ಗದಲ್ಲಿ ಪ್ರವೇಶಿಸುವನು." ಇನ್ನೂ ಪೈಗಂಬರರು ಹೇಳುತ್ತಾರೆ: "ಒಬ್ಬನ ಮನೆಯಲ್ಲಿ ಒಂದು ಹೆಣ್ಣು ಮಗು ಹುಟ್ಟಿ, ಆತನು ಅದನ್ನು ಕೊಲ್ಲದೆಯೂ ತೇಜೋವಧೆ ಮಾಡದೆಯೂ ಗಂಡು ಮಕ್ಕಳಿಗೆ ಆ ಹೆಣ್ಣುಮಗುವಿಗಿಂತ ಪ್ರಾಶಸ್ತ್ಯವನ್ನು ನೀಡದೆಯೂ ಇದ್ದರೆ ಆತನಿಗೆ ದೇವರು ಸ್ವರ್ಗ ನೀಡುವನು." ಹಾಗಿರುವ ಒಬ್ಬನು ದೈವಾನುಗ್ರಹಕ್ಕೆ ಹೆಚ್ಚು ಪಾತ್ರನಾಗುವನೆಂದು ಮಾತ್ರವಾಗಿದೆ ಅದರರ್ಥ. ಹಾಗಲ್ಲದೆ, ಆತನು ಏನು ಬೇಕಾದರೂ ಮಾಡಬಹುದೆಂದೂ ಎಂತಹ ಪಾಪಕೃತ್ಯ ಮಾಡಿದರೂ ಆತನ ಆಧ್ಯಾತ್ಮಿಕ ಜೀವಿತವನ್ನು ಅದು ಬಾಧಿಸಲಾರದೆಂದೂ ಅಲ್ಲ ಮೇಲೆ ಹೇಳಿದುದರ ತಾತ್ಪರ್ಯ.

ಸಂತಾನಗಳ ಆರೋಗ್ಯ ರಕ್ಷಣೆಯ ವಿಚಾರದಲ್ಲೂ ವಿಶೇಷ ಗಮನ ನೀಡಲಿಕ್ಕೆ ಸಹ ನಿರ್ದೇಶಿಸಲಾಗಿದೆ. ಪೈಗಂಬರರು ಈ ರೀತಿ ಹೇಳಿರುವರು: "ಮಕ್ಕಳಿಗೆ ಮೊಲೆಯುಣ್ಣಿಸುವ ಕಾಲದಲ್ಲಿ ನಿಮ್ಮ ಪತ್ನಿಯೊಂದಿಗೆ

ಸಂಪರ್ಗ ಮಾಡಿಕೊಂಡು ಸಂತಾನಗಳ ಆಯುಷ್ಯವನ್ನು ಕುಂಠಿತಗೊಳಿಸದಿರಿ." ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ಗಮನ ಕೊಡಬೇಕೆಂದು ಇದು ಸ್ಪಷ್ಟಪಡಿಸುತ್ತದೆ. ಮಕ್ಕಳ ಆರೋಗ್ಯವನ್ನು ಅನುಲಕ್ಷಿಸಿ ಒಬ್ಬನು ತನ್ನ ಮನೋದ್ವೇಗಗಳನ್ನು ನಿಯಂತ್ರಿಸಬೇಕೆಂದಾದರೆ, ಇದೇ ಉದ್ದೇಶಾರ್ಥದಲ್ಲೇ ಚಿಕ್ಕಮಟ್ಟದ ತ್ಯಾಗಗಳನ್ನು ಮಾಡಲಿಕ್ಕೂ ಆತನು ಸಿದ್ಧನಾಗುವನಲ್ಲವೇ.

## ವಾರಸು ಹಕ್ಕು

ಕುಟುಂಬ ಸಂಬಂಧದಲ್ಲಿ ಎದುರಾಗುವ ಇನ್ನೊಂದು ಸಮಸ್ಯೆ ವಾರಸು ಹಕ್ಕಾಗಿದೆ. ಇಸ್ಲಾಂ ವಾರಸು ಹಕ್ಕುಗಳನ್ನು ಕ್ರಮೀಕರಿಸಲಿಕ್ಕಾಗಿ ಅತ್ಯಂತ ಅನ್ಯೂನವಾದ ನಿಯಮಗಳನ್ನು ಜಾರಿಗೊಳಿಸಿದೆ. ಆ ನಿಯಮಾವಳಿಗಳ ಸಿಂಧುತ್ವ ಮತ್ತು ವಿವೇಚನೆಯ ಕುರಿತು ಯಾವನೇ ನಿಷ್ಪಕ್ಷಪಾತಿ ಚಿಂತಕನು, ಆತನು ಯಾವುದೇ ಧರ್ಮದವನಾದರೂ ಸರಿ, ಒಪ್ಪಲು ನಿರ್ಬಂಧಿತನಾಗುವನು. ಉತ್ತರಾಧಿಕಾರಿಗಳ ಪಟ್ಟಿಯಲ್ಲಿ ಇಸ್ಲಾಂ ಸ್ತ್ರೀಯರನ್ನೂ ಮಾತಾಪಿತರನ್ನೂ ಗಂಡಂದಿರನ್ನೂ ಹೆಂಡಂದಿರನ್ನೂ ಸೇರಿಸಿದೆ. ಇವರಿಗೆಲ್ಲ ಉತ್ತರಾಧಿಕಾರ ಇರಬೇಕೆಂಬ ವಿಚಾರದಲ್ಲಿ ಸಂಶಯಕ್ಕೆಡೆಯಿಲ್ಲ. ಯಾವನಾದರೂ ಒಬ್ಬ ಹಕ್ಕುದಾರನಿಗೆ ಅಥವಾ ಹೆಚ್ಚು ಹಕ್ಕುದಾರರಿಗೆ ಉತ್ತರಾಧಿಕಾರ ಪ್ರಕಾರವುಳ್ಳ ಹಕ್ಕುಗಳನ್ನು ಅಲ್ಲಗಳೆಯಬಾರದೆಂದೂ ಸೊತ್ತುಗಳು ಸರಿಯಾದ ಹಕ್ಕುದಾರರಿಗೆ ಲಭಿಸದಂತೆ ಅನ್ಯರಿಗೆ ದಾನ ಮಾಡಬಾರದೆಂದೂ ಇಸ್ಲಾಂ ವಿಧಿಸುತ್ತದೆ. ಒಬ್ಬನು ತನ್ನ ಸೊತ್ತಿನ ಮೂರನೆ ಒಂದಂಶವನ್ನು 'ವಸಿಯ್ಯತ್' (ಉಯಿಲು) ಮಾಡಬಹುದಾಗಿದೆ. ಅದಕ್ಕಿಂತ ಹೆಚ್ಚು ಮಾಡಬಾರದು. ಕಾರಣವೇನೆಂದರೆ, ಅದು ಆತನ ಉತ್ತರಾಧಿಕಾರಿಗಳಿಗೆ ವಿತರಿಸಲ್ಪಡಬೇಕಾಗಿದೆ. ಒಬ್ಬ ಉತ್ತರಾಧಿಕಾರಿಗೆ ಅನುಕೂಲವಾಗಿ ವೀಲು ಮಾಡಲೂ ಬಾರದು. ಏಕೆಂದರೆ, ಪ್ರತಿಯೊಬ್ಬ ಹಕ್ಕುದಾರನಿಗೆ ನಿಯಮಪ್ರಕಾರದ ಪಾಲು ಮಾತ್ರ ಹೊರತು ಹೆಚ್ಚು ದೊರಕಲಾರದು.

ಓರ್ವ ಸ್ತ್ರೀಗೆ ಪುರುಷನಿಗೆ ಸಿಗುವ ಪಾಲಿನ ಸರಿ ಅರ್ಧ ಪಾಲು ಮಾತ್ರವೇ ಸಿಗುವುದು. ಆದರೆ, ಕೆಲವು ವಿಶೇಷ ಸಂದರ್ಭಗಳಲ್ಲಿ ಪುರುಷನಷ್ಟೇ ಲಭಿಸಲೂ ಬಹುದು. ಸಾಮಾನ್ಯ ನಿಯಮದಿಂದ ಭಿನ್ನವಾಗಿರುವ ಈ ಕ್ರಮವನ್ನು ಸಮರ್ಥಿಸುವ ಕೆಲವು ಪ್ರತ್ಯೇಕ ಕಾರಣಗಳಿವೆ. ಒಬ್ಬ ಪುರುಷನಿಗೆ ಸ್ತ್ರೀಯ ಎರಡು ಪಾಲು ಹಕ್ಕು ಕೊಡುವ ನಿಯಮ ನೀತಿಪೂರ್ವಕವಲ್ಲವೆಂದು ಕೆಲವರು ಭಾವಿಸುತ್ತಾರೆ. ಆದರೆ ಇತರ ವಾರಸು ಹಕ್ಕು ನಿಯಮಗಳಲ್ಲಿ ಯಾವುದರಲ್ಲೂ ಸ್ತ್ರೀಯ ಹಕ್ಕನ್ನು ಮಾನ್ಯ ಮಾಡಲೇ ಇಲ್ಲ ಹಾಗೂ ಸ್ತ್ರೀಯ ಹಕ್ಕನ್ನು ಇಸ್ಲಾಂ ಮಾತ್ರ ಘೋಷಿಸಿದೆಯೆಂಬ ವಸ್ತುಸ್ಥಿತಿಯನ್ನು ಅವರು ಮರೆತುಬಿಡುತ್ತಾರೆ. ಇಸ್ಲಾಂ ಈ ವ್ಯತಿರೇಕವನ್ನು ಕಲ್ಪಿಸುವ ಕಾರಣವೇನೆಂದರೆ, ಸ್ತ್ರೀಗೆ ತನ್ನನ್ನು ಅಥವಾ ತನ್ನ ಮಕ್ಕಳನ್ನು ಸ್ವಯಂ ಪರಿಪಾಲಿಸುವ ಹೊಣೆಗಾರಿಕೆ ಇರುವುದಿಲ್ಲ. ಅವಳು ಎಂತಹ ಪರಿಸ್ಥಿತಿಯಲ್ಲೂ ಪತಿಯ ಸಂರಕ್ಷಣೆಗೆ ಒಳಗಾಗಿ ಬದುಕುತ್ತಾಳೆ. ತದ್ವಿರುದ್ಧವಾಗಿ, ಒಬ್ಬ ಪುರುಷನಿಗೆ, ತನ್ನ ಪತ್ನಿಯನ್ನೂ ಮಕ್ಕಳನ್ನೂ ಸಂರಕ್ಷಿಸಿ ಪೋಷಿಸುವ ಹೊಣೆಗಾರಿಕೆಯ ಒಂದು ಭಾರವಾದ ಹೊರೆಯನ್ನು ಹೊರಬೇಕಾಗಿದೆ. ಓರ್ವ ಸ್ತ್ರೀ ವಿವಾಹಿತಳಾಗುವುದರೊಂದಿಗೆ ಅವಳ ಮತ್ತು ಅವಳ ಮಕ್ಕಳ ಸಂರಕ್ಷಣೆಯ ಕುರಿತು ಅವಳು ಉತ್ಕಂಠೆಯಾಗಬೇಕಾಗಿರುವುದಿಲ್ಲ. ವಿವಾಹ ಮಾಡಿಕೊಳ್ಳದಿದ್ದರೆ – ಇಸ್ಲಾಂ ಅಧವತ್ವವನ್ನು ಒಪ್ಪುವುದಿಲ್ಲ – ಅವಳಿಗೆ ಸ್ವಂತ ಸೊತ್ತಿನಿಂದ ಜೀವನದ ಖರ್ಚನ್ನು ಭರಿಸಬಹುದಾಗಿದೆ. ಒಬ್ಬ ಪುರುಷನು ಮದುವೆ ಮಾಡುವುದರೊಂದಿಗೆ – ಅವಿವಾಹಿತನಾಗಿರುವುದನ್ನೂ ಇಸ್ಲಾಂ ಒಪ್ಪುವುದಿಲ್ಲ – ತನ್ನ ಪತ್ನಿ ಮಕ್ಕಳನ್ನು ಕೂಡ ಸಂರಕ್ಷಿಸಲು ಆತನು ಜವಾಬ್ದಾರನಾಗುತ್ತಾನೆ. ಈ ವಸ್ತುಸ್ಥಿತಿಯ ಆಧಾರದಿಂದ ಇಸ್ಲಾಂ ಪುರುಷನ ಪಾಲನ್ನು ಸ್ತ್ರೀಯ ಪಾಲಿನ ಇಮ್ಮಡಿಯಾಗಿ ನಿಗದಿಪಡಿಸಿದೆ. ಇದು ಸಂಪೂರ್ಣವಾಗಿ ನೀತಿಯುತವಾಗಿದೆ.

ಮಕ್ಕಳು ಮಾತಾಪಿತರನ್ನು ಗೌರವಿಸಬೇಕೆಂದೂ ಅವರು ವೃದ್ಧಾಪ್ಯವನ್ನು ಪಡೆದರೆ ಅವರ ರಕ್ಷಣೆಯನ್ನು ವಹಿಸಬೇಕೆಂದೂ ಇಸ್ಲಾಂ ಆಜ್ಞಾಪಿಸುತ್ತದೆ. ಅವರೊಡನೆ ಒರಟಾಗಿ ಮಾತಾಡಬಾರದೆಂದೂ ಯಾವ

# ಧ್ರುವಪ್ರದೇಶದಲ್ಲಿ ವ್ರತಾನುಷ್ಠಾನ*

## ಓರ್ವ 'ವಿಚಾರವಾದಿ'ಯ ಪ್ರಶ್ನೆಗೆ ಉತ್ತರ

—ಮೌಲಾನ ಬಿ. ಅಬ್ದುಲ್ಲಾ H. A.

ಓರ್ವ 'ವಿಚಾರವಾದಿ' ಮೇನಂಬಳ್ಳಿಯಲ್ಲಿರುವ ನನ್ನೋರ್ವ ಸ್ನೇಹಿತನಿಗೆ ಬರೆದ ಒಂದು ಪತ್ರದಿಂದ ಒಂದು ಭಾಗವನ್ನು ಆ ಸ್ನೇಹಿತನು ನನಗೆ ಬರೆದುಕಳುಹಿಸಿ ಅದರಲ್ಲಿ ಅಡಕವಾದ ಆಕ್ಷೇಪಣೆಗಳಿಗೆ ನಾನು ಉತ್ತರ ನೀಡಬೇಕೆಂದು ಬಯಸಿರುವರು. "ಸತ್ಯದೂತನ್" ಓದುಗರಿಗೆ ಪ್ರಯೋಜನವಾದೀತೆಂದು ಭಾವಿಸಿ ಪತ್ರದ ಭಾಗವನ್ನೂ ಅದರ ಉತ್ತರವನ್ನೂ ಇಲ್ಲಿ ಸೇರಿಸುತ್ತೇನೆ. ಆ 'ವಿಚಾರವಾದಿ' ಹೀಗೆ ಬರೆದಿದ್ದರು :

"ಕ್ರೈಸ್ತ ಧರ್ಮದ ತ್ರಿತ್ವದೈವ (?), ವಿಗ್ರಹಾರಾಧನೆ, ಪೌರೋಹಿತ್ಯ ಇತ್ಯಾದಿ ಹೆಚ್ಚು ಪರಿಷ್ಕರಿಸಲ್ಪಟ್ಟದ್ದಾಗಿದೆ ಇಸ್ಲಾಂ ಧರ್ಮ. ಅದು ಕ್ರೈಸ್ತ ಧರ್ಮ, ಹಿಂದೂ ಧರ್ಮಗಳಿಗಿಂತ ಬಹಳ ಭಿನ್ನವಾಗಿದೆ. ಸಾವಿರದೈನೂರು ವರ್ಷಗಳಿಗೆ ಪೂರ್ವದಲ್ಲಿ ರೂಪೀಕರಿಸಲ್ಪಟ್ಟ ಇಸ್ಲಾಮನ್ನು ಇನ್ನೂ ಪರಿಷ್ಕರಿಸಬಹುದಾಗಿದೆ. ಪೈಗಂಬರರ ಕಾಲದಲ್ಲಿ ಧ್ರುವಪ್ರದೇಶಗಳ ಬಗೆಗಿನ ಅರಿವು ಯಾರಿಗೂ ಇದ್ದಿರಲಿಲ್ಲ. ಕೆಲವು ವರ್ಷಗಳಿಗೆ ಮುಂಚೆ ಬೊಂಬಾಯಿಯಿಂದ ಸರಕು ಹೇರಿ ವ್ಲಾಡಿಯಾಸ್ಟಾಕ್ ಬಂದರಕ್ಕೆ ಹೋದ ಒಂದು ಹಡಗಿನಲ್ಲಿ ಐವತ್ತಕ್ಕಿಂತ ಹೆಚ್ಚು ನಾವಿಕರಿದ್ದರು. ಹಡಗು ವ್ಲಾಡಿಯಾಸ್ಟಾಕ್ ತಲಪಿದ ದಿವಸ ರಮದ್ಝಾನ್ ಆರಂಭವಾಗಿತ್ತು. ನಾವಿಕರು ಹಡಗಿನ ಮೇಲಂತಸ್ತಿಗೆ ಬಂದು ಸೂರ್ಯನಂ ಅಸ್ತಮಿಸಿದ ಬಳಿಕ ಆಹಾರ ಸೇವಿಸಲು ಕಾದುನಿಂತರು. ಅಸ್ತಮಿಸಲಿರುವಂತಹ ಸ್ಥಿತಿಯಲ್ಲಿರುವ ಸೂರ್ಯನ ನೆಲೆ ಆರು ತಿಂಗಳ ವರೆಗೆ ಇರುವುದೆಂದೂ ಆದ್ದರಿಂದ ಆರು ಗಂಟೆ ಕಳೆದುದರಿಂದ ಸೂರ್ಯನು ಅಸ್ತಮಿಸದಿದ್ದರೂ ನೀವು ಆಹಾರ ಸೇವಿಸಬಹುದೆಂದೂ ಕ್ಯಾಪ್ಟನ್ ಹಿತನುಡಿದುದನ್ನು ಕೇಳದೆ ಅವರು ಸೂರ್ಯನು ಅಸ್ತಮಿಸುವುದನ್ನು ಕಾದು ಅನೇಕ ಗಂಟೆಗಳ ಕಾಲ ಇದ್ದರು. ದೀರ್ಘವಾದ ಹಸಿವೆಯಿಂದ ಮೂವರು ಮಡಿದರು. ಅದರ ನಂತರ, ಕ್ಯಾಪ್ಟನ್ ಹೇಳಿದುದನ್ನು ನಂಬಿ ಸೂರ್ಯನು ಅಸ್ತಮಿಸದೆಯೇ ಉಳಿದವರು ಆಹಾರ ಸೇವಿಸಿದರು. ಈ ವರದಿ ಅಂದು ಲಂಡನ್ ಟೈಮ್ಸ್‌ನ ವ್ಲಾಡಿಯಾಸ್ಟಾಕ್ ಪ್ರತಿನಿಧಿ ತಂತಿ ಕೊಟ್ಟು ಲಂಡನ್ ಟೈಮ್ಸ್‌ನಲ್ಲಿ ಪ್ರಕಟಗೊಂಡದ್ದಾಗಿದೆ."

ಈ ಆಕ್ಷೇಪಣೆಯನ್ನು ಹೊರಡಿಸಿದ ವ್ಯಕ್ತಿ ಒಬ್ಬ ವಿಚಾರವಾದಿಯೆಂದು ನನ್ನ ಮಿತ್ರ ಬರೆದಿದ್ದಾರೆ. ಆ ವ್ಯಕ್ತಿ ತನ್ನ ಕುರಿತು ವಿಚಾರವಾದಿಯೆಂದು ಹೇಳಿಕೊಳ್ಳುವುದರಿಂದ ನಾವು ಅವರನ್ನು ವಿಚಾರವಾದಿಯೆಂದೇ

* ಸೌಜನ್ಯ : "ಸತ್ಯದೂತನ್" ಮಾರ್ಚ್ 1958

(24ನೇ ಪುಟದಿಂದ)

ರೀತಿಯಲ್ಲೂ ಅವರ ಮನಸ್ಸಿಗೆ ನೋವುಂಟು ಮಾಡಬಾರದೆಂದೂ ಅವರ ಕ್ಷೇಮಕ್ಕೋಸ್ಕರ ನಿರಂತರ ಪ್ರಾರ್ಥಿಸುತ್ತಿರಬೇಕೆಂದೂ ಇಸ್ಲಾಂ ಆದೇಶಿಸುತ್ತದೆ.

ಸಹೋದರರ ಪರಸ್ಪರ ಹೊಣೆಗಾರಿಕೆ ಸಂಬಂಧಿಸಿ ಇಸ್ಲಾಂ ಆದೇಶಿಸುವುದೇನೆಂದರೆ, ನಿರ್ಗತಿಕರಾದ ಸಹೋದರರನ್ನು ಇತರ ಸಹೋದರರು ರಕ್ಷಿಸಬೇಕೆಂದೂ ಹಾಗಿರುವ ಸಂದರ್ಭದಲ್ಲಿ ತಮ್ಮ ಸೊತ್ತಿನಿಂದ ಅಂತಹ ಸಹೋದರರಿಗೆ ಅವರು ಹಕ್ಕು ನೀಡಬೇಕೆಂದೂ ಆಗಿದೆ. ಅದೇ ಪ್ರಕಾರವೇ, ಇತರ ಸಂಬಂಧಿಗಳ ಕುರಿತು ಅಂತಹ ಕಷ್ಟಪಡುವ ಕುಟುಂಬ ಸದಸ್ಯರನ್ನು, ಅವರು ಸೊತ್ತನ್ನು ಬಿಟ್ಟು ಮೃತಪಡುವುದಾದರೆ ಅದಕ್ಕೆ ವಾರಸುದಾರರು ಯಾರಾಗುತ್ತಾರೋ ಅವರು ಸಂರಕ್ಷಿಸಬೇಕೆಂದು ಸಹ ಇಸ್ಲಾಂ ಆದೇಶಿಸುತ್ತದೆ. ★

ಹೇಳೋಣ. ಆ ಬಗ್ಗೆ ಪ್ರಶ್ನಿಸುವ ಗೋಜಿಗೆ ನಾನು ಹೋಗುವುದಿಲ್ಲ. ಆದರೆ, ಇಂದು ಸಾಮಾನ್ಯವಾಗಿ ನಾಸ್ತಿಕರು ವಿಚಾರವಾದಿಗಳೆಂದು ಕರೆಯಲ್ಪಡುತ್ತಾರೆ. ದೇವರಿದ್ದಾನೆಂಬ ನಂಬಿಕೆ ವಿಚಾರಹೀನವೆಂದಾದರೆ ಆ ವಿಷಯದಲ್ಲಿ ನಾಸ್ತಿಕರು ವಿಚಾರವಾದಿಗಳೇ ಆಗಿದ್ದಾರೆ. ಹೇಗಿದ್ದರೂ ನಾನು ಆ ಬಗ್ಗೆ ಹೇಳಲು ಹೋಗುವುದಿಲ್ಲ.

ಸಾವಿರದೈನೂರು ವರ್ಷ ಪೂರ್ವದಲ್ಲಿ ರೂಪೀಕರಿಸಲ್ಪಟ್ಟ ಇಸ್ಲಾಮನ್ನು ಇನ್ನೂ ಪರಿಷ್ಕರಿಸಬಹುದೆಂದು ಆ 'ವಿಚಾರವಾದಿ' ಹೇಳುತ್ತಾರೆ. ಈ ಬಗ್ಗೆ ಸಹ ನಾನು ಹೆಚ್ಚೇನೂ ಪ್ರತಿಪಾದಿಸುವುದಿಲ್ಲ. ಇಸ್ಲಾಮಿನ ಸಿದ್ಧಾಂತಗಳು ಮನುಷ್ಯನಿರ್ಮಿತವೆಂದಾಗಿದ್ದರೆ, ಮನುಷ್ಯರ ತಿಳುವಳಿಕೆ ಮತ್ತು ಬುದ್ಧಿ ಪರಿಮಿತ ಹಾಗೂ ವಿಕಾಸಗೊಳ್ಳುವಂತಹವುಗಳಾಗಿರುವುದರಿಂದ ಅವನ್ನು ಪರಿಷ್ಕರಿಸಬೇಕಾದ ಪ್ರಶ್ನೆ ಖಂಡಿತವಾಗಿಯೂ ಉದ್ಭವಿಸುತ್ತದೆ. ಆದರೆ, ಇಸ್ಲಾಂ ಕಲಿಸುವುದು ಹಾಗೂ ಮುಸ್ಲಿಮರು ನಂಬುವುದು ಏನೆಂದರೆ ಅದು ದೇವರಿಂದ ಅವತೀರ್ಣವಾದ ಧರ್ಮ ಹಾಗೂ ದೇವರು ತ್ರಿಕಾಲಜ್ಞಾನಿಯೂ ರಹಸ್ಯಜ್ಞನೂ ಆಗಿದ್ದಾನೆ. ಈ ನಂಬಿಕೆ ವಿಚಾರವಿರುದ್ಧವೆಂದು ಬೇಕಿದ್ದರೆ ಆ ವಿಚಾರವಾದಿ ಹೇಳಿಕೊಳ್ಳಲಿ. ಆದರೆ, ಮುಸ್ಲಿಮರು ಮೇಲಿನಂತೆ ನಂಬುವ ಕಾಲದ ವರೆಗೆ, ಕಾಲೋಚಿತವಲ್ಲವೆಂಬ ನ್ಯಾಯದಿಂದ ಇಸ್ಲಾಮನ್ನು ಪರಿಷ್ಕರಿಸುವ ಪ್ರಶ್ನೆ ಅವರಿಗೆ ಸಂಬಂಧಿಸಿದ ಮಟ್ಟಿಗೆ ಉದ್ಭವಿಸುವುದೇ ಇಲ್ಲ. ಸಾವಿರದೈನೂರು ವರ್ಷ ಕಳೆದ ಕಾರಣ ಒಂದು ತತ್ವವನ್ನು ಪರಿಷ್ಕರಿಸಬೇಕೆಂದಿಲ್ಲ. ಸಾವಿರದೈನೂರಲ್ಲ ಐದು ಸಾವಿರಕ್ಕೂ ಹೆಚ್ಚು ವರ್ಷ ಹಳೆಯದಾದ ಅನೇಕ ತತ್ವಗಳೂ ಸತ್ಯಗಳೂ ಇಂದು ಸಹ ರೂಢಿಯಲ್ಲಿದ್ದು ಜನರು ಅವನ್ನು ಅಂಗೀಕರಿಸುತ್ತಿದ್ದಾರಷ್ಟೇ. ತತ್ವವು ಸತ್ಯವೂ ಸ್ವೀಕಾರಾರ್ಹವೂ ಹೌದೋ ಎಂಬುದಾಗಿದೆ ಪ್ರಶ್ನೆ. ಒಟ್ಟಾರೆ, ಇಸ್ಲಾಮಿನಲ್ಲಿ ಪರಿಷ್ಕರಣೀಯವೋ ಸತ್ಯೇತರವೋ ಆದ ಯಾವುದಾದರೂ ತತ್ವವಾಗಲಿ ಪಾಠವಾಗಲಿ ಇದ್ದರೆ, ಅದನ್ನು ವಿಚಾರವಾದಿಯೆಂದು ಅಭಿಮಾನಿಸುವ ನಮ್ಮ ಆ ಸಹೋದರನು ಸಾಬೀತುಪಡಿಸಿ ತೋರಿಸಬೇಕಾಗಿದೆ! ಧ್ರುವಪ್ರದೇಶದಲ್ಲಿ ಉಪವಾಸ ಅನುಷ್ಠಿಸುವುದರ ಪ್ರಾಯೋಗಿಕತೆಯ ಕುರಿತಲ್ಲವೇ ಅವರ ಆಕ್ಷೇಪಣೆ. ಅದರ ಕುರಿತು ತುಸು ಚಿಂತನೆ ಮಾಡೋಣ.

ಇಸ್ಲಾಂ ಇಡೀ ಮನುಕುಲಕ್ಕಿರುವ ಧರ್ಮವಾದುದರಿಂದ ಮನುಷ್ಯರಿಗೆ ಅಸಾಧ್ಯವೂ ಅಪ್ರಾಯೋಗಿಕವೂ ಆದ ಯಾವುದೇ ಉಪದೇಶವನ್ನಾಗಲಿ ಅದು ನೀಡುವುದಿಲ್ಲ. ಮೌಲಿಕವೂ ಪ್ರಮಾಣಪರವೂ ಆದ ಪಾಠಗಳಾಗಿವೆ ಹೆಚ್ಚಾಗಿ ಖುರ್‌ಆನಿನಲ್ಲಿ ಅಡಕವಾಗಿರುವುವು. ಅವುಗಳಿಂದ ಕರ್ಮಮಾದರಿ ಮೂಲಕ ಇತರರಿಗೆ ಮನಗಾಣಿಸಿ ಕೊಡಬೇಕಾದ ಭಾಗಗಳು ಮುಹಮ್ಮದ್ ಪೈಗಂಬರರು (ಸ) ತನ್ನ ವರ್ತನೆಗಳ ಮೂಲಕ ಕಲಿಸಿಕೊಟ್ಟಿದ್ದಾರೆ. ಆದರೆ ಖುರ್‌ಆನಿನ ಗಣನೀಯವಾದ ಭಾಗಕ್ಕೆ ಆ ಪುಣ್ಯಪುರುಷರು ವ್ಯಾಖ್ಯಾನ ನೀಡಿಲ್ಲ. ಅಂತಹ ಸಂಗತಿಗಳಿಗೆ ಮುಸ್ಲಿಂ ಸಮುದಾಯ ಕಾಲೋಚಿತವಾದ ವ್ಯಾಖ್ಯಾನವನ್ನು ಕಂಡುಹಿಡಿಯಲೆಂದು ಅವರಿಗೆ ಬಿಟ್ಟುಕೊಟ್ಟಿದ್ದಾರೆ. ಇಸ್ಲಾಂ ಸಂಕೋಚ ವಿಕಾಸ ಸಾಧ್ಯತೆಯಿರುವ 'ಇಲಾಸ್ಟಿಕ್' ಧರ್ಮವಾಗಿದೆಯೆಂದು ಪ್ರಖ್ಯಾತ ಚಿಂತಕವಾದ ಜಾರ್ಜ್ ಬರ್ನಾರ್ಡ್ ಶಾ ಹೇಳಿದ್ದು ಸಹ ಆ ಕಾರಣದಿಂದಲೇ ಆಗಿದೆ. ಆಡಳಿತ, ಸಾಮುದಾಯಿಕ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮಸ್ಯೆಗಳಿಗೆ ಖುರ್‌ಆನಿನ ಮೌಲಿಕವಾದ ಅಧ್ಯಾಪನೆ ಹಾಗೂ ಪೈಗಂಬರರ ಚರ್ಯೆಗಳ ಪ್ರಕಾಶದಲ್ಲಿ ಪರಿಹಾರಗಳನ್ನು ಕಂಡು ಇಸ್ಲಾಮಿಕ ವಿಧಿಗಳನ್ನು ಕಾಲೋಚಿತವಾದ ತರದಲ್ಲಿ ಪ್ರಯೋಗಿಸಬಹುದಾಗಿದೆ. ಆ ಕಾರಣದಿಂದಲೇ ಇಸ್ಲಾಮಿನಲ್ಲಿ 'ಇಜ್ತಿಹಾದ್' ಎಂದರೆ, ಮೌಲಿಕ ತತ್ವಗಳ ಪ್ರಕಾಶದಲ್ಲಿ ಆವಶ್ಯಕ ಪರಿಹಾರಗಳನ್ನು ಕಂಡುಹಿಡಿಯುವುದು ಎಂಬುದಕ್ಕೆ ದೊಡ್ಡ ಸ್ಥಾನವಿದೆ.

ಉಪವಾಸವನ್ನು ಅನುಷ್ಠಿಸಲಿಕ್ಕೆ ಖುರ್‌ಆನ್ ನಿರ್ದೇಶಿಸಿದೆ. ಹಗಲು ಇಡೀ – ಸೂರ್ಯೋದಯ ಪೂರ್ವದಿಂದ ಅಸ್ತಮಾನದ ವರೆಗೆ – ಆಹಾರ ಪಾನೀಯಾದಿಗಳನ್ನು ವರ್ಜಿಸಬೇಕೆಂದು ಆದೇಶಿಸಲಾಗಿದೆ. ಆದರೆ, ಹೀಗೆ ಪ್ರಭಾತಪೂರ್ವದಿಂದ ಅಸ್ತಮಾನ ತನಕ ವ್ರತವನ್ನನುಷ್ಠಿಸಲು ನಿರ್ದೇಶಿಸಿರುವುದು ಒಂದು ವರ್ಷವನ್ನು ಹನ್ನೆರಡಾಗಿ ವಿಭಾಗಿಸಿ ಉಂಟಾಗುವ

ಚಾಂದ್ರಮಾನ ಮಾಸಗಳಲ್ಲೊಂದಾದ ರಮಝಾನ್ ಮಾಸದಲ್ಲಾಗಿದೆ. ಧ್ರುವಪ್ರದೇಶದಲ್ಲಿ ಆರುಮಾಸ ಕಾಲ ಹಗಲು ಮತ್ತು ಆರುಮಾಸ ಕಾಲ ರಾತ್ರೆಯೂ ಆದರೆ ಅಲ್ಲಿ ರಮಝಾನ್ ಮಾಸವೆಂಬ ಒಂದು ತಿಂಗಳೇ ಇರುವುದಿಲ್ಲ. ಅಲ್ಲಿ ಒಂದು ಹಗಲು ಮತ್ತು ಒಂದು ರಾತ್ರಿ ಇರುವ ಒಂದು ವರ್ಷವನ್ನು ಹನ್ನೆರಡಾಗಿ ವಿಭಾಗಿಸಿ ಮಾಸವನ್ನು ಲೆಕ್ಕಹಾಕಬೇಕಾದೀತು. ಆ ಲೆಕ್ಕ ಪ್ರಕಾರವಾಗಿರಬಹುದು ಅಲ್ಲಿ ಜನರು ಆಹಾರ, ನಿದ್ರೆ ಮುಂತಾದ ಯಾವುದೇ ಕಾರ್ಯವನ್ನು ಮಾಡುವುದು. ಆದ್ದರಿಂದ, ಅದೇ ಲೆಕ್ಕ ಪ್ರಕಾರವೇ ಅಲ್ಲಿ ಉಪವಾಸವನ್ನು ಸಹ ಅನುಷ್ಠಿಸಬಹುದಾಗಿದೆ. ವ್ರತಾನುಷ್ಠಾನವು ಆಧ್ಯಾತ್ಮಿಕವೂ ಮಾನಸಿಕವೂ ಆದ ಪುರೋಗತಿಗೂ ಶಾರೀರಿಕ ಒಳಿತಿಗೂ ಉಪಕಾರಿಯೆಂದೂ ದೇವಾಜ್ಞೆಗೆ ವಿಧೇಯವಾಗಿ ಆ ಆರಾಧನೆಯನ್ನು ನಿರ್ವಹಿಸಬೇಕೆಂದೂ ನಂಬುವ ಜನರಿಗೆ ಅದನ್ನು ಅನುಷ್ಠಿಸಲು ಪ್ರಯಾಸವಿಲ್ಲ. ಉಪವಾಸ ಮಾತ್ರವಲ್ಲ, ಪ್ರತಿಯೊಬ್ಬ ಮುಸ್ಲಿಂ ದಿನಂಪ್ರತಿ ಐದು ಸಲ ಸಲ್ಲಿಸಬೇಕಾದ ಪ್ರಾರ್ಥನೆಯನ್ನೂ ಈ ಪ್ರಕಾರ ಸಮಯ ನಿರ್ಣಯ ಮಾಡಿಕೊಂಡು ಅಲ್ಲಿ ನಿರ್ವಹಿಸಬೇಕಾಗಿದೆ.

ಇಸ್ಲಾಮಿನ ಎಲ್ಲಾ ನಿಯಮಗಳು ಸಾಮಾನ್ಯವಾಗಿ ಮನುಷ್ಯ ಸಮುದಾಯಕ್ಕೆ ಅನ್ವಯಿಸುತ್ತವೆ. ಒಟ್ಟಾರೆ, ಯಾವಾಗಲಾದರೂ ಎಲ್ಲಿಯಾದರೂ ಆ ಸಾಮಾನ್ಯ ನಿಯಮವನ್ನು ಪ್ರಯೋಗಿಸಲು ಅಸಾಧ್ಯವಾಗುವ ಪಕ್ಷದಲ್ಲಿ ಅಲ್ಲಿ ವಿಶೇಷ ನಿಯಮವನ್ನನುಸರಿಸಿ ವರ್ತಿಸಬೇಕಾಗಿದೆ. ಉಪವಾಸದ ಕುರಿತೇ ಖುರ್ಆನಿನಲ್ಲಿ ಪ್ರಸ್ತಾವಿಸಲ್ಪಟ್ಟಿರುವುದು ರೋಗಿಗಳೂ ಯಾತ್ರಿಕರೂ ರಮಝಾನ್ ಮಾಸದ ಬದಲಿಗೆ ಬೇರೆ ದಿನಗಳಲ್ಲಿ ಸೌಕರ್ಯವಿದ್ದಂತೆ ಅನುಷ್ಠಿಸಬೇಕೆಂದಾಗಿದೆ. ಒಟ್ಟಾರೆ, ಧ್ರುವಪ್ರದೇಶಕ್ಕೆ ತಲುಪುವ ಓರ್ವನಿಗೆ ಉಪವಾಸವನ್ನು ಅನುಷ್ಠಿಸಲು ಅಸಾಧ್ಯವಾಗುವ ಪಕ್ಷದಲ್ಲಿ ಆತನು ಆ ಸ್ಥಳವನ್ನು ಬಿಟ್ಟನಂತರ ಅದನ್ನು ಅನುಷ್ಠಿಸಿ ಪೂರ್ತಿ ಮಾಡಬಹುದಾಗಿದೆ. ಆತನು ಅಲ್ಲೇ ಸ್ಥಿರವಾಗಿ ವಾಸಿಸುತ್ತಿರುವನಾದರೆ ಇತರ ಎಲ್ಲಾ ಕಾರ್ಯಗಳು ನಿರ್ದಿಷ್ಟ ಸಮಯ ನಿರ್ಣಯ ಮತ್ತು ವ್ಯವಸ್ಥೆಗಳ ಮೂಲಕ ಮಾಡಬೇಕಾದಂತೆ ಉಪವಾಸವನ್ನು ಸಹ ಅನುಷ್ಠಿಸಬೇಕಾಗಿದೆ. "ರಮಝಾನ್' ಮಾಸದ ಆರಂಭವನ್ನು ಅರಿಯಲು ಅಸಾಧ್ಯವಾಗುವ ಪಕ್ಷದಲ್ಲಿ ನೀವು ಗಣಿಸಿ ನಿರ್ಧರಿಸಿಕೊಳ್ಳಿರಿ" ಎಂಬ ಪೈಗಂಬರರ ನಿರ್ದೇಶ "ಸಹೀಹುಬುಖಾರಿ" ಮತ್ತು "ಸಹೀಹುಮುಸ್ಲಿಂ" ಎಂಬ ಪ್ರಸಿದ್ಧ ಹದೀಸು ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ಒಟ್ಟಿನಲ್ಲಿ ಸೂರ್ಯೋದಯಾಸ್ತಮಾನಗಳು ಆರು ಮಾಸಗಳಿಗೊಮ್ಮೆ ಮಾತ್ರ ಸಂಭವಿಸುವ ಧ್ರುವ ಪ್ರದೇಶಗಳಲ್ಲಿ ಸಮಯ ನಿರ್ಣಯ ಮೂಲಕ ಪ್ರಾರ್ಥನೆ ವ್ರತಾದಿ ಇಸ್ಲಾಮಿ ಕರ್ಮಗಳನ್ನು ಅನುಷ್ಠಿಸಬೇಕೆಂಬುದು ನನ್ನ ಒಂದು ಅಭಿಪ್ರಾಯವಲ್ಲ, ಪೈಗಂಬರರ ನಿರ್ದೇಶವೆಂದೇ ಸಿದ್ಧವಾಗುತ್ತದೆ.

ಒಂದು ವಾರ, ಒಂದು ಮಾಸ ಮತ್ತು ಒಂದು ವರ್ಷ ದೀರ್ಘವುಳ್ಳ ದಿನಗಳು ಅಂತ್ಯಕಾಲದಲ್ಲಿ– ದಜ್ಜಾಲ್‌ನ ಆವಿರ್ಭಾವ ಕಾಲದಲ್ಲಿ– ಉಂಟಾಗುವುದೆಂದು ಪೈಗಂಬರರು ಒಂದು ಸಂದರ್ಭದಲ್ಲಿ ನುಡಿದಿದ್ದರು. ರಾತ್ರಿಹಗಲಿನ ಅಂತರದಲ್ಲಿ ಅನಲ್ಪವಾದ ದೈರ್ಘ್ಯ ಅನುಭವವಾಗುವ ಧ್ರುವ ಪ್ರದೇಶಗಳಂತಹ ಸ್ಥಳಗಳು ಕಂಡುಹಿಡಿಯಲ್ಪಡುವುವೆಂಬುದಾಗಿರಬಹುದು ಈ ಹೇಳಿಕೆಯ ತಾತ್ಪರ್ಯ. ಪೈಗಂಬರರು ಹಾಗೆ ನುಡಿದಾಗ ಒಂದು ಮಾಸ ಅಥವಾ ಒಂದು ವರ್ಷ ದೀರ್ಘವಾಗಿರುವ ದಿವಾನಿಶಗಳಲ್ಲಿ ಪ್ರಾರ್ಥನೆ ಅನುಷ್ಠಿಸುವುದು ಹೇಗೆಂದು ಶಿಷ್ಯರು ಪ್ರಶ್ನಿಸಿದಾಗ ಸಮಯವನ್ನು ನಿರ್ಣಯಿಸಿ ಮಾಡಬೇಕೆಂದು ಆಗ ಪ್ರವಾದಿವರ್ಯರು ಮರುತ್ತರ ನೀಡಿದ್ದರು. ಈ ವರದಿ "ಸಹೀಹುಮುಸ್ಲಿಂ" ನಲ್ಲಿ ಉಲ್ಲೇಖಿಸಲ್ಪಟ್ಟಿದೆ. ಒಟ್ಟಾರೆ, ಧ್ರುವಗಳ ಕುರಿತು ಆ ಕಾಲದಲ್ಲಿ ಅರಿವಿಲ್ಲದ ಕಾರಣದಿಂದಾಗಿ ಸೂರ್ಯಾಸ್ತಮಾನದ ವರೆಗೆ ಉಪವಾಸ ಅನುಷ್ಠಿಸಬೇಕೆಂದು ಇಸ್ಲಾಂ ಆದೇಶಿಸಿದೆಂಬ ಆಕ್ಷೇಪಣೆ ಸರಿಯಲ್ಲ. ಧ್ರುವಪ್ರದೇಶಗಳ ಕುರಿತು ತಿಳುವಳಿಕೆ ಹಾಗೂ ಅಲ್ಲಿಗೆ ಹೋಗುವ ಸೌಕರ್ಯಗಳು ಈ ಕಾಲದಲ್ಲಿ ಉಂಟಾಗಿದ್ದರೆ, ಭೂಮಧ್ಯದಲ್ಲಿ ಸೂರ್ಯನ ಉದಯಾಸ್ತಮಾನಗಳನ್ನು ಆಯಾ ನಿಮಿಷದಲ್ಲಿ ತಿಳಿಸುವ ಉಪಕರಣಗಳೂ ಯಂತ್ರಗಳೂ ಅದರೊಂದಿಗೆ ಈ ಕಾಲದಲ್ಲಿ ಕಂಡುಹಿಡಿಯಲ್ಪಟ್ಟಿವೆ. ನಿಮಿಷ, ಗಂಟೆ, ದಿನ, ಮಾಸ ಇತ್ಯಾದಿಗಳನ್ನು ತಿಳಿಸುವ ಗಡಿಯಾರಗಳೂ ರೇಡಿಯೋ ಮುಂತಾದ ಉಪಕರಣಗಳೂ

ಇಂದು ಇವೆಯಷ್ಟೇ. ಒಟ್ಟಿನಲ್ಲಿ, ಈ ಉಪಕರಣಗಳ ಮೂಲಕ ಧ್ರುವಪ್ರದೇಶಗಳಲ್ಲೂ ಇಸ್ಲಾಮಿಕ ಕರ್ಮಗಳನ್ನು ನಿರ್ಬಾಧಿತವಾಗಿ ಅನುಷ್ಠಿಸಬಹುದಾಗಿದೆ,

ರಮಝಾನ್ ಮಾಸದಲ್ಲಿ ವ್ರತ ಅನುಷ್ಠಿಸಬೇಕೆಂದು ಮಾತ್ರವಲ್ಲ ಒಂದು ವರ್ಷದಲ್ಲಿ ಹನ್ನೆರಡು ತಿಂಗಳುಗಳಿವೆಯೆಂದು ಸಹ ಖುರ್‌ಆನಿನಲ್ಲಿ ಪ್ರಸ್ತಾಪಿಸಲಾಗಿದೆ. ಧ್ರುವಪ್ರದೇಶದಲ್ಲಿ ಹಾಗಲ್ಲವಾದುದರಿಂದ ಅದನ್ನು ಕೂಡ ಬದಲಾಯಿಸಿ ಬರೆಯಬೇಕೆಂದು ಈ ಆಕ್ಷೇಪಕನು ಹೇಳಬಹುದು. ಓರ್ವ ಸ್ತ್ರೀ ವಿವಾಹ ವಿಚ್ಛೇದಿತಳಾದರೆ ಪುನರ್ವಿವಾಹಕ್ಕೆ ಮೂರು ತಿಂಗಳು ಕಳೆಯಬೇಕೆಂದೂ ಓರ್ವ ವಿಧವೆ ಮರು ಮದುವೆಯಾಗಲು ನಾಲ್ಕು ತಿಂಗಳು ಹತ್ತು ದಿವಸ ಕಾಯಬೇಕೆಂದೂ ಓರ್ವ ಸಾಮಾನ್ಯ ಮಹಿಳೆ ಗರ್ಭವತಿಯಾಗುವ ಮೊದಲ್ಗೊಂಡು ಪ್ರಸವಿಸಿ ಶಿಶುವಿನ ದುಗ್ಧಪಾನ ಕೊನೆಗೊಳ್ಳುವ ವರೆಗಿನ ಕಾಲಾವಧಿ 30 ತಿಂಗಳೆಂದೂ ಖುರ್‌ಆನಿನಲ್ಲಿದೆ. ಈ ಎಲ್ಲಾ ವಿಚಾರಗಳು ಧ್ರುವಪ್ರದೇಶದಲ್ಲಿ ನಡೆಯುವ ಅಲ್ಲಿನ ಹಗಲು ಮತ್ತು ರಾತ್ರಿ ಕೂಡಿದ ದಿವಸವನ್ನು ಲೆಕ್ಕಹಾಕಿಯಾಗಿರಲಿಕ್ಕಿಲ್ಲ. ಸಾಮಾನ್ಯವಾಗಿ ಸ್ತ್ರೀಯರ ಗರ್ಭಕಾಲ 9 ತಿಂಗಳಷ್ಟೇ. ಅಂದರೆ, ಸಾಮಾನ್ಯವಾಗಿ ಗರ್ಭಧಾರಣೆಯ ದಿವಸ ಸ್ತ್ರೀಯರಿಗೆ ತಿಳಿಯದಿರುವುದರಿಂದ ಕೊನೆಯ ಮುಟ್ಟಿನ ಆರಂಭ ದಿವಸ ಮೊದಲ್ಗೊಂಡು 270 ದಿವಸ ಗರ್ಭಕಾಲವಾಗಿ ಎಣಿಸಲ್ಪಡುತ್ತದೆ. ಆದರೆ ಧ್ರುವಪ್ರದೇಶದಲ್ಲಿ ಈ ಕಾಲಾವಧಿಯನ್ನು ಲೆಕ್ಕಹಾಕುವುದು ಅಲ್ಲಿನ ದೀರ್ಘವಾದ ದಿನರಾತ್ರಿಗಳ ಪ್ರಕಾರವಾಗಿರಲಿಕ್ಕಿಲ್ಲವಷ್ಟೇ. ಹಾಗೆ ಲೆಕ್ಕಹಾಕುವುದಾದರೆ ಧ್ರುವಪ್ರದೇಶಗಳಲ್ಲಿ ಓರ್ವ ಸ್ತ್ರೀ ಗರ್ಭಧರಿಸಿ ಪ್ರಸವಿಸಲಿಕ್ಕೆ ನಮ್ಮ 270 ವರ್ಷಗಳು ಬೇಕೆಂದು ಹೇಳಬೇಕಾದೀತು. ಅಲ್ಲಿನ ಆರು ತಿಂಗಳ ಕಾಲದ ಹಗಲಿನಲ್ಲಿ ಜನರು ಮೂರೋ ನಾಲ್ಕೋ ಸಲ ಮಾತ್ರ ಉಂಡು ನಾಲ್ಕೋ ಐದು ಸಲ ಮಾತ್ರ ಕುಡಿದು ಆರು ಮಾಸಕಾಲ ನಿದ್ರೆಮಾಡುವುದಾದರೆ, ಸೂರ್ಯಾಸ್ತಮಾನದ ವರೆಗೆ ಆಹಾರವನ್ನು ತ್ಯಜಿಸಿ ವ್ರತ ಅನುಷ್ಠಿಸುವುದು ಅವರಿಗೆ ವಿಷಮಕರವಾಗಲಿಕ್ಕಿಲ್ಲ. ಧ್ರುವಪ್ರದೇಶದಲ್ಲಿ ವಾಸಿಸುವವರು ಮನುಷ್ಯರೂ ಮನುಷ್ಯರಿಗೆ ಸಾಮಾನ್ಯವಾಗಿ ಅನ್ವಯಿಸುವ ಎಲ್ಲಾ ನಿಯಮಗಳಿಗೆ ಒಳಗಾಗುವವರೂ ಹೌದಾದರೆ ಇಸ್ಲಾಮಿನ ಈ ಆಜ್ಞೆಯನ್ನು ಪಾಲಿಸಲು ಅವರಿಗೆ ಸಾಧ್ಯವಿದೆ. ತಿನ್ನುವ ವಿಚಾರದಲ್ಲಿ ಇಲ್ಲಿನ ನಿಯಮಗಳೇ ಅವರಿಗೆ ಸಹ ಇರುವುದಾದರೆ, ತಿನ್ನದಿರುವ ವಿಚಾರದಲ್ಲಿ–ವ್ರತಾನುಷ್ಠಾನದಲ್ಲಿ–ಆ ನಿಯಮಗಳು ಅನುಸರಣೀಯವಲ್ಲವೆಂದು ಭಾವಿಸುವುದು ವಿಚಾರಶೂನ್ಯತೆಯೂಗಿದೆ.

ಆ 'ವಿಚಾರವಾದಿ' ಹೇಳಿದ ವ್ಲಾಡಿಯೂಸ್ಟಾಕ್ ಬಂದರ ಸೈಬೀರಿಯೂದ ಆಗ್ನೇಯ ದಿಕ್ಕಿನಲ್ಲಿ, ಜಪಾನಿನ ಪಶ್ಚಿಮಕ್ಕೆ ಕೊರಿಯದ ಸಮೀಪ ದಕ್ಷಿಣದಲ್ಲಿ 40° ಮತ್ತು 55° ಅಕ್ಷಾಂಶದ ಮಧ್ಯೆ ಇರುತ್ತದೆಂದೂ ಧ್ರುವದಲ್ಲಿ ಅಲ್ಲವೆಂದೂ ಸೂಚಿಸಲು ನಾನು ಇಚ್ಛಿಸುತ್ತೇನೆ. ಅದೇ ಅಕ್ಷಾಂಶದ ಮಧ್ಯೆ ಅನೇಕ ಯುರೋಪ್ಯನ್ ಪಟ್ಟಣಗಳಿವೆ. ಅಲ್ಲೆಲ್ಲಾ ನಮ್ಮ ಪ್ರದೇಶಕ್ಕೆ ಹೋಲಿಸಿದರೆ ರಾತ್ರಿ ಹಗಲುಗಳಿಗೆ ಕೆಲವು ಗಂಟೆಗಳಷ್ಟು ಹೆಚ್ಚು ಕಮ್ಮಿ ಇರಬಹುದು ಹೊರತು ಅಲ್ಲೆಲ್ಲೂ ಆರು ತಿಂಗಳು ಹಗಲು ಮತ್ತು ಆರು ತಿಂಗಳು ರಾತ್ರಿ ಇಲ್ಲ. ಮನುಷ್ಯವಾಸಕ್ಕೆ ಯೋಗ್ಯವಲ್ಲದ ಮತ್ತು ಅಪ್ರಾಪ್ಯವೆಂದು ಭಾವಿಸಲ್ಪಟ್ಟಿದ್ದ ಧ್ರುವ ಪ್ರದೇಶಗಳಿಗೆ ತಲುಪಲು ಮನುಷ್ಯನು ಎಷ್ಟೆಷ್ಟು ಸಾಹಸಗಳನ್ನೂ ಕಷ್ಟತೆಗಳನ್ನೂ ಸಹಿಸಬೇಕಾಗಿದೆಯೆಂದು ನೆನಸುವಾಗ, ಆರು ಮಾಸ ಹಗಲು ಮತ್ತು ಆರು ಮಾಸ ರಾತ್ರಿ ಇರುವ ಧ್ರುವ ಪ್ರದೇಶಕ್ಕೆ ಸರಕು ಹೇರಿ ಬೊಂಬಾಯಿಯಿಂದ ಒಂದು ವ್ಯಾಪಾರ ಹಡಗು ಹೊರಟು ಹೋಯಿತೆಂದೂ ಆರು ತಿಂಗಳ ತನಕ ಸೂರ್ಯನು ಅಸ್ತಮಿಸಲಿಕ್ಕಿಲ್ಲವೆಂದು ವ್ರತ ಅನುಷ್ಠಿಸಿದ ಮುಸ್ಲಿಂ ಕೆಲಸಗಾರರೊಡನೆ ಕ್ಯಾಪ್ಟನ್ ಹೇಳಿದನೆಂದೂ ಇತ್ಯಾದಿಯಾಗಿ 'ಉಪ್ಪು ಕಾರ' ಹಾಕಿ 'ವಿಚಾರವಾದಿ'ಯೂದ ಆ ಸ್ನೇಹಿತನು ಹೇಳಿದುದರಲ್ಲಿ ನನಗೆ ಆಶ್ಚರ್ಯವಾಗುತ್ತದೆ.

ಒಂದು ವ್ಯಾಪಾರ ಹಡಗದಲ್ಲಿ ವ್ಲಾಡಿಯೂಸ್ಟಾಕ್ ತಲಪಿದ ಮುಸ್ಲಿಂ ಕೆಲಸಗಾರರು ವ್ರತ ಅನುಷ್ಠಿಸಿ, ಸೂರ್ಯನು ಅಸ್ತಮಿಸಲಿಕ್ಕಿಲ್ಲವೆಂದು ಕಪ್ತಾನ ಹೇಳಿ ಸಹ ಉಪವಾಸವನ್ನು ಮುರಿಯದಿದ್ದುದು ಅವರ ಅಜ್ಞಾನದಿಂದೆಂಬುದು ಸ್ಪಷ್ಟವಷ್ಟೇ. ಅವರಿಗೆ

# ಯೇಸುಕ್ರಿಸ್ತರು ಮತ್ತು ರೋಗಶಾಂತಿ

ಮಹಾತ್ಮ ಯೇಸುಕ್ರಿಸ್ತರಿಗೆ ಜನರ ಪ್ರಾರ್ಥನೆಗಳನ್ನು ಕೇಳಲಿಕ್ಕೂ ಪ್ರಾರ್ಥನೆಗಳಿಗೆ ಉತ್ತರನೀಡಲಿಕ್ಕೂ ಸಾಧ್ಯವಿದೆಯೇ? ಸಾಧ್ಯವಿಲ್ಲವೆಂದು ಬೈಬಲ್‌ನಿಂದ ತಿಳಿದು ಬರುತ್ತದೆ. ಯಾಕೆಂದರೆ, ಸರ್ವಲೋಕ ಪಾಲಕನಾದ ಏಕ ದೇವನು ಮಾತ್ರ ಪ್ರಾರ್ಥಿಸಲ್ಪಡಲು ಅರ್ಹನು. ಯೇಸುಕ್ರಿಸ್ತರು ತಾನು ದೇವರೆಂಬುದಾಗಿ ಯಾವತ್ತೂ ಹೇಳಿರಲಿಲ್ಲ. ಬೈಬಲ್‌ನಲ್ಲಿ ಯೇಸು ಹೇಳುವುದನ್ನು ಕಾಣಿರಿ:

"ದೇವರಿಂದ ಕೇಳಿದ ಸತ್ಯವನ್ನು ಹೇಳಿದವನಾದ ನನ್ನನ್ನು ಕೊಲ್ಲುವುದಕ್ಕೆ ನೋಡುತ್ತಿದ್ದೀರಿ"

(ಯೋಹಾನ 8 : 40)

"ಇಸ್ರಾಯೇಲ್ ಜನವೇ ಕೇಳು, ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದೇ ಮೊದಲನೆಯ ಆಜ್ಞೆ." (ಮಾರ್ಕ್ 12:29,30)

ಇದರಿಂದ ಯೇಸು ದೇವರಲ್ಲವೆಂದೂ ಏಕದೇವನಿಂದ ಆರಿಸಿ ಕಳುಹಿಸಲ್ಪಟ್ಟ ಕೇವಲ ಒಬ್ಬ ಪ್ರವಾದಿಯಾಗಿದ್ದರೆಂದೂ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಯೇಸುಕ್ರಿಸ್ತರ ದೌತ್ಯವು ಇಸ್ರಾಯೇಲ್ ಮನೆತನದ ತಪ್ಪಿಸಿಕೊಂಡ ಕುರಿಗಳಿಗೆ ಮಾತ್ರವೇ ಸೀಮಿತವಾಗಿತ್ತು. (ಮತ್ತಾಯ 15 : 24)

ಅದೂ ಅಲ್ಲದೆ, ಆಪತ್ಕಾಲದಲ್ಲಿ ಸ್ವಯಂ ರಕ್ಷಿಸಿಕೊಳ್ಳಲು ಸಾಧ್ಯವಾಗದೆ ಜಗತ್ಪಾಲಕನಾದ ದೇವನೊಡನೆ ಯೇಸುಕ್ರಿಸ್ತರು ಅತ್ಯಂತ ವಿನಯದಿಂದಲೂ ಭಕ್ತಿ ಪೂರ್ವಕವಾಗಿಯೂ ಪ್ರಾರ್ಥಿಸಿದ್ದರೆಂದು ಕೂಡ ಬೈಬಲ್ ತಿಳಿಸಿಕೊಡುತ್ತದೆ. ಯೇಸುಕ್ರಿಸ್ತರನ್ನು ಶಿಲುಬೆಗೆ ಹಾಕಿ ಕೊಂದು ಆ ಮೂಲಕ ಅವರನ್ನು ಒಬ್ಬ ಶಾಪಗ್ರಸ್ತ ಕಳ್ಳವಾದಿಯೆಂದು ಸಾಬೀತುಪಡಿಸಲು ಶತ್ರುಗಳು ತೀರ್ಮಾನಿಸಿರುವರೆಂಬುದನ್ನು ತಿಳಿದ ಬಳಿಕ ಅವರು ತನ್ನ ಶಿಷ್ಯರೊಂದಿಗೆ ಗೆತ್ಸೇಮನೆ ಎಂಬ ತೋಟಕ್ಕೆ ಹೋಗಿ ಅಲ್ಲಿ ರಾತ್ರಿಯಿಡೀ ನಿದ್ರೆಬಿಟ್ಟು ದೇವರೊಡನೆ ದೈನ್ಯದಿಂದ ಪ್ರಾರ್ಥಿಸಿದ ವಿವರ ಬೈಬಲಿನಲ್ಲಿ ಈ ರೀತಿ ಉಲ್ಲೇಖಿಸಲ್ಪಟ್ಟಿದೆ: "ಮತ್ತು ಶಿಷ್ಯರೊಡನೆ–ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ. ನೀವು ಇಲ್ಲೇ ಇದ್ದು ಎಚ್ಚರವಾಗಿರಿ ಎಂದು ಹೇಳಿ ಸ್ವಲ್ಪ ಮುಂದೆ ಹೋಗಿ ನೆಲದ ಮೇಲೆ ಅಡ್ಡಬಿದ್ದು ಸಾಧ್ಯವಾದರೆ ಆ ಗಳಿಗೆ ತನ್ನನ್ನು ಬಿಟ್ಟುಹೋಗುವಂತೆ **ದೇವರನ್ನು ಪ್ರಾರ್ಥಿಸಿ**–ಅಪ್ಪಾ, ತಂದೆಯೇ, ನಿನಗೆ

---

(28ನೇ ಪುಟದಿಂದ)

ಭೂಗೋಳ ಶಾಸ್ತ್ರದ ಕುರಿತು ತಿಳುವಳಿಕೆ ಇರುತ್ತಿದ್ದರೆ ಕಪ್ತಾನ ಹೇಳದೆಯೇ ಸಮಯವನ್ನು ತಿಳಿದುಕೊಂಡು ಅವರು ಉಪವಾಸವನ್ನು ಮುಕ್ತಾಯಗೊಳಿಸುತ್ತಿದ್ದರು. ಆದರೆ ಭೂಗೋಳ ಶಾಸ್ತ್ರ ಮಾತ್ರವಲ್ಲ ಉಪವಾಸದ ಕುರಿತಿರುವ ಪಾಠವೇ ಅವರಿಗೆ ಅರಿವಿಲ್ಲವೆಂದು ತಿಳಿಯಬೇಕಾಗಿದೆ. ನಿಶ್ಚಿತ ಸಮಯವಾದರೆ ಉಪವಾಸವನ್ನು ಮುರಿಯಬಹುದೆಂಬುದು ಇಸ್ಲಾಮಿಕ ಪಾಠವಾದುದರಿಂದ, ಅದಕ್ಕೆ ವಿರುದ್ಧವಾಗಿ, ಸೂರ್ಯನು ಅಸ್ತಮಿಸಿದರೆ ಮಾತ್ರ ಉಪವಾಸವನ್ನು ಕೊನೆಗೊಳಿಸಲಾಗುವುದೆಂದು ಅವರು ಹಠಮಾಡಿದ್ದು ತಪ್ಪು. ಈ ತಪ್ಪಿಗೆ ಹೊಣೆ ಅವರೇ ಆಗಿದ್ದಾರೆ. ಅದಕ್ಕೆ ಇಸ್ಲಾಂ ಹೊಣೆಗಾರಿಕೆ ವಹಿಸಬೇಕಾಗಿಲ್ಲ. ಕೆಲವು 'ಕಲಾಸಿ'ಗಳು ಅಜ್ಞತೆ ಮತ್ತು ಅವಿವೇಕದಿಂದ ಮಾಡಿದ ಒಂದು ತಪ್ಪನ್ನು ಅಥವಾ ಮೂರ್ಖತನವನ್ನು ಆಧಾರವಾಗಿರಿಸಿ ಇಸ್ಲಾಂ ಧರ್ಮವನ್ನು ಪರಿಷ್ಕರಿಸಬೇಕೆಂಬ ಅಭಿಪ್ರಾಯವನ್ನು ಸೂಚಿಸಿದ ಆ ಸ್ನೇಹಿತನಿಗೆ ತನ್ನ "ವಿಚಾರವಾದ"ವು ಅತ್ಯಂತ ವಿಚಾರಹೀನವಾದ ವಾದವೆಂದು ಮನಗಾಣಲು ಸಾಧ್ಯವಾಗದಿದ್ದರೆ ನಾನೇನೂ ಆಶ್ಚರ್ಯಪಡುವುದಿಲ್ಲ!

ಎಲ್ಲವೂ ಸಾಧ್ಯ: ಈ ಪಾತ್ರೆಯನ್ನು (ಶಿಲುಬೆಯ ಮರಣವನ್ನು–ಪ್ರ.) ನನ್ನಿಂದ ತೊಲಗಿಸು. ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ ಅಂದನು." (ಮಾರ್ಕ 14 : 34-36)

ಹೀಗೆ ರಾತ್ರಿಯಿಡೀ "ರಕ್ತವನ್ನು ಬೆವರಾಗಿಸಿ" ದೇವರೊಡನೆ ಪ್ರಾರ್ಥಿಸಿದ ಹಾಗೂ ನಿದ್ರೆಮಾಡುತ್ತಿದ್ದ ಶಿಷ್ಯರನ್ನು ಎಬ್ಬಿಸಿ ತನ್ನ ಈ ಅಸಹಾಯಕ ಪರಿಸ್ಥಿತಿಯಲ್ಲಿ ದೇವರೊಡನೆ ಪ್ರಾರ್ಥಿಸುವಂತೆ ನಿರ್ದೇಶಿಸಿದ ಒಬ್ಬ ವ್ಯಕ್ತಿ, ಅವರೇ ಸ್ವಯಂ ದೇವರಾಗಿರಲು ಸಾಧ್ಯವೇ ? ಅಥವಾ ಇತರರ ಶಾರೀರಿಕ ರೋಗಗಳನ್ನು ಗುಣಪಡಿಸಲು ಅವರಿಗೆ ಸಾಧ್ಯವಾಗುವುದು ಹೇಗೆ ?

ಯೇಸುಕ್ರಿಸ್ತರು ಸ್ವಯಂ ಈ ಲೋಕದಲ್ಲಿ ಜೀವಿಸಿದ್ದಾಗ ಅವರ ಪ್ರವಾದಿತ್ವವನ್ನು ಸ್ವೀಕರಿಸಲು ಒಲ್ಲದ ವಿರೋಧಿಗಳು ಅವರನ್ನು ಶಿಲುಬೆಗೆ ಜಡಿದು ಕೊಲ್ಲಲು ತೀರ್ಮಾನಿಸಿದರು. ಶಿಲುಬೆಯಲ್ಲಿ ಮೃತರಾದರೆ ಬೈಬಲ್ ಪ್ರಸ್ತಾವನೆಯ ಪ್ರಕಾರ ಅವರು ಸುಳ್ಳುಗಾರನೆಂದು ಸಾಬೀತಾಗುತ್ತಿತ್ತು. ಯೇಸುಕ್ರಿಸ್ತರ ಜೀವನದಲ್ಲೇ ಅತ್ಯಂತ ನಿರ್ಣಾಯಕವಾದ ಘಟ್ಟವಾಗಿತ್ತು ಇದು. ಈ ಶಿಲುಬಾ ಮರಣದಿಂದಲೇ ತನ್ನನ್ನು ರಕ್ಷಿಸುವಂತೆ ಅವರು ಸರ್ವಶಕ್ತನಾದ ದೇವರನ್ನು ಪ್ರಾರ್ಥಿಸಿದ್ದು.

ವಿರೋಧಿಗಳು ಯೇಸುವನ್ನು ಹಿಡಿದು ಶಿಲುಬೆಗೇರಿಸಿದ ಸಂಭವದ ಒಂದು ವಿವರಣೆ ಬೈಬಲ್‌ನಲ್ಲಿ ಈ ರೀತಿ ಉಲ್ಲೇಖಿತವಿದೆ: "ಯೆಹೂದ್ಯರ ಅರಸನೇ ನಿನಗೆ ನಮಸ್ಕಾರ ಎಂದು ಆತನನ್ನು ಪರಿಹಾಸ್ಯ ಮಾಡಿದರು. ಮತ್ತು ಆತನ ಮೇಲೆ ಉಗುಳಿ ಆ ಬೆತ್ತವನ್ನು ಕಸಕೊಂಡು ಆತನ ತಲೆಯ ಮೇಲೆ ಹೊಡೆದರು. ಹೀಗೆ ಆತನನ್ನು ಪರಿಹಾಸ್ಯ ಮಾಡಿದ ಮೇಲೆ ಆ ಒಲ್ಲಿಯನ್ನು ತೆಗೆದು ಆತನ ಬಟ್ಟೆಗಳನ್ನು ಹೊದಿಸಿ ಆತನನ್ನು ಶಿಲುಬೆಗೆ ಹಾಕುವುದಕ್ಕೆ ತೆಗೆದುಕೊಂಡು ಹೋದರು... ...ಆಗ ಇಬ್ಬರು ಕಳ್ಳರನ್ನು ತಂದು ಒಬ್ಬನನ್ನು ಬಲಗಡೆಯಲ್ಲಿ ಒಬ್ಬನನ್ನು ಎಡಗಡೆಯಲ್ಲಿ ಆತನ ಸಂಗಡ ಶಿಲುಬೆಗೆ ಹಾಕಿದರು. ಅಲ್ಲಿ ಹಾದು ಹೋಗುವವರು ತಲೆ ಆಡಿಸಿ–ದೇವಾಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ, ನಿನ್ನನ್ನು ರಕ್ಷಿಸಿಕೋ; ದೇವರ ಮಗನು ಆಗಿದ್ದರೆ ಶಿಲುಬೆಯಿಂದ ಇಳಿದು ಬಾ ಎಂದು ಆತನನ್ನು ಹಂಗಿಸಿದರು........ಅವನು ಇಸ್ರಾಯೇಲಿನ ಅರಸನಲ್ಲವೇ ಈಗ ಶಿಲುಬೆಯಿಂದ ಇಳಿದು ಬರಲಿ, ಇಳಿದು ಬಂದರೆ ಅವನಲ್ಲಿ ನಂಬಿಕೆಯಿಟ್ಟೇವು..... ಎಂದು ಹಾಸ್ಯದಿಂದ ಮಾತಾಡುತ್ತಿದ್ದರು. ಆತನ ಸಂಗಡ ಶಿಲುಬೆಗೆ ಹಾಕಲ್ಪಟ್ಟ ಕಳ್ಳರು ಸಹ ಆತನನ್ನು ಅದೇ ಪ್ರಕಾರ ನಿಂದಿಸುತ್ತಿದ್ದರು.......ಸುಮಾರು ಮೂರು ಘಂಟೆಗೆ ಯೇಸು–ಏಲೀ ಏಲೀ ಲಮಾ ಸಬಕ್ತಾನೀ, ಅಂದರೆ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ ಎಂದು ಮಹಾಧ್ವನಿಯಿಂದ ಕೂಗಿದನು". (ಮತ್ತಾಯ 27ನೇ ಅಧ್ಯಾಯದ 30ರಿಂದ 46ರ ವರೆಗಿನ ವಚನಗಳನ್ನು ನೋಡಿರಿ)

ಇದರಿಂದ ತಿಳಿದು ಬರುವುದೇನೆಂದರೆ ಯೇಸುಕ್ರಿಸ್ತರನ್ನು ಸುಳ್ಳುಗಾರನೆಂದು ಸಾಬೀತುಪಡಿಸಲು ಶತ್ರುಗಳು ಅವರನ್ನು ಶಿಲುಬೆಗೆ ಜಡಿದು ಕೊಲ್ಲಲು ಶ್ರಮಿಸಿದ ವೇಳೆಯಲ್ಲಿ ಅಲ್ಲಿದ್ದವರೂ ದಾರಿಹೋಕರೂ ಅವರನ್ನು ಹೀನಾಯವಾಗಿ ಅಪಮಾನಿಸಿದ್ದರೆಂದೂ ಸಾಧ್ಯವಿದ್ದರೆ ಶಿಲುಬೆಯಿಂದ ಇಳಿದು ಬಾ ಎಂದೂ ಇಳಿದು ಬಂದರೆ ನಂಬುತ್ತೇವೆಂದೂ ಹೇಳಿದುದಾಗಿಯೂ ಆದರೆ, ಈ ಅತ್ಯಂತ ಅಪತ್ಕರ ಸನ್ನಿವೇಶದಲ್ಲಿ ಕೂಡ ಯೇಸುಕ್ರಿಸ್ತರಿಗೆ ಎಲ್ಲರೂ ನೋಡುವಂತೆ ಕೇವಲ ಒಂದು ಮರದ ಶಿಲುಬೆಯನ್ನು ಒಡೆದು ಕೆಳಗಿಳಿದು ಬರಲು ಸಾಧ್ಯವಾಗಲಿಲ್ಲವೆಂದೂ ಆಗಿದೆ. ಹಾಗೆ ಅವರು ಇಳಿದು ಬರುತ್ತಿದ್ದರೆ ಅವರ ಸತ್ಯತೆಗೆ ಬೇರೆ ಪುರಾವೆಗಳು ಬೇಕಾಗಿರಲಿಲ್ಲವಲ್ಲ! ಮಾತ್ರವಲ್ಲ ಶಿಲುಬೆಯಲ್ಲಿ ನೇತಾಡಿ ಮೃತ್ಯು ದವಡೆಯಲ್ಲಿ ಸಿಲುಕಿಕೊಂಡಿದ್ದ ಆ ಭಯಾನಕ ಗಳಿಗೆಯಲ್ಲಿ ಕೂಡ ಯೇಸುಕ್ರಿಸ್ತರು ಅಸಹಾಯಕರಾಗಿ ನನ್ನ ದೇವರೇ ನನ್ನನ್ನು ಯಾಕೆ ಕೈಬಿಟ್ಟಿದ್ದೀ ಎಂದು ದೀನ ರೋದನ ಗೈದುದಾಗಿ ಬೈಬಲ್ ಹೇಳುವುದು, ಯೇಸುಕ್ರಿಸ್ತರಿಗಾಗಲಿ ಅವರ ಹೆಸರು ಹೇಳಿ ಇತರ ಯಾರಿಗೇ ಆಗಲಿ "ದಿಢೀರ್ ಪವಾಡ" ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿಸಿಕೊಡುತ್ತದೆ. ಈ ಸಂದರ್ಭದಲ್ಲೆಲ್ಲಾ ದೇವರ ಪರಮಭಕ್ತರಾದ ಯೇಸುಕ್ರಿಸ್ತರು ಆ ಸರ್ವಶಕ್ತನಾದ ದೇವರನ್ನೇ ಪ್ರಾರ್ಥಿಸಿದ್ದರೆಂದು ಕೂಡ ತಿಳಿದು ಬರುತ್ತದೆ.

ನಂತರ, ಜಗತ್ಪಾಲಕನಾದ ಏಕ ಪರಮಾತ್ಮನ ಅನುಗ್ರಹದ ಮೂಲಕ ಶಿಲುಬಾ ಮರಣದಿಂದ ಪಾರಾದ ಯೇಸುಕ್ರಿಸ್ತರಿಗೆ, ಶಿಲುಬೆಗೇರಿಸಿದಾಗ ಮೊಳೆ ಜಡಿದು ಉಂಟಾಗಿದ್ದ ಗಾಯಗಳನ್ನು ಇತರ ಎಲ್ಲಾ ಮನುಷ್ಯರಂತೆಯೇ ಔಷಧೋಪಚಾರದ ಮೂಲಕ ಗುಣಪಡಿಸಬೇಕಾಯಿತೆಂದು ಕೂಡ ಬೈಬಲ್ ತಿಳಿಸುತ್ತದೆ (ಯೋಹಾನ 19:39).

ಸಂಕ್ಷಿಪ್ತವಾಗಿ, ಆಪತ್‌ಘಟ್ಟದಲ್ಲಿ ಸ್ವಯಂ ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಸಾಧ್ಯವಾಗದೆ, ಕರ್ತನಾದ ದೇವರೊಡನೆ ವಿಲಾಪಿಸಿ ಸಹಾಯ ಯಾಚಿಸಿದ ಹಾಗೂ ತನ್ನ ಸ್ವಂತ ಶರೀರದ ಗಾಯಗಳಿಗಾಗಿ ವೈದ್ಯಕೀಯ ಸಹಾಯದ ಆಶ್ರಯವನ್ನು ಪಡೆದಂತಹ ಒಬ್ಬ ಮನುಷ್ಯ ಪ್ರವಾದಿಯಾಗಿದ್ದ ಯೇಸುಕ್ರಿಸ್ತರೊಡನೆ ಪ್ರಾರ್ಥಿಸುವುದು ಅಥವಾ ರೋಗ ಶಾಂತಿಗಾಗಿ ಅವರೊಡನೆ ಕೋರುವುದು ಬೈಬಲಿನ ಅಧ್ಯಾಪನಗಳಿಗೆ ತೀರಾ ವಿರುದ್ಧವೂ ಅರ್ಥಶೂನ್ಯವೂ ಆಗಿದೆ. ಆದುದರಿಂದ ಯೇಸುಕ್ರಿಸ್ತರನ್ನೂ ಒಳಗೊಂಡಂತೆ ಸರ್ವರನ್ನೂ ಸೃಷ್ಟಿಸಿದ ಏಕದೇವನು ಮಾತ್ರ ಪ್ರಾರ್ಥನೆಗೆ ಅರ್ಹನು ಹಾಗೂ ಪ್ರಾರ್ಥನೆಗಳಿಗೆ ಉತ್ತರಿಸಲು ಶಕ್ತನು ಎಂಬ ಪವಿತ್ರ ಖುರ್‌ಆನಿನ ಪ್ರಬೋಧನೆಯೇ ವಿವೇಕ ಸಮ್ಮತವಾಗಿದೆ.

ಯೇಸುಕ್ರಿಸ್ತರ ಸಾದೃಶ್ಯದಲ್ಲಿ, ದೇವನಿಯೋಜಿತರಾಗಿ ಈ ಕಾಲದಲ್ಲಿ ಆಗಮಿಸಿದ ವಾಗ್ದತ್ತ ಮಸೈಯ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಬೈಬಲಿನ ಮತ್ತು ಚಾರಿತ್ರಿಕ ಆಧಾರದ ಮೇರೆಗೆ ಯೇಸುಕ್ರಿಸ್ತರು ಇಸ್ರಾಯೇಲ್ ಮನೆತನದ ತಪ್ಪಿಸಿಕೊಂಡ ಕುರಿಗಳನ್ನು (ಗೋತ್ರ ಜನರನ್ನು) ಹುಡುಕಿ ಭಾರತದ ಕಾಶ್ಮೀರಕ್ಕೆ ಬಂದಿದ್ದರೆಂದೂ ಅಲ್ಲಿಯೇ ಮೃತರಾಗಿರುವರೆಂದೂ ರುಜುವಾತು ಪಡಿಸಿರುವರು. (Jesus in India, Where Did Jesus Die?, Tomb of Jesus ಮೊದಲಾದ ಕೃತಿಗಳನ್ನು ಓದಿರಿ).

ಮನುಷ್ಯನಾದ ಓರ್ವ ಪ್ರವಾದಿಯನ್ನು ದೇವತ್ವದ ಪದವಿಗೆ ಏರಿಸುವುದು ವಿವೇಕಶೂನ್ಯವಾಗಿದೆ. ಯೇಸುಕ್ರಿಸ್ತರು ದೇವರಲ್ಲ. ದೇವಪುತ್ರನೂ ಅಲ್ಲ. ದೇವ ನಿಯೋಜಿತರಾದ ಪ್ರವಾದಿ ಮಾತ್ರ. ಅವರು ಇಂದು ಜೀವಿಸುತ್ತಿಲ್ಲ. ಇತರ ಎಲ್ಲಾ ಪ್ರವಾದಿಗಳಂತೆ ಅವರು ಸಹ ಮೃತಪಟ್ಟಿರುವರು. ಇತರರ ಪ್ರಾರ್ಥನೆಗಳನ್ನು ಆಲಿಸಲು ಹಾಗೂ ಅದಕ್ಕೆ ಉತ್ತರ ನೀಡಲು ಅವರಿಗೆ ಸಾಧ್ಯವಿಲ್ಲ. ಜಗತ್ಪಾಲಕನೂ ಏಕಪರಮಾತ್ಮನೂ ಆದ ಸತ್ಯದೇವನು ಮಾತ್ರ ಎಂದೆಂದೂ ಜೀವಿಸಿರುವವನೂ ಎಲ್ಲರ ಪ್ರಾರ್ಥನೆಗಳನ್ನು ಕೇಳುವವನೂ ಆಗಿದ್ದಾನೆ ಎಂಬುದು ಪವಿತ್ರ ಖುರ್‌ಆನಿನ ಪಾಠವಾಗಿದೆ.

ಜೀವಂತ ದೇವನು ಯಾರದೆಂಬುದನ್ನು ನಿರೂಪಿಸಲು ಜಗತ್ತಿನ ಮುಂದೆ ಅಹ್ಮದಿಯಾ ಸಂಘಟನೆಯು ಇಟ್ಟಿರುವ ಪ್ರಾರ್ಥನಾ ಸ್ಪರ್ಧೆಯ ಆಹ್ವಾನವು ಇಂದು ಕೂಡ ಊರ್ಜಿತದಲ್ಲಿದೆ. ಈ ಆಹ್ವಾನವನ್ನು ಸ್ವೀಕರಿಸಲು ಶ್ರೀ ಪೀಟರ್ ಯಂಗ್ರೆನ್ ಸಿದ್ಧರಿರುವರೇ? ★

AHMADIYYA MUSLIM MISSION
Ansari Road
MANGALORE-575 001

---

**ಕೆನಡಾದ ಶ್ರೀ ಪೀಟರ್ ಯಂಗ್ರೆನ್ ಅವರು ಮಂಗಳೂರಿನಲ್ಲಿ ಕೆಲವು ದಿವಸ "ಯೇಸುಸ್ವಾಮಿ ಗುಣಪಡಿಸುತ್ತಾರೆ" ಎಂಬ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾಗ ಅಹ್ಮದಿಯಾ ಸಂಘಟನೆಯ ವತಿಯಿಂದ ಪ್ರಕಟಿಸಲಾದ ಕರಪತ್ರ. ಇದರ ತುಸು ಸಂಕ್ಷೇಪ ರೂಪವು 22-2-1987ರ "ಮುಂಗಾರು" ದಿನಪತ್ರಿಕೆಯಲ್ಲಿ ಜಾಹೀರಾತು ರೂಪದಲ್ಲಿ ಪ್ರಕಟವಾಗಿತ್ತು.**

**—ಸಂ.**

---

# ಯೇಸುಕ್ರಿಸ್ತರು ದೇವರೇ?

ಇತ್ತೀಚೆಗೆ ಕೆನಡಾದವರಾದ ಶ್ರೀ ಪೀಟರ್ ಯಂಗ್ರೆನ್ ಎಂಬವರು ತಮ್ಮ ಬಳಗದವರೊಂದಿಗೆ ಮಂಗಳೂರಿಗೆ ಆಗಮಿಸಿ "ಯೇಸು ಸ್ವಾಮಿ ಗುಣಪಡಿಸುತ್ತಾರೆ" ಎಂಬ ತಮ್ಮ ಧರ್ಮಯುದ್ಧ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರಷ್ಟೆ. ಆ ವೇಳೆಯಲ್ಲಿ ಅಹ್ಮದಿಯಾ ಸಂಘಟನೆಯ ಪರವಾಗಿ ನಾವು ಒಂದು ಕರಪತ್ರವನ್ನು ಮುದ್ರಿಸಿ ಹಂಚಿದ್ದೆವು. ಅಲ್ಲದೆ ಸದ್ರಿ ನಮ್ಮ ಹೇಳಿಕೆಯನ್ನು ಮುಂಗಾರು ಪತ್ರಿಕೆಯ ದಿನಾಂಕ 22–2–87ರ ಸಂಚಿಕೆಯಲ್ಲಿ ಜಾಹೀರಾತಾಗಿ ಕೂಡ ಪ್ರಕಟಿಸಿದ್ದೆವು. ಮಹಾತ್ಮ ಯೇಸುಕ್ರಿಸ್ತರು ಮನುಷ್ಯನಾದ ಓರ್ವ ಪ್ರವಾದಿಯಾಗಿದ್ದರೆಂದೂ ದೇವರ ದಿವ್ಯ ಸಂದೇಶವಾಹಕರಾಗಿ ಇಸ್ರಾಯೇಲ್ ಮನೆತನದವರಿಗೆ ಕಳುಹಿಸಲ್ಪಟ್ಟ ಆ ಮಹಾತ್ಮರು ತಮ್ಮ ಕರ್ತವ್ಯವನ್ನು ನಿರ್ವಹಿಸಿ ಇತರ ಎಲ್ಲಾ ಪ್ರವಾದಿಗಳಂತೆ ಮೃತಪಟ್ಟಿರುವರೆಂದೂ ಅವರು ದೇವರೋ ದೇವ ಪುತ್ರನೋ ಆಗಿರದೆ ಸರ್ವಲೋಕ ಪಾಲಕನಾದ ಸತ್ಯದೇವರಿಂದ ನಿಯೋಜಿಸಲ್ಪಟ್ಟ ಓರ್ವ ಸಂದೇಶವಾಹಕ ಮಾತ್ರವಾಗಿದ್ದರೆಂದೂ ನಾವು ಸದ್ರಿ ಹೇಳಿಕೆಯಲ್ಲಿ ವಿವರಿಸಿದ್ದೆವು. ಅಲ್ಲದೆ, ಜನರ ಪ್ರಾರ್ಥನೆಗಳನ್ನು ಕೇಳಿ ಅವುಗಳಿಗೆ ಉತ್ತರ ನೀಡಲು ಯೇಸುಕ್ರಿಸ್ತರು ಸಮರ್ಥರಲ್ಲವೆಂದೂ ಜನರ ಪ್ರಾರ್ಥನೆಗಳನ್ನು ಉತ್ತರಿಸಲು ಸರ್ವಲೋಕ ಪಾಲಕನಾದ ಏಕ ಪರಮಾತ್ಮನಿಗೆ ಮಾತ್ರವೇ ಸಾಧ್ಯವೆಂಬುದನ್ನು ಯೇಸುಕ್ರಿಸ್ತರು ಕೂಡ ತಿಳಿದುಕೊಂಡಿದ್ದು ತನ್ನ ಸಂಕಷ್ಟಕಾಲದಲ್ಲಿ ಆ ಮಹಾತ್ಮರು ದೇವರನ್ನೇ ಪ್ರಾರ್ಥಿಸಿ ಸಹಾಯ ಯಾಚಿಸಿದ್ದರೆಂದು ಕೂಡ ಬೈಬಲ್‌ನಿಂದ ಉಲ್ಲೇಖಗಳನ್ನು ನೀಡಿ ನಾವು ಅದರಲ್ಲಿ ವಿವರಿಸಿದ್ದೆವು.

ಮನುಷ್ಯನಾದ ಒಬ್ಬ ಪ್ರವಾದಿಯನ್ನು ದೇವರೆಂದು ತಿಳಿದು ಅವರನ್ನು ಆರಾಧಿಸುವ ಮತ್ತು ಅವರೊಡನೆ ಸಹಾಯ ಯಾಚಿಸುವ ನಿರರ್ಥಕ ವಿಶ್ವಾಸವನ್ನು ನಮ್ಮ ಕ್ರೈಸ್ತ ಸಹೋದರರು ತ್ಯಜಿಸಿ, ನಿಜವಾದ ಏಕ ಸತ್ಯದೇವನೆಡೆಗೆ ಅವರು ಮುಖ ತಿರುಗಿಸುವಂತಾಗಲಿ ಎಂಬ ಉದ್ದೇಶದಿಂದ ನಾವು ಆ ರೀತಿ ಮಾಡಿದ್ದೇವೆ. ಶ್ರೀ ಪೀಟರ್ ಯಂಗ್ರೆನ್‌ರವರಿಗೆ ನಾವು ಕೆಲವು ಅಹ್ಮದಿಯಾ ಸಾಹಿತ್ಯಗಳನ್ನು ಸಹ ರವಾನಿಸಿದ್ದೆವು. ಆದರೆ ಶ್ರೀ ಪೀಟರ್ ಯಂಗ್ರೆನ್ ಆಗಲಿ ಜವಾಬ್ದಾರಿಯುತ ಯಾವುದೇ ಕ್ರೈಸ್ತ ವಿಭಾಗದವರಾಗಲಿ ನಮ್ಮ ಹೇಳಿಕೆಗೆ ಇದುವರೆಗೆ ಉತ್ತರ ನೀಡಲಿಲ್ಲವೆಂಬುದು ವ್ಯಸನದ ಸಂಗತಿ. ಹೀಗಿರಲಾಗಿ ದಿನಾಂಕ 25–3–87ರ ಮುಂಗಾರು ಪತ್ರಿಕೆಯಲ್ಲಿ ಪಾಸ್ಟರ್ ಬಿ. ಸಾಲಿನ್ಸ್ ಎಂಬವರು ಒಂದು ಪ್ರಕಟನೆ ನೀಡಿ ನಮಗೆ ಉತ್ತರ ನೀಡಲು ಶ್ರಮಿಸಿರುವುದನ್ನು ಕಂಡು ನಾವು ಸಂತೋಷಪಟ್ಟೆವು. ಆದರೆ ಸದ್ರಿಯವರ 'ಉತ್ತರ'ವನ್ನು ಪೂರ್ತಿ ಓದಿದ ನಂತರ ಮತ್ತೆ ನಮಗೆ ನಿರಾಶೆಯಾಯಿತು. "ನೀವು ಶ್ರೀ ಪೀಟರ್ ಯಂಗ್ರೆನರಿಗೆ ಹಾಕಿದ ಆಹ್ವಾನವನ್ನು ನಾನು ಅಂಗೀಕರಿಸಿ ಬೈಬಲಿನ ಆಧಾರದಿಂದ ಉತ್ತರ ಕೊಡುತ್ತೇನೆ" ಎಂದು ಹೇಳಿದ ಅವರು ತಮ್ಮ ಜಾಹೀರಾತನ್ನು ಈ ರೀತಿ ಕೊನೆಗೊಳಿಸುತ್ತಾರೆ – "ಈ ಉತ್ತರ ಕೊಡಲು ನಾನು ಯಾವ ರೀತಿಯಲ್ಲಾದರೂ ಸೋತರೆ ಆ ಅವಮಾನಕ್ಕೆ ನಾನೊಬ್ಬನೇ ಹೊಣೆಯಾಗುತ್ತೇನೆ."!! ಮಾನ್ಯ ಪಾಸ್ಟರ್‌ರವರು ಯಾವುದೋ ಒಂದು ಮರೀಚಿಕೆಯ ಮರೆಯಲ್ಲಿ ನುಣುಚಿ ಆಶ್ರಯ ಪಡೆಯಲು ಶ್ರಮಿಸುತ್ತಿರುವಂತೆ ನಮಗೆ ಇದರಿಂದ ಭಾಸವಾಗುತ್ತದೆ. ಬೈಬಲಿನ ಆಧಾರದಿಂದ ನಮ್ಮ ಎಲ್ಲಾ ಪ್ರಶ್ನೆಗಳಿಗೂ ಉತ್ತರ ನೀಡಲು ತಾನು ತಯಾರಿರುವೆನೆಂದು ಹೇಳುವ ಅವರು, ಉತ್ತರಿಸಲು ಅಸಮರ್ಥನಾದಲ್ಲಿ ತಾನೊಬ್ಬನೇ ಹೊಣೆಯೆಂದು ಹೇಳಿಕೊಂಡದ್ದು ಆಶ್ಚರ್ಯ. ನಿಜವಾಗಿ ನೋಡಿದರೆ, ಅಂತಹ ಕೇವಲ ಒಬ್ಬ ವ್ಯಕ್ತಿಯ ವೈಯಕ್ತಿಕ ಹೇಳಿಕೆಯನ್ನು ನಾವು ಗಮನಿಸಬೇಕಾದುದೇ

ಇಲ್ಲ. ಅವರು ತಾನು ಪ್ರತಿನಿಧೀಕರಿಸುವ ಕ್ರೈಸ್ತ ಪಂಗಡದ ಉನ್ನತ ನೇತಾರರನ್ನು ಇದಕ್ಕಾಗಿ ಪ್ರೇರೇಪಿಸಿ ಆ ಉನ್ನತ ನೇತಾರರು ತನ್ನ ಪಂಗಡದ ಪರವಾಗಿ ಪೂರ್ಣ ಜವಾಬ್ದಾರಿಕೆಯನ್ನು ಹೊತ್ತುಕೊಂಡು ಅಹ್ಮದಿಯಾ ಸಂಘಟನೆ ಯೊಡನೆ ಸಂವಾದಕ್ಕೆ ಇಳಿಯುವಂತೆ ವ್ಯವಸ್ಥೆ ಮಾಡಬೇಕಿತ್ತು. ಅವರು ಹಾಗೆ ಮಾಡುವರೆಂದು ನಾವು ಆಶಿಸುತ್ತೇವೆ. ಪಾಸ್ಟರ್ ಅವರು ಹೇಳಿರುವ "ನಾನು ಈ ಉತ್ತರ ಕೊಡಲು ಸೋತರೆ" ಎಂಬ ವಾಕ್ಯವು ನಮ್ಮನ್ನು ಅತಿಯಾಗಿ ನೋಯಿಸಿತು. ಧಾರ್ಮಿಕ ವಿಶ್ವಾಸಗಳ ಬಗ್ಗೆ – ಅವುಗಳ ಸತ್ಯಾಸತ್ಯತೆಗಳ ಕುರಿತು ವಾದ ವಿವಾದ ನಡೆಸುವಾಗ "ಸೋಲುವ" ಅಥವಾ "ಗೆಲ್ಲುವ" ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ಲೋಕದಲ್ಲಿ ಧರ್ಮಗಳು ಹಲವು ಇವೆ. ಹಲವಾರು ವಿಶ್ವಾಸಗಳೂ ಇವೆ. ಧರ್ಮವಿಶ್ವಾಸಗಳ ಸರಿ ತಪ್ಪುಗಳನ್ನು ವಿವೇಚನೆ ಮಾಡುವುದು, ಅವುಗಳ ಬಗ್ಗೆ ವಿಚಾರ ಬದ್ಧವಾದ ವಿಮರ್ಶೆ ನಡೆಸುವುದು, ಎದುರು ಪಕ್ಷ ಗೌರವದೊಂದಿಗೆ ಸಂವಾದ ನಡೆಸುವುದು ಇವೆಲ್ಲಾ ಪ್ರತಿ ಯೊಬ್ಬರಿಗೂ ಇರುವ ಸ್ವಾತಂತ್ರ್ಯವಾಗಿದೆ. ಸತ್ಯವನ್ನು ಕಂಡುಕೊಳ್ಳುವುದು ಹಾಗೂ ಸತ್ಯವಾದುದನ್ನು ಇತರರಿಗೆ ತಿಳಿಸಿಕೊಡುವುದು – ಇಷ್ಟು ಮಾತ್ರವೇ ಇದರ ಉದ್ದೇಶವಾಗಿರಬೇಕು. ಅಲ್ಲದೆ, ಇದರಲ್ಲಿ ಯಾರು ಗೆಲ್ಲುವರು ಯಾರು ಸೋಲುವರು ಎಂಬ ಪ್ರಶ್ನೆಯಿಲ್ಲ. ಯಾರ ಪಕ್ಷದಲ್ಲಿ ಸತ್ಯವಿದೆ, ಯಾರು ಅಸಂಬದ್ಧ ವಿಶ್ವಾಸಗಳನ್ನು ಹೊಂದಿದ್ದಾರೆ ಎಂಬುದು ಮಾತ್ರವೇ ಇಲ್ಲಿ ಕಂಡುಕೊಳ್ಳಬೇಕಾದ ಅಂಶ. ಏನೇ ಆದರೂ ಪಾಸ್ಟರ್ ಸಾಲಿನ್ಸ್‌ರವರ ಜಾಹೀರಾತಿಗೆ ನಾವು ಈ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸಲು ಬಯಸುತ್ತೇವೆ:

ಮಾನ್ಯ ಶ್ರೀ ಪಾಸ್ಟರ್ ಬಿ. ಸಾಲಿನ್ಸ್‌ರವರೇ,

ಅಹ್ಮದಿಯಾ ಸಂಘಟನೆಯ ಪ್ರಾರ್ಥನಾ ಸಮರದ ಆಹ್ವಾನವನ್ನಾಗಲಿ ಶ್ರೀ ಪೀಟರ್ ಯಂಗ್ರೆನ್‌ರವರನ್ನು ನಾವು ಆಮಂತ್ರಿಸಿದ ಕುರಿತಾಗಲಿ ಸರಿಯಾಗಿ ಗ್ರಹಿಸಿಕೊಳ್ಳಲು ನೀವು ವಿಫಲರಾಗಿದ್ದೀರಿ. ಆದರೂ "ಯೇಸುಕ್ರಿಸ್ತರನ್ನು ಬೈಬಲಿನ ಆಧಾರದ ಮೇಲೆ ನನ್ನ ದೇವರು ನನ್ನ ರಕ್ಷಕನು ಎಂಥ ನಂಬಿರುವ ನಾನು ಈ ಆಹ್ವಾನವನ್ನು ಪ್ರೀತಿ ಪೂರ್ವಕವಾಗಿ ಅಂಗೀಕರಿಸಿ ನೀವು ಪ್ರಕಟಪಡಿಸಿದ ಎಲ್ಲಾ ವಿಷಯಗಳಿಗೂ ಉತ್ತರ ನೀಡಲು ಈ ಆಹ್ವಾನವನ್ನು ಅಂಗೀಕರಿಸುತ್ತೇನೆ" ಎಂದು ನೀವು ಬರೆದಿರುವುದನ್ನು ಕಂಡು ನಾವು ತುಂಬಾ ಸಂತೋಷಪಡುತ್ತೇವೆ. ಇಂದಿನ ಕ್ರೈಸ್ತ ಸಭೆಗಳು ಧಾರ್ಮಿಕ ಮೌಲ್ಯಗಳಾಗಿ ಅಂಗೀಕರಿಸಿಕೊಂಡಿರುವ ವಿಶ್ವಾಸಗಳ ಸತ್ಯಾಸತ್ಯತೆಯ ಕುರಿತು ನಮ್ಮೊಂದಿಗೆ ವಾದ ವಿವಾದ ನಡೆಸಲು ನೀವು ಸಿದ್ಧರಿರುವಿರೆಂಬುದು ಅದರ ಅರ್ಥವೆಂದು ನಾವು ತಿಳಿಯುತ್ತೇವೆ. ವಿಷಯಕ್ಕೆ ಪ್ರವೇಶಿಸುವ ಮುನ್ನ ಒಂದು ಮುಖ್ಯ ಸಂಗತಿಯನ್ನು ಸ್ಪಷ್ಟಪಡಿಸ ಬಯಸುತ್ತೇವೆ. "ಶ್ರೀ ಪೀಟರ್ ಯಂಗ್ರೆನ್ ಯೇಸುಸ್ವಾಮಿಯ ಹೆಸರಿನಲ್ಲಿಯೇ ಸಾರ್ವಜನಿಕರ ಮುಂದೆ ಸ್ಟೇಜಿನ ಮೇಲೆ ನಿಂತು ಯೇಸುಸ್ವಾಮಿಯನ್ನು ಪ್ರಾರ್ಥಿಸಿದಾಗ ಯೇಸು ಸ್ವಾಮಿ ಅವರ ಪ್ರಾರ್ಥನೆಗೆ ಉತ್ತರ ಕೊಟ್ಟು ಕೂಡಿ ಬಂದಿದ್ದ ಜನ ಸಮೂಹದ ಮಧ್ಯದಿಂದ ಅನೇಕರು ಸ್ಟೇಜಿನ ಮೇಲೆ ಬಂದು ತಮಗಾದ ರೋಗದ ಬಿಡುಗಡೆಯನ್ನು ಎಲ್ಲಾ ಜನರ ಮುಂದೆ ಅರಿಕೆ ಮಾಡಿದಾಗ ಎಲ್ಲರ ಕಣ್ಣುಗಳು ಕಂಡು ಗ್ರಹಿಸಿಕೊಂಡಿವೆ" ಎಂದು ನೀವು ಬರೆದಿದ್ದೀರಿ. ಶ್ರೀ ಪೀಟರ್ ಯಂಗ್ರೆನ್‌ರವರು ಮಂಗಳೂರಿನ ನೆಹರೂ ಮೈದಾನದಲ್ಲಿ ಎಂತಹ ರೋಗಿಗಳನ್ನು ಯಾವ ರೀತಿಯಲ್ಲಿ ಗುಣಪಡಿಸಿದ್ದಾರೆ ಎಂಬುದು ಮಂಗಳೂರಿನ ಜನರಿಗೆ ತಿಳಿದಿರುವ ವಿಚಾರ. ಪೀಟರ್ ಯಂಗ್ರೆನ್ ಮಾಡಿದಂತೆ ಒಬ್ಬ ಮಾಂತ್ರಿಕನಿಗೂ ಮಾಡಲು ಸಾಧ್ಯವಿದೆ. ಅಲ್ಲದೆ ಒಬ್ಬ ಮನೋರೋಗ ತಜ್ಞ ಅಥವಾ ಸಮ್ಮೋಹಿನಿ ವಿದ್ಯೆ ಬಲ್ಲವನಿಗೂ ಆ ರೀತಿ ಮಾನಸಿಕ ತಳಮಳವನ್ನು ರೋಗಿಗಳಲ್ಲಿ ಸೃಷ್ಟಿಮಾಡಲು ಸಾಧ್ಯವಿದೆ. ಅದಕ್ಕಿಂತಲೂ ಮಿಗಿಲಾದ ಏನನ್ನೂ ಶ್ರೀ ಪೀಟರ್ ಯಂಗ್ರೆನ್ ಮಾಡಿಲ್ಲವೆಂಬುದು ಎಲ್ಲರಿಗೂ ತಿಳಿದ ಸತ್ಯವಾಗಿದೆ. ಮಾಂತ್ರಿಕನು ಮಂತ್ರವಿದ್ಯೆ ಮಾಡುವಾಗ ಅಥವಾ ಸಮ್ಮೋಹಿನಿ ತಜ್ಞನೊಬ್ಬ ಹಿಪ್ನಾಟಿಸಂ ಪ್ರದರ್ಶಿಸುವಾಗ ಯೇಸುಕ್ರಿಸ್ತರ ಹೆಸರನ್ನೋ ಅಥವಾ ಇನ್ನಾರ ಹೆಸರನ್ನೋ ಕೂಗಿ ಹೇಳಿದ್ದರೆ ಅದರಿಂದ ಆ ಕೂಗಿ ಕರೆಯಲ್ಪಟ್ಟ ವ್ಯಕ್ತಿಯನ್ನು ದೇವರೆಂದು ತಿಳಿಯುವುದು ಮೂರ್ಖತನವಾಗಬಹುದು. ಅಲ್ಲ

ವಾದರೆ, ಪೋಲಿಯೋ ರೋಗ ಪೀಡಿತನಾದ ವ್ಯಕ್ತಿಯೊಬ್ಬನು ಶಾಶ್ವತವಾಗಿ ಗುಣಹೊಂದಿ ಎಲ್ಲರ ಮುಂದೆ ಸರಿಯಾಗಿ ನಡೆದು ಹೋಗುವಂತೆ ಅಥವಾ ಹೈಡ್ರೋಫೋಬಿಯಾ (ಹುಚ್ಚುನಾಯಿ ಕಡಿತದಿಂದುಂಟಾಗುವ ರೋಗ) ಬಾಧಿತನೆಂದು ತಜ್ಞ ವೈದ್ಯರಿಂದ ದೃಢೀಕರಿಸಲ್ಪಟ್ಟ ವ್ಯಕ್ತಿಯು ರೋಗಶಮನ ಹೊಂದಿದರೆ ಅಥವಾ ಅಸಹ್ಯವಾದ ಕುಷ್ಟರೋಗದಿಂದ ನರಳುತ್ತಿರುವ ವ್ಯಕ್ತಿಯೊಬ್ಬ ದಿಢೀರ್ ಗುಣಮುಖ ಹೊಂದಿ ಇತರರಂತೆಯೇ ಆದರೆ, ಅಥವಾ ಈ ರೀತಿಯ ಇನ್ನಾವುದೇ **ವಾಸಿಯಾಗದ ಭೀಕರ ವ್ಯಾಧಿಯಿಂದ ನರಳುತ್ತಿರುವವರನ್ನು** ಯೇಸುಕ್ರಿಸ್ತರ ನಾಮದಿಂದ ಗುಣಪಡಿಸಿದರೆ ಶ್ರೀ ಪೀಟರ್ ಯಂಗ್ರೆನ್ ಅಥವಾ ಶ್ರೀ ಪಾಸ್ಟರ್ ಸಾಲಿನ್ಸ್ ಹೇಳುತ್ತಿರುವುದಕ್ಕೆ ಏನಾದರೂ ಅರ್ಥವಿದೆಯೆಂದು ಭಾವಿಸಬಹುದಿತ್ತು. ಅಲ್ಲದೆ, ಸುಮ್ಮನೆ "ಎಲ್ಲರ ಮುಂದೆ," "ಸ್ಟೇಜಿನ ಮೇಲೆ" ಎಂದು ಬರೇ ಹೇಳುವುದರಲ್ಲಿ ಏನೂ ಅರ್ಥವಿಲ್ಲ. ಅದಿರಲಿ, ಈಗ ವಿಷಯಕ್ಕೆ ಪ್ರವೇಶಿಸುವ.

ಯೇಸುಕ್ರಿಸ್ತರು ದೇವರಲ್ಲ, ದೇವ ಪುತ್ರನೂ ಅಲ್ಲ; ಅವರು ಕೇವಲ ಒಬ್ಬ ದೇವ ನಿಯೋಜಿತ ಸತ್ಯಸಂದೇಶ ವಾಹಕರಾಗಿದ್ದರು ಎಂಬುದಾಗಿ ನಾವು ಮೊದಲಿನ ಕರಪತ್ರದಲ್ಲಿ ಬರೆದಿದ್ದೆವು. ಇದಕ್ಕೆ ಬೈಬಲ್‌ನಿಂದ ಆಧಾರಗಳನ್ನೂ ನಾವು ಅದೇ ಕರಪತ್ರದಲ್ಲಿ ಉಲ್ಲೇಖಿಸಿದ್ದೆವು. ಆದರೆ, ಅವುಗಳನ್ನು ನೀವು ನಮ್ಮ ಸ್ವಂತ ವಿವರಣೆಗಳೆಂದು ಹೇಳಿದ್ದೀರಿ. "ಯೇಸುಕ್ರಿಸ್ತರು ದೇವರಲ್ಲ ಎಂಬಿತ್ಯಾದಿ ನಿಮ್ಮ ಸ್ವಂತ ವಿವರಣೆಗಳನ್ನು ಬರೆದು ಪವಿತ್ರ ಖುರ್‌ಆನಿನಲ್ಲಿ ಹೇಳಿರುವುದು ನಿಜವಾದ ದೇವರೆಂಬುದಾಗಿ ಹೇಳುತ್ತೀರಿ" ಎಂದು ನೀವು ಬರೆದಿದ್ದೀರಿ. ಯೇಸುಕ್ರಿಸ್ತರ ಬಗ್ಗೆ ಸರಿಯಾದ ವಿವರಗಳನ್ನು ಹಾಗೂ ಅವರ ಮಹತ್ವದ ಸ್ಥಾನಮಾನಗಳನ್ನು ನಮಗೆ ತಿಳಿಸಿಕೊಟ್ಟದ್ದು ಪವಿತ್ರ ಖುರ್‌ಆನ್ ಆಗಿದೆ. ಮಾತ್ರವಲ್ಲ ನಿಜವಾದ ದೇವರ ಬಗ್ಗೆ ನಮಗೆ ಸಂಪೂರ್ಣ ಜ್ಞಾನವನ್ನು ನೀಡಿದ್ದು ಕೂಡ ಆ ಪವಿತ್ರ ಗ್ರಂಥವೇ ಆಗಿದೆ. ಆದರೆ, ಯೇಸುಕ್ರಿಸ್ತರು ದೇವರಲ್ಲವೆಂಬುದರ ಬಗ್ಗೆ ಪವಿತ್ರ ಖುರ್‌ಆನ್ ವಿವರಿಸುವ ಸಂಗತಿಗಳನ್ನು ಕ್ರೈಸ್ತ ವಿಶ್ವಾಸಿಗಳಲ್ಲಿ ಪ್ರತಿಪಾದಿಸಿ ಪ್ರಯೋಜನವಿಲ್ಲವಲ್ಲ. ಆದುದರಿಂದ ಪವಿತ್ರ ಖುರ್‌ಆನ್ ಮಹಾತ್ಮ ಯೇಸುಕ್ರಿಸ್ತರ ಬಗ್ಗೆ ಏನನ್ನು ಹೇಳುತ್ತಿದೆಯೋ ಅದಕ್ಕೆ ಸರಿಹೊಂದುವ ರೀತಿಯಲ್ಲಿ ಬೈಬಲ್‌ನಲ್ಲಿ ಕೂಡ ಕಾಣಲ್ಪಡುವುದರಿಂದ ನೀವು ಧರ್ಮಗ್ರಂಥವಾಗಿ ಸ್ವೀಕರಿಸುವ ಬೈಬಲಿನ ಉಲ್ಲೇಖಗಳನ್ನು ನಾವು ನಿಮ್ಮ ಅವಗಾಹನೆಗಾಗಿ ಉದಾಹರಿಸಿದ್ದು. ಅವುಗಳು ನಮ್ಮ ಸ್ವಂತ ವಿವರಣೆಗಳಾಗಿ ನಿಮಗೆ ಕಂಡದ್ದು ದುರದೃಷ್ಟಕರ. ಯೇಸುಕ್ರಿಸ್ತರು ದೇವರಲ್ಲವೆಂದೂ ದೇವರಿಂದ ಕಳುಹಿಸಲ್ಪಟ್ಟ ಒಬ್ಬ ಸಂದೇಶವಾಹಕ ಮಾತ್ರ ಎಂದೂ ತಿಳಿಸಿ ಕೊಡುವ ಇನ್ನೂ ಎಷ್ಟೋ ವಿವರಣೆಗಳು ಬೈಬಲ್‌ನಲ್ಲಿ ಇವೆ. ಸಂದರ್ಭಾನುಸಾರ ನಾವು ಅವುಗಳನ್ನು ಉಲ್ಲೇಖಿಸುವೆವು.

"ಆತನು ಶರೀರದಲ್ಲಿರುವಾಗಲೇ ತಾನು ದೇವರೆಂಬುದಾಗಿ ರುಜುಪಡಿಸಿದಾತನು" ಎಂದು ಬರೆದಿದ್ದೀರಿ. ಯೇಸುಕ್ರಿಸ್ತರು ತಾನೇ ದೇವರೆಂಬುದಾಗಿ ಹೇಳಿಕೊಂಡ ಕೆಲವು ವಾಕ್ಯಗಳನ್ನು ನೀವು ಇದಕ್ಕೆ ಆಧಾರ ನೀಡಬೇಕಿತ್ತು. ನೀವು ಹಾಗೆ ಬೈಬಲಿನಿಂದ ಆಧಾರ ನೀಡದೆ ಕೇವಲ ನಿಮ್ಮ ಸ್ವಂತ ಅಭಿಪ್ರಾಯಗಳನ್ನು ಮಾತ್ರ ಉಲ್ಲೇಖಿಸಿದ್ದೀರಿ. ಯೇಸುಕ್ರಿಸ್ತರು ತಾನೇ ಸ್ವಯಂ ದೇವರೆಂಬುದಾಗಿ ಹೇಳಲು ಹೇಗೆ ಸಾಧ್ಯ? ಯಾಕೆಂದರೆ ತಾನು ಮನುಷ್ಯ ಕುಮಾರನೆಂದು ಅವರು ಸ್ಪಷ್ಟವಾಗಿ ನುಡಿದಿದ್ದಾರೆ. ಸರ್ವಲೋಕ ಪಾಲಕನೂ ಜಗದ್ರಕ್ಷಕನೂ ಆದ ಏಕ ಪರಮಾತ್ಮನಿಂದ ಕಳುಹಿಸಲ್ಪಟ್ಟ ದೂತನೆಂಬುದಾಗಿ ಅವರು ಹೇಳಿದ್ದಾರೆ. ಈ ಕೆಳಗಿನ ಬೈಬಲ್ ವಚನಗಳನ್ನು ಗಮನಿಸಿರಿ:

"ದೇವರನ್ನು ನಂಬಿರಿ; ನನ್ನನ್ನೂ ನಂಬಿರಿ" (ಯೋಹಾನ 14:1). "ದೇವರಿಂದ ಕೇಳಿದ ಸತ್ಯವನ್ನು ನಿಮಗೆ ಹೇಳಿದವನಾದ ನನ್ನನ್ನು ಕೊಲ್ಲುವುದಕ್ಕೆ ನೋಡುತ್ತಿದ್ದೀರಿ." (ಯೋಹಾನ 8:40). "ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತೀ? ದೇವರೊಬ್ಬನೇ ಹೊರತು ಮತ್ತಾವನೂ ಒಳ್ಳೆಯವನಲ್ಲ." (ಲೂಕ 18:19). "ತಂದೆಯು ನನಗಿಂತ ದೊಡ್ಡವನು." (ಯೋಹಾನ 14:28). ಈ ಮೇಲಿನ ವಚನಗಳಲ್ಲಿ ಯೇಸುಕ್ರಿಸ್ತರು ತಾನು ಮತ್ತು ದೇವರು ಸಂಪೂರ್ಣ ಭಿನ್ನವಾದ ಸತ್ತೆಗಳೆಂದು ಸ್ಪಷ್ಟವಾಗಿ ಹೇಳಿಕೊಟ್ಟಿದ್ದಾರೆ.

ಮಾನ್ಯ ಪಾಸ್ಟರ್ ಸಾಲಿನ್ಸ್‌ರವರೇ,

ನಿಮ್ಮ ಪ್ರಾಮಾಣಿಕತೆಯನ್ನೂ ನಿಮಗಿರುವ ಉತ್ಸಾಹವನ್ನೂ ನಾವು ಅಭಿನಂದಿಸುತ್ತೇವೆ. ಸತ್ಯಶೋಧನೆಯ ಮಾರ್ಗದಲ್ಲಿ ನಿಮಗಿರುವ ಉತ್ಸಾಹವು ತಣ್ಣಗಾಗದಿರಲಿ ಎಂದು ನಾವು ದೇವರೊಡನೆ ಪ್ರಾರ್ಥಿಸುತ್ತೇವೆ. ಇಂದಿನ ಕ್ರೈಸ್ತ ಧರ್ಮೀಯರ ವಿಶ್ವಾಸ ಸಿದ್ಧಾಂತಗಳಲ್ಲಿ ನಿಮಗಿರುವ ನಂಬಿಕೆಯು ಪ್ರಾಮಾಣಿಕವಾದದ್ದಾದರೆ, ಅವುಗಳನ್ನು ಬೈಬಲಿನ ಆಧಾರದಿಂದ ನಿರೂಪಿಸಲು ಸಾಧ್ಯವಿದೆಯೆಂಬ ಭರವಸೆಯು ನಿಮಗಿದೆಯೆಂದಾದರೆ ನಿಮ್ಮ ಗಮನವನ್ನು ನಾವು ಈ ಕೆಳಗಿನ ವಿಷಯದತ್ತ ಸೆಳೆಯಬಯಸುತ್ತೇವೆ:

ಮಹಾತ್ಮ ಯೇಸುಕ್ರಿಸ್ತರ ಕುರಿತು ಪವಿತ್ರ ಖುರ್‌ಆನ್ ಪ್ರತಿಪಾದಿಸುವ ವಿವರಣೆಗಳಿಗೂ ಇಂದಿನ ಕ್ರೈಸ್ತ ಸಭೆಗಳ ಅಂಗೀಕೃತ ನಂಬಿಕೆಗಳಿಗೂ ಪ್ರಧಾನವಾದ ಐದು ವಿಷಯಗಳಲ್ಲಿ ಸಂಪೂರ್ಣ ವ್ಯತ್ಯಾಸವಿದೆ. ಪವಿತ್ರ ಖುರ್‌ಆನ್ ತಿಳಿಸಿಕೊಡುವಂತೆ– 1) ಯೇಸುಕ್ರಿಸ್ತರು ದೇವರಲ್ಲ. 2) ಅವರು ಶಿಲುಬೆಯಲ್ಲಿ ಗತಿಸಲಿಲ್ಲ.
3) ಮಡಿದ ನಂತರ ಜೀವಂತರಾಗಿ ಎದ್ದೇಳಲಿಲ್ಲ (ಪುನರುತ್ಥಾನಗೊಂಡಿಲ್ಲ).
4) ಆಕಾಶಕ್ಕೆ ಶರೀರ ಸಮೇತ ಏರಿ ಹೋಗಿಲ್ಲ. 5) ಅವರೇ ಪುನಃ ಈ ಲೋಕಕ್ಕೆ ಬರಲಾರರು.

ಪವಿತ್ರ ಖುರ್‌ಆನ್ ಯೇಸುಕ್ರಿಸ್ತರ ಬಗ್ಗೆ ತಿಳಿಸಿಕೊಟ್ಟಿರುವ ಈ ಮೇಲಿನ ಐದು ಸಂಗತಿಗಳನ್ನು ಕ್ರೈಸ್ತ ಧರ್ಮಗ್ರಂಥವಾದ ಬೈಬಲ್‌ನಿಂದ ಕೂಡ ನಿರೂಪಿಸಿ ತೋರಿಸಲು ನಾವು ಸಿದ್ಧರಿದ್ದೇವೆ. ನೀವು ಇದಕ್ಕೆ ವಿರುದ್ಧವಾಗಿ ವಿಶ್ವಾಸ ಹೊಂದಿದ್ದರೆ ನಿಮ್ಮ ವಿಶ್ವಾಸವನ್ನು ಬೈಬಲಿನ ಆಧಾರದಿಂದ ರುಜುವಾತುಪಡಿಸಿ ತೋರಿಸಬೇಕು. ಈ ಬಗ್ಗೆ ನಿಮಗೆ ಹೇಳಲಿಕ್ಕಿರುವ ಸಂಗತಿಗಳನ್ನು ಒಂದು ಪ್ರಬಂಧವಾಗಿ ಬರೆದು ನಮ್ಮ ವಿಳಾಸಕ್ಕೆ ಕಳುಹಿಸಿ ಕೊಡಿರಿ. ನಾವು ಸದ್ರಿ ನಿಮ್ಮ ಪ್ರಬಂಧಕ್ಕೆ ಉತ್ತರವನ್ನೂ ನಮ್ಮ ನಂಬಿಕೆಗಳಿಗೆ ಆಧಾರಗಳನ್ನೂ ಬರೆದು ನಿಮಗೆ ಕಳುಹಿಸುತ್ತೇವೆ. ಈ ರೀತಿ ಮೂರು ಅಥವಾ ನಾಲ್ಕು ಬಾರಿ ಅಥವಾ ಅಗತ್ಯವೆಂದಾದರೆ ಅದಕ್ಕಿಂತಲೂ ಹೆಚ್ಚು ಸಲ ನಾವು ಅಭಿಪ್ರಾಯ ವಿನಿಮಯ ನಡೆಸಿ ಕೊನೆಗೆ ಎರಡು ಪಕ್ಷದವರಿಂದಲೂ ಪ್ರತಿಪಾದಿಸಲ್ಪಟ್ಟ ವಿಚಾರಗಳನ್ನು ಮುದ್ರಿಸಿ ಪ್ರಕಟಿಸುವ. ಸತ್ಯವು ಯಾರ ಪಕ್ಷದಲ್ಲಿದೆಯೆಂದೂ ಯಾರದು ನಿರರ್ಥಕ ನಂಬಿಕೆಗಳೆಂದೂ ಅದನ್ನು ಓದುವ ಜನರೇ ತೀರ್ಮಾನಿಸಿಕೊಳ್ಳಲಿ. ಇದರಲ್ಲಿ ನೀವು ಭಯಪಡುವಂತೆ ಯಾರೂ ಸೋಲುವ ಮತ್ತು ಗೆಲ್ಲುವ ಸಮಸ್ಯೆ ಉದ್ಭವಿಸುವುದಿಲ್ಲ. ಹೀಗೆ ಮಾಡುವುದರಿಂದ ಎಷ್ಟೋ ಜನ ಸತ್ಯಾನ್ವೇಷಕರಿಗೆ ಯಥಾರ್ಥದ ಅರಿವಾಗಲು ಪ್ರಯೋಜನವಾಗುವುದೆಂದು ನಾವು ನಂಬುತ್ತೇವೆ. ಅತ್ಯಂತ ಸಮರ್ಪಕವೂ ಶಾಂತಿಯುತವೂ ಆದ ಈ ರೀತಿಯ ವಾದವಿವಾದಕ್ಕೆ ಸಿದ್ಧರಾಗಲು ನಿಮಗೆ ಆತಂಕಗಳೇನೂ ಇರಲಾರದೆಂದು ಭಾವಿಸುತ್ತೇವೆ. ಮೇಲಿನ ಐದು ವಿಷಯಗಳ ಬಗ್ಗೆ ನಿಮ್ಮ ವಿಶ್ವಾಸವನ್ನು ದೃಢೀಕರಿಸುವ ಸಾಕ್ಷ್ಯಾಧಾರಗಳನ್ನೊಳಗೊಂಡ ನಿಮ್ಮ ಪತ್ರವನ್ನು ಎದುರು ನೋಡುತ್ತಿದ್ದೇವೆ. ಸತ್ಯಪಥದಲ್ಲಿ ಚರಿಸುವವರ ಮೇಲೆ ದೇವರ ಸಮಾಧಾನವಿರಲಿ — ಆಮೀನ್

ಅಹ್ಮದಿಯಾ ಮುಸ್ಲಿಂ ಮಿಶನ್,
ಅನ್ಸಾರಿ ರಸ್ತೆ, ಮಂಗಳೂರು – 1.

(25–5–'87ರ "ಮುಂಗಾರು" ದಿನಪತ್ರಿಕೆಯಲ್ಲಿ ಪ್ರಕಟವಾದುದು)

# 'ಸನ್ಮಾರ್ಗ' ಮತ್ತು ಯೇಸುಕ್ರಿಸ್ತರ ಪುನರಾಗಮನ

ಪ್ರಶ್ನೆ:- ಯೇಸುಕ್ರಿಸ್ತರು ಭೂಮಿಗೆ ಹಿಂತಿರುಗಿ ಬರಕ್ಕಿರುವುದನ್ನು ಮುಸ್ಲಿಮರು ಒಪ್ಪುತ್ತಾರೆ. ಈ ಬಗ್ಗೆ ಖುರ್‌ಆನಿನಲ್ಲಿ ಎಲ್ಲಿ ವಿವರಣೆ (ಸೂರಃ – ಆಯತ್) ಇದೆಯೆಂದು ದಯಮಾಡಿ ತಿಳಿಸಿರಿ.

ಉತ್ತರ:- ಸೂರಾ ಅನ್ನಿಸಾ ಆಯತ್ 157ರಿಂದ 159ರ ವರೆಗೆ ನೋಡಿರಿ.

ದಿನಾಂಕ 14/20-6-87ರ ಸನ್ಮಾರ್ಗ ವಾರ ಪತ್ರಿಕೆಯಲ್ಲಿ ಪ್ರಕಟವಾದ ಸ್ಟೆಲ್ಲಾ ಡಿಸೋಜ ಎಂಬೊಬ್ಬರ ಪ್ರಶ್ನೆಗೆ ಪತ್ರಿಕೆಯು ನೀಡಿದ ಉತ್ತರವಿದು. ಯೇಸುಕ್ರಿಸ್ತರು ಆಕಾಶದಿಂದ ಪುನಃ ಈ ಭೂಮಿಗೆ ಇಳಿದು ಬರುವರೆಂಬ ಕ್ರೈಸ್ತರ ನಂಬಿಕೆಯನ್ನು ಬಲಪಡಿಸುವಂತಹ ವೃತ್ತಾಂತ ಪವಿತ್ರ ಖುರ್‌ಆನಿನಲ್ಲೂ ಇದೆಯೆಂದು ಈ ಮೂಲಕ ಸನ್ಮಾರ್ಗ ಪತ್ರಿಕೆ ಹೇಳುತ್ತಿದೆ.

ಇಸ್ರಾಯೇಲ್ ಸಂತತಿಗಳಿಗೆ ಅಲ್ಲಾಹನ ಪ್ರವಾದಿಯಾಗಿ ನಿಯೋಜಿತರಾಗಿದ್ದ ಹಝ್ರತ್ ಈಸಾ (ಅ) ರವರು ಇತರ ಎಲ್ಲಾ ಪ್ರವಾದಿಗಳಂತೆ ಅವರ ಕರ್ತವ್ಯಗಳನ್ನು ನಿರ್ವಹಿಸಿ ಮರಣಹೊಂದಿರುವರೆಂದೂ ಮರಣಹೊಂದಿದ ಯಾರೂ ಈ ಭೂಮಿಗೆ ಮರಳಿ ಬರಲಾರರೆಂದೂ ಪವಿತ್ರ ಖುರ್‌ಆನ್ ಅಸಂದಿಗ್ಧವಾಗಿ ಘೋಷಿಸುತ್ತಿರುವಾಗ ಹಝ್ರತ್ ಈಸಾ (ಅ) ಅವರು ಈ ಭೂಮಿಗೆ ಮತ್ತೊಮ್ಮೆ ಬರಲಿರುವ ವಿಚಾರ ಸೂರಃ ಅನ್ನಿಸಾದ 157, 158, 159 ಎಂಬೀ ವಚನಗಳಲ್ಲಿದೆಯೆಂದು ಓದಿ ಕುತೂಹಲವಾಯಿತು. ಕೂಡಲೇ ಪವಿತ್ರ ಖುರ್‌ಆನನ್ನು ತೆರೆದು ಮೇಲಿನ ವಚನಗಳನ್ನು ನೋಡಿದೆ; ಮತ್ತೆ ಮತ್ತೆ ಓದಿ ನೋಡಿದೆ. ಹಝ್ರತ್ ಈಸಾ (ಅ)ರವರು ಭೂಮಿಗೆ ಹಿಂದಿರುಗಿ ಬರುವರೆಂಬ ವಿಚಾರ ಅದರಲ್ಲಿ ಕಾಣಲು ನನಗೆ ಸಾಧ್ಯವಾಗಲಿಲ್ಲ. ಕೊನೆಗೆ ಜಮಾತೆ ಇಸ್ಲಾಮಿಯುವರು ಪ್ರಕಟಿಸಿದ ದಿವ್ಯ ಕುರ್‌ಆನ್ (ಕನ್ನಡಾನುವಾದ) ನೋಡಿದೆ. ಅದರಲ್ಲಿ ಮೇಲಿನ ವಚನಗಳಿಗೆ ಈ ರೀತಿ ಕನ್ನಡ ಭಾಷಾಂತರ ನೀಡಲಾಗಿತ್ತು:

157. ಮರ್ಯಮಳ ಪುತ್ರ ಈಸಾಮಸೀಹ– ಅಲ್ಲಾಹನ ಸಂದೇಶವಾಹಕನನ್ನು ನಾವು ವಧಿಸಿರುತ್ತೇವೆ ಎಂದು ಅವರು (ಉದ್ಧಟತನದಿಂದ) ಹೇಳಿದ್ದರಿಂದಲೂ (ಅವರನ್ನು ನಾವು ಶಪಿಸಿದೆವು). ವಾಸ್ತವದಲ್ಲಿ ಅವರು ಅವರನ್ನು (ಈಸಾ ಮಸೀಹರನ್ನು) ವಧಿಸಲೂ ಇಲ್ಲ, ಸಿಲುಬೆಗೆ ಏರಿಸಲೂ ಇಲ್ಲ. ಆದರೆ ಯಥಾರ್ಥತೆ ಅವರಿಗೆ ಅವ್ಯಕ್ತಗೊಳಿಸಲ್ಪಟ್ಟಿತು. (ಅಷ್ಟೆ). ಅವರ ವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳವರು ಕೂಡಾ ಅದರ ಬಗ್ಗೆ ಸಂಶಯದಲ್ಲೇ ಇದ್ದಾರೆ. ಊಹಾಪೋಹೆಗಳನ್ನೇ ಹಿಂಬಾಲಿಸುವುದು ಹೊರತು, ಅದರ ಸಂಬಂಧ ಏನೊಂದು ತಿಳುವಳಿಕೆಯೂ ಅವರಿಗಿರುವುದಿಲ್ಲ. ನಿಸ್ಸಂದೇಹವಾಗಿಯೂ ಅವರು ಅವರನ್ನು ವಧಿಸಿಲ್ಲ.

158. ವಾಸ್ತವದಲ್ಲಿ ಅವರನ್ನು ಅಲ್ಲಾಹನು ತನ್ನೆಡೆಗೆ ಎತ್ತಿಕೊಂಡನು. ಅಲ್ಲಾಹನಾದರೋ ಪ್ರತಾಪವಂತನೂ ಯುಕ್ತಿವಂತನೂ ಆಗಿರುತ್ತಾನೆ.

159. ಗ್ರಂಥಕಾರರಲ್ಲಿ ಯಾರೂ ಅವರ ಮರಣಕ್ಕೂ ಮುಂಚೆ ಅವರಲ್ಲಿ ವಿಶ್ವಾಸವಿಡದವರಾಗಿ ಉಳಿಯಲಿಕ್ಕಿಲ್ಲ. ಪುನರುತ್ಥಾನ ದಿವಸದಲ್ಲಿ ಅವರು ಆ ಜನರಿಗೆದುರು ಸಾಕ್ಷಿಯಾಗುವರು.

ಹಝ್ರತ್ ಈಸಾ (ಅ) ಅವರು ಈ ಭೂಮಿಗೆ ಮರಳಿ ಬರುವರೆಂಬ ವಿಷಯದ ಕುರಿತು ಮೇಲಿನ ವಚನಗಳಲ್ಲಿ ವಿವರಿಸಲಾಗಿಲ್ಲವೆಂದು ತಿಳಿಯಲು ಯಾರಿಗೂ ಸಾಧ್ಯವಿದೆ. ಎಲ್ಲರಿಗೂ ಮನವರಿಕೆಯಾಗಲೆಂದು ಮೌದೂದಿಗಳು ಭಾಷಾಂತರಿಸಿ ಪ್ರಕಟಿಸಿದ ಗ್ರಂಥದಿಂದಲೇ ಈ ಮೂರು ವಚನಗಳನ್ನು ಉಲ್ಲೇಖಿಸಿದ್ದೇನೆ.

# *ಅಹ್ಮದಿಯಾ ವಾರ್ತೆಗಳು*

## ಫಿಜಿಯಲ್ಲಿ 70ನೇ ವಾರ್ಷಿಕ ಸಮ್ಮೇಳನ

ಕಳೆದ ಡಿಸೆಂಬರ್ 24ರಿಂದ 26ರ ವರೆಗೆ ಸುವಾ ಎಂಬಲ್ಲಿನ ಫರೆಝ್ಲ್ ಉಮರ್ ಮಸೀದಿಯಲ್ಲಿ ಫಿಜಿ ಅಹ್ಮದಿಯಾ ಜಮಾಅತಿನ 70ನೇ ವಾರ್ಷಿಕ ಸಮ್ಮೇಳನವು ಜರಗಿತು.

ಪ್ರಥಮದಿನ ರಾಜ್ಯದ ಉಪಪ್ರಧಾನಿ ರಾತು ಡೇವಿಡ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಈ ಸಮ್ಮೇಳನದಲ್ಲಿ ಭಾಗವಹಿಸಿರುವ ವಿವಿಧ ದೇಶಗಳ ಹಿಂದೂ, ಮುಸ್ಲಿಂ, ಕ್ರೈಸ್ತ ಮತ್ತು ಸಿಕ್ಖರನ್ನು ಕಂಡು ತನಗೆ ಅತೀವ ಹರ್ಷವಾಯಿತೆಂದೂ ಅಹ್ಮದಿಯಾ ಸಂಘಟನೆ ಎಲ್ಲಾ ಜನರನ್ನೂ ಪ್ರೀತಿಯಿಂದ ಕಾಣುತ್ತದೆಂಬುದಕ್ಕೆ ಇದೊಂದು ಸಾಕ್ಷ್ಯವೆಂದೂ ಅವರು ಹೇಳಿದರು. "ಎಲ್ಲರೊಡನೆಯೂ ಪ್ರೀತಿ, ಯಾರೊಡನೆಯೂ ದ್ವೇಷವಿಲ್ಲ" ಎಂಬ ಅಹ್ಮದಿಯಾ ಆದರ್ಶ ವಾಕ್ಯ ತನಗೆ ಬಹಳ ಇಷ್ಟವಾಗಿದೆಯೆಂದು ಹೇಳಿ ಅವರು ತನ್ನ ಸಂತೋಷವನ್ನು ಸೂಚಿಸಿದರು.

ಸಮ್ಮೇಳನದಲ್ಲಿ ಅಹ್ಮದಿಯಾ ಖಲೀಫರವರು ಕಳುಹಿಸಿದ ಸಂದೇಶವನ್ನು ಸಭಿಕರಿಗೆ ಓದಿ ಕೇಳಿಸಲಾಯಿತು. ಇಸ್ಲಾಮಿನ ಹೆಸರಿಗೆ ಕೀರ್ತಿ ತರುವ ರೀತಿಯಲ್ಲಿ ಪ್ರತಿಯೊಬ್ಬ ಅಹ್ಮದಿ ವರ್ತಿಸಬೇಕೆಂದೂ ಫಿಜಿಯ ಎಲ್ಲೆಲ್ಲೂ ಶಾಂತಿ ಮತ್ತು ಸೌಹಾರ್ದದ ವಾತಾವರಣ ಉಂಟಾಗುವಂತೆ ಮಾಡಬೇಕೆಂದೂ ಆ ಸಂದೇಶದಲ್ಲಿ ಹೇಳಲಾಗಿತ್ತು.

ಫಿಜಿಯ ಮಿಶನರಿ ಮೌಲಾನ ಅಬ್ದುಲ್ ಅರಿಫೀರಝ್ ಸಾಹೇಬರು ದೇವಾಸ್ತಿತ್ವದ ಕುರಿತು ಭಾಷಣ ಮಾಡಿದರು. ದೈವಾಸ್ತಿತ್ವದ ವಿರುದ್ಧವಾಗಿ ಎತ್ತಲ್ಪಡುವ ಆಕ್ಷೇಪಣೆಗಳಿಗೆ ಅವರು ತನ್ನ ಭಾಷಣದಲ್ಲಿ ಉತ್ತರ ನೀಡಿದರು.

ದ್ವಿತೀಯ ಮತ್ತು ತೃತೀಯ ದಿನದಂದು ಅಹ್ಮದಿಯಾ ವಿದ್ವಾಂಸರು ವಿವಿಧ ವಿಷಯಗಳ ಕುರಿತು ಭಾಷಣ ಮಾಡಿದರು.

---

(36ನೆ ಪುಟದಿಂದ)

ಅತ್ಯಂತ ಗಂಭೀರವಾದೊಂದು ವಿಷಯದ ಬಗ್ಗೆ – ಈಸಾ (ಅ) ರವರ ಪುನರಾಗಮನದ ಬಗ್ಗೆ – ಇದಕ್ಕಿಂತಲೂ ಸ್ಪಷ್ಟವಾದ ವಿವರಣೆಗಳು ಪವಿತ್ರ ಖುರ್‌ಆನಿನಲ್ಲಿ ಇಲ್ಲವೇ ? ಎಂದು ಈಸಾ (ಅ) ಆಕಾಶದಿಂದ ಇಳಿದು ಬರುವರೆಂದು ಕಾಯುತ್ತಿರುವ ಬಹುಸಂಖ್ಯಾತ ಮುಸ್ಲಿಮರು ಮೌದೂದಿಗಳೊಡನೆ ಕೇಳಬೇಕಾಗಿದೆ. ಪವಿತ್ರ ಖುರ್‌ಆನಿನ ಮೇಲಿನ ವಚನಗಳಲ್ಲಿ ಹಝ್ರತ್ ಈಸಾ (ಅ)ರವರು ಪುನಃ ಈ ಭೂಮಿಗೆ ಬರುವ ವಿಚಾರ ಉಲ್ಲೇಖಿಸಲ್ಪಟ್ಟಿರುವುದಿಲ್ಲವೆಂದು ಸನ್ಮಾರ್ಗದ ಪ್ರಶ್ನೋತ್ತರ ಅಂಕಣಕಾರ 'ಮುಜೀಬ್'ರಿಗೂ ಮನವರಿಕೆಯಾಗಿರಬೇಕು. ಅವರು ಈ ಬಗ್ಗೆ ಸಂಶಯಗ್ರಸ್ತರಾಗಿದ್ದಾರೆಂದು ತೋರುತ್ತಿದೆ. ಇಲ್ಲವಾದರೆ, ಕ್ರೈಸ್ತ ಸಹೋದರನೊಬ್ಬ ಪ್ರಶ್ನೆ ಕೇಳಿದಾಗ ಬರೇ ಖುರ್‌ಆನ್ ಸೂರಃ ಮತ್ತು ವಚನದ ಸಂಖ್ಯೆ ಮಾತ್ರ ಅವರು ಹೇಳುತ್ತಿರಲಿಲ್ಲ. ಕ್ರೈಸ್ತ ಸಹೋದರನಿಗೆ ಸದ್ರಿ ವಚನಗಳನ್ನು ಪವಿತ್ರ ಖುರ್‌ಆನಿನಲ್ಲಿ ಖುದ್ದು ಪರಿಶೀಲಿಸಲು ನೆನಸಿದಷ್ಟು ಸುಲಭದಲ್ಲಿ ಸಾಧ್ಯವಿಲ್ಲವೆಂದು ಮುಜೀಬ್‌ರಿಗೆ ತಿಳಿದಿಲ್ಲವೇ? ಆದರೂ ತನ್ನಂತೆಯೇ ಇತರರನ್ನೂ ಸಂಶಯದ ಸುಳಿಯಲ್ಲಿ ಸಿಲುಕಿಸುವ ಉದ್ದೇಶದಿಂದ, ಪ್ರಶ್ನೆಗೆ ಉತ್ತರ ನೀಡುವಾಗ ವಚನಗಳ ಪೂರ್ಣ ಕನ್ನಡಾನುವಾದವನ್ನು ಪ್ರಕಟಿಸದೇ ಕೇವಲ "ಅನ್ನಿಸಾದ 157ರಿಂದ 159ರ ವರೆಗೆ ನೋಡಿರಿ" ಎಂದು ಹೇಳಿಬಿಟ್ಟಿದ್ದಾರೆ. ಆ ಮೂರು ವಚನಗಳಲ್ಲಿ ಈಸಾ (ಅ) ಆಕಾಶದಿಂದ ಭೂಮಿಗೆ ಇಳಿದು ಬರುವ ವೃತ್ತಾಂತ ಇರಬಹುದೆಂದು ಓದುಗರು ತಪ್ಪಾಗಿ ತಿಳಿದುಕೊಳ್ಳಲಿ ಎಂಬ ಕುಯುಕ್ತಿಯನ್ನು ಇಲ್ಲಿ 'ಮುಜೀಬ್' ಪ್ರಯೋಗಿಸಿದ್ದಾರೆ ಎಂದು ತಿಳಿಯಬೇಕಾಗಿದೆ.

—M. P. I.

## ನೈಜೀರಿಯಾದಲ್ಲಿ ಮೂವರು ರಾಜರು ಅಹ್ಮದಿಯತ್ ಸ್ವೀಕರಿಸಿದರು

ಇತ್ತೀಚೆಗೆ ನೈಜೀರಿಯಾ ದೇಶದ ವಿವಿಧ ಪ್ರಾಂತ್ಯಗಳಲ್ಲಿ ಮೂವರು ರಾಜರು ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆಂದು ತಿಳಿದುಬಂದಿದೆ. ಅವರಲ್ಲಿ ಪ್ರತಿಯೊಬ್ಬರ ಆಡಳಿತದಲ್ಲಿ 40 ಮಂದಿ ಮುಖಂಡರು (ಚೀಫ್ಸ್) ಅವರ ಅಧೀನದಲ್ಲಿ ವರ್ತಿಸುತ್ತಾರೆ.

## ಶ್ರೀಲಂಕಾದಲ್ಲಿ 8ನೇ ವಾರ್ಷಿಕ ಸಮ್ಮೇಳನ

ಕಳೆದ ಮಾರ್ಚ್ 7 ಮತ್ತು 8ರಂದು ಶ್ರೀಲಂಕಾದ ನೆಗೊಂಬೊ ಎಂಬಲ್ಲಿ ಶ್ರೀಲಂಕಾ ಅಹ್ಮದಿಯಾ ಸಂಘಟನೆಯ 8ನೇ ವಾರ್ಷಿಕ ಸಮ್ಮೇಳನ ಸಮಾವೇಶಗೊಂಡಿತು.

ಅಹ್ಮದಿಯಾ ಮಸೀದಿಯ ವಠಾರದಲ್ಲಿ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಶ್ರೀಲಂಕಾದ ಕೈಗಾರಿಕಾ ಸಚಿವರಾದ ಎನ್. ಡಿ. ಫೆರ್ನಾಂಡೋ ಅವರು ಸಮ್ಮೇಳದಲ್ಲಿ ಭಾಗವಹಿಸಿದ್ದರು.

## ಪೋರ್ಟ್‌ಬ್ಲೇರ್‌ನಲ್ಲಿ ಸಾರ್ವಜನಿಕ ಸಭೆ

ಕಳೆದ ಮಾರ್ಚ್ 7 ಮತ್ತು 8ರಂದು ಪೋರ್ಟ್‌ಬ್ಲೇರ್‌ನಲ್ಲಿ ಅಹ್ಮದಿಯಾ ಸಂಘಟನೆಯ ವತಿಯಿಂದ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು.

ಜನಾಬ್ ನದೀರ್ ಅಹ್ಮದ್ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ಅಹ್ಮದಿಯಾ ವಿದ್ವಾಂಸರು ವಿವಿಧ ವಿಷಯುಗಳ ಬಗ್ಗೆ ಭಾಷಣವಿತ್ತರು. ಸಮ್ಮೇಳನ ಸ್ಥಳದಲ್ಲಿ ಬುಕ್‌ಸ್ಟಾಲನ್ನು ಇಡಲಾಗಿತ್ತು. ವಿವಿಧ ಭಾಷೆಗಳ ಅನೇಕ ಕರಪತ್ರಗಳನ್ನು ಹಂಚಲಾಯಿತು.

## ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಘ ಸಮ್ಮೇಳನದಲ್ಲಿ ಅಹ್ಮದೀ ಪ್ರತಿನಿಧಿಗಳು

ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಘದ ಒಂದು ವಿಶೇಷ ಸಮ್ಮೇಳನ ಕಳೆದ ಮಾರ್ಚ್ 2ರಿಂದ 6ರ ವರೆಗೆ ದೆಹಲಿಯ ಅಶೋಕ ಹೋಟೇಲ್‌ನಲ್ಲಿ ಜರಗಿದ ಸಂದರ್ಭದಲ್ಲಿ ಅಹ್ಮದಿಯಾ ಸಂಘಟನೆಯ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಒಂದು ಅಹ್ಮದಿಯಾ ಬುಕ್‌ಸ್ಟಾಲನ್ನು ಸಹ ಅಲ್ಲಿ ಏರ್ಪಡಿಸಲಾಗಿತ್ತು.

ಚೌದರಿ ಮುಹಮ್ಮದ್ ಅಹ್ಮದ್ ಆರಿಫ್, ಸಈದ್ ಅಹ್ಮದ್, ತಾಹಿರ್ ಅಹ್ಮದ್ ಆರಿಫ್ ಮೊದಲಾದವರು ಅಹ್ಮದಿಯಾ ಧ್ಯೇಯಧೋರಣೆ, ವಿಶ್ವಾಸಾಚಾರಗಳ ಬಗ್ಗೆ ಸಮ್ಮೇಳನದಲ್ಲಿ ಮಾತನಾಡಿ ಸಭಿಕರ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡಿದರು.

## ಕೇರಳ ಅಹ್ಮದಿಯಾ ಯುವಜನ ಸಮ್ಮೇಳನ

ಕೇರಳ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ರಾಜ್ಯ ಸಮ್ಮೇಳನವು ಎಪ್ರಿಲ್ 4 ಮತ್ತು 5ರಂದು ಕೊಚ್ಚಿ ಮಿಶನ್ ಹೌಸಿನ ವಿಶಾಲವಾದ ಅಂಗಣದಲ್ಲಿ ಜರಗಿತು.

ಅಖಿಲ ಭಾರತ ಖುದ್ದಾಮುಲ್ ಅಹ್ಮದಿಯಾ ಸದರ್ ಮೌಲವಿ ಮುನೀರ್ ಅಹ್ಮದ್ ಸಾಹೇಬ್‌ರವರು ಎಪ್ರಿಲ್ 4ರಂದು ಸಮ್ಮೇಳನವನ್ನು ಉದ್ಘಾಟಿಸಿದರು. ಯುವಜನರು ಅತ್ಯುತ್ಸಾಹದಿಂದ ಕಾರ್ಯರಂಗಕ್ಕೆ ಇಳಿದು ಪ್ರವರ್ತಿಸಬೇಕೆಂದು ಅವರು ಉಪದೇಶಿಸಿದರು.

ಧರ್ಮ ಸೇವೆಗಾಗಿ ಜೀವ, ಧನ, ಸಮಯ, ಮಾನ ಎಲ್ಲವನ್ನೂ ತ್ಯಾಗಮಾಡಲು ತಾನು ಸದಾ ಸಿದ್ಧನೆಂಬ ಖುದ್ದಾಮುಲ್ ಅಹ್ಮದಿಯಾ ಪ್ರತಿಜ್ಞೆಯನ್ನು ಸ್ವಂತ ಜೀವನದಲ್ಲಿ ಎಷ್ಟರಮಟ್ಟಿಗೆ ಕಾರ್ಯಗತಗೊಳಿಸಲಾಗಿದೆಯೆಂಬುದನ್ನು ಪ್ರತಿಯೊಬ್ಬನು ಆತ್ಮಾವಲೋಕನ ನಡೆಸಿ ಕುಂದು ಕೊರತೆಗಳನ್ನು ನಿವಾರಿಸಿ ಪೂರ್ವಾಧಿಕ

ಉತ್ಸಾಹದಿಂದ ಮುನ್ನಡೆಯಲು ಅಖಿಲ ಭಾರತ ಖುದ್ದಾಮಲ್ ಅಹ್ಮದಿಯಾ ಕಾರ್ಯದರ್ಶಿ ಜಾವೇದ್ ಅಹ್ಮದ್ ಸಾಹೇಬ್ ಕೋರಿದರು. ಪ್ರಚಾರ ಕಾರ್ಯದಲ್ಲಿ ಬಹಳ ಹೆಚ್ಚು ಪರಿಶ್ರಮಿಸಲು ಅವರು ಯುವ ಜನರಿಗೆ ಕರೆಯಿತ್ತರು.

ಅಖಿಲ ಭಾರತ ಖುದ್ದಾಮುಲ್ ಅಹ್ಮದಿಯಾ ಉಪಾಧ್ಯಕ್ಷರಾದ ಚೌದರಿ ಮುಹಮ್ಮದ್ ಆರಿಫ್ ಸಾಹೇಬರು ಪಾಕಿಸ್ತಾನದ ಸ್ಥಿತಿಗತಿಗಳನ್ನು ವಿವರಿಸಿದರು. ವೈರಿಗಳು ವಿರೋಧವನ್ನು ಎಷ್ಟೇ ಬಲಪಡಿಸಿದರೂ ಅಹ್ಮದಿಯತ್‌ನ ಮುನ್ನಡೆಯನ್ನು ತಡೆಯಲು ಸಾಧ್ಯವಿಲ್ಲವೆಂದು ಅವರು ಹೇಳಿದರು. ಪಾಕಿಸ್ತಾನದಲ್ಲಿ ಓರ್ವ ಅಹ್ಮದಿ ಹುತಾತ್ಮನಾಗುವಾಗ ಅಲ್ಲಿ ಒಂದು ಹೊಸ ಜಮಾಅತೇ ರೂಪತಾಳುತ್ತದೆಂದು ಅವರು ನುಡಿದರು. ಅಹ್ಮದೀಯರು ತಮ್ಮ ಪ್ರತಿಜ್ಞೆಯನ್ನು ಸಂಪೂರ್ಣವಾಗಿ ಪಾಲಿಸಬೇಕೆಂದೂ ಮಕ್ಕಳಿಗೆ ಬಾಲ್ಯದಿಂದಲೇ ಸರಿಯಾದ ಶಿಕ್ಷಣವನ್ನು ನೀಡಬೇಕೆಂದೂ ಅವರು ಹೇಳಿದರು.

ಅಹ್ಮದಿಯತ್ ಎಂಬ ಜ್ಯೋತಿಯಲ್ಲಿ ಆತ್ಮಾರ್ಪಣೆ ಮಾಡಲು ಸಿದ್ಧನಾಗದ ತನಕ ಯಥಾರ್ಥ ಅಹ್ಮದಿಯಾಗಲು ಸಾಧ್ಯವಿಲ್ಲವೆಂದು ಮೌಲವಿ ಅಬ್ದುಲ್ ಹಕ್ ಸಾಹೇಬ್ ಅಭಿಪ್ರಾಯಪಟ್ಟರು.

## ಹಾಲೆಂಡ್‌ನಲ್ಲಿ ಖುರ್‌ಆನ್ ತರ್ಜುಮೆಗಳ ಪ್ರದರ್ಶನ

ಹಾಲೆಂಡಿನ ಅಹ್ಮದಿಯಾ ಮುಸ್ಲಿಂ ಮಿಶನ್ "ಬೈತುನ್ನೂರ್"ನಲ್ಲಿ ಕಳೆದ ಮೇ 2ರಂದು ಅಹ್ಮದಿಯಾ ಜಮಾಅತ್ ಪ್ರಕಟಿಸಿದ ವಿವಿಧ ಭಾಷೆಗಳ ಖುರ್‌ಆನ್ ತರ್ಜುಮೆಗಳ ಒಂದು ಪ್ರದರ್ಶನವನ್ನು ಎರಡನೇ ಬಾರಿ ಏರ್ಪಡಿಸಲಾಗಿತ್ತು.

ನನ್ಸ್‌ಪೀಟ್‌ನ ಮೇಯರ್ ಮಿ। ಸಿ. ಕೊವೆಲ್ ಪ್ರದರ್ಶನವನ್ನು ಉದ್ಘಾಟಿಸಿದ್ದರು. 4 ದಿನಗಳ ಖುರ್‌ಆನ್ ಪ್ರವಚನವನ್ನು ಸಹ ಏರ್ಪಡಿಸಲಾಗಿತ್ತು.

"ಖುರ್‌ಆನಿನಲ್ಲಿ ಸ್ತ್ರೀಯ ಸ್ಥಾನಮಾನ," "ಖುರ್‌ಆನಿನಲ್ಲಿ ಹಝ್ರತ್ ಈಸಾ (ಅ) ಅವರ ಸ್ಥಾನ, "ಖುರ್‌ಆನಿನ ಅಧ್ಯಾಪನೆಗಳು", "ಖುರ್‌ಆನಿನಲ್ಲಿ ಮರಣಾನಂತರ ಜೀವನದ ವಿವರಣೆ" ಎಂಬ ವಿಷಯಗಳ ಬಗ್ಗೆ ಅಹ್ಮದಿಯಾ ವಿದ್ವಾಂಸರು ಪ್ರವಚನವಿತ್ತರು.

## 9ನೇ ಅಖಿಲ ಬಂಗಾಳ ವಾರ್ಷಿಕ ಸಮ್ಮೇಳನ

ಕಳೆದ ಎಪ್ರಿಲ್ 17 ಮತ್ತು 18ರಂದು ಬೋಲ್ಪುರ ಮತ್ತು ಗಂಗಾರಾಂಪುರದಲ್ಲಿ 9ನೇ ಅಖಿಲ ಭಾರತ ಬಂಗಾಳ ಅಹ್ಮದಿಯಾ ವಾರ್ಷಿಕ ಸಮ್ಮೇಳನ ಸಮಾವೇಶಗೊಂಡಿತು. ಪ್ರಥಮ ದಿನ ಬೋಲ್ಪುರ (ಶಾಂತಿ ನಿಕೇತನ)ದಲ್ಲಿ ಸರ್ವಧರ್ಮ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ದ್ವಿತೀಯ ದಿನ ಗಂಗಾರಾಂಪುರದಲ್ಲಿ ಪೈಗಂಬರರ ದಿನವನ್ನು ಆಚರಿಸಲಾಯಿತು. ವಿವಿಧ ಧರ್ಮೀಯರು ಸಮಾರಂಭಗಳಲ್ಲಿ ಭಾಗವಹಿಸಿದರು.

ಎಪ್ರಿಲ್ 17ರಂದು ಬೋಲ್ಪುರ ಟೌನ್‌ಹಾಲ್‌ನಲ್ಲಿ ಸರ್ವಧರ್ಮ ಸಮ್ಮೇಳನ ಜರಗಿತು. ಕಲ್ಕತ್ತಾ ಯುನಿವರ್ಸಿಟಿಯ ಡಾ। ಎಂ. ಉಸ್ಮಾನ್ ಘನಿ (ಹೆಡ್ ಓಫ್ ದಿ ಡಿಪಾರ್ಟ್‌ಮೆಂಟ್ – ಇಸ್ಲಾಮಿಕ್ ಹಿಸ್ಟರಿ ಎಂಡ್ ಕಲ್ಚರ್) ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶಾಂತಿನಿಕೇತನದ ಪ್ರಖ್ಯಾತ ವಿಶ್ವಭಾರತಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ। ಎನ್. ಎಸ್. ಬಾಸು ಮುಖ್ಯಾತಿಥಿಯಾಗಿ ಭಾಗವಹಿಸಿದರು.

ಡಾ। ಸತ್‌ರಂಜನ್ ಬ್ಯಾನರ್ಜಿ, ಜ। ಎಂ. ಎಂ. ಆಲಿ, ಶ್ರೀ ವೀರೆಂದ್ರನಾಥ್, ಮೌಲವಿ ಸುಲ್ತಾನ್ ಅಹ್ಮದ್ ಝಫರ್, ಶ್ರೀ ಎಸ್. ಚಟ್ಟೋಪಾಧ್ಯಾಯ (ರವೀಂದ್ರನಾಥ ಟಾಗೋರರ ಮಿತ್ರ), ಅಲ್‌ಹಾಜ್ ಜ। ಅಹ್ಮದ್ ತೌಫೀಕ್ ಚೌದರಿ (ಬಂಗ್ಲಾ ದೇಶ) ಮೊದಲಾದವರು ವಿವಿಧ ಧರ್ಮ ಹಾಗೂ ಧರ್ಮಗುರುಗಳ ಬಗ್ಗೆ ಮಾತನಾಡಿದರು.

ದ್ವಿತೀಯ ದಿನ ಗಂಗಾರಾಂಪುರದಲ್ಲಿ ನಡೆದ ಸೀರತ್ ಸಭೆಯ ಅಧ್ಯಕ್ಷತೆಯನ್ನು ಪಶ್ಚಿಮ ಬಂಗಾಳದ ಅಹ್ಮದಿಯಾ ಮಿಶನರಿ ಮೌಲವಿ ಸುಲ್ತಾನ್ ಅಹ್ಮದ್ ಸಾಹೇಬರು ವಹಿಸಿದರು. ಮಾಸ್ಟರ್

ಮಹಬೂಬುಲ್ ಹಕ್, ನೂರ್ ಅಹ್ಮದ್, ಮೌಲವಿ ಫಾರೂಕ್ ಅಹ್ಮದ್, ಖಾರಿಝ ಅಬ್ದುಲ್ ರಶೀದ್, ಹಾಜಿ ಅಹ್ಮದ್ ತೌಫೀಕ್ ಮೊದಲಾದವರು ಮುಹಮ್ಮದ್ ಪೈಗಂಬರರ ಕುರಿತು ಭಾಷಣ ಮಾಡಿದರು.

## ಆಂಧ್ರ ಪ್ರದೇಶ ಮುಖ್ಯಮಂತ್ರಿಗೆ ಖುರ್‌ಆನ್ ಉಡುಗೊರೆ

ಹೈದರಾಬಾದ್ ಅಹ್ಮದಿಯಾ ಸಂಘಟನೆಯ ಒಂದು ನಿಯೋಗವು ಇತ್ತೀಚೆಗೆ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಟಿ. ರಾಮರಾವ್‌ರನ್ನು ಭೇಟಿಯಾಯಿತು. ಆಂಧ್ರಪ್ರದೇಶದಲ್ಲಿ ಅಹ್ಮದಿಯಾ ಸಂಘಟನೆಯ ಚಟುವಟಿಕೆಗಳ ಕುರಿತು ಮುಖ್ಯಮಂತ್ರಿಗೆ ವಿವರಿಸಲಾಯಿತು. ಖುರ್‌ಆನ್ ಇಂಗ್ಲಿಷ್ ಭಾಷಾಂತರ ಮತ್ತು ಇತರ ಅಹ್ಮದಿಯಾ ಸಾಹಿತ್ಯಗಳನ್ನು ಅವರಿಗೆ ಉಡುಗೊರೆಯಾಗಿ ನೀಡಲಾಯಿತು.

## "ಡುಲೋಸ್"ಗೆ ಅಹ್ಮದಿಯಾ ಸಾಹಿತ್ಯ ಪಾರಿತೋಷಕ

ಜಗತ್ತಿನ ಅತ್ಯಂತ ದೊಡ್ಡ ತೇಲುವ ಗ್ರಂಥ ಭಂಡಾರವೆಂದು ಹೇಳಲ್ಪಡುವ ಕ್ರೈಸ್ತ ಧರ್ಮ ಪ್ರಚಾರ ಹಡಗು "ಡುಲೋಸ್" ಕಳೆದ ಮಾರ್ಚ್ ತಿಂಗಳ ಕೊನೆಯಲ್ಲಿ ನವಮಂಗಳೂರಿನ ಬಂದರದಲ್ಲಿ ಕೆಲವು ದಿನಗಳ ವರೆಗೆ ಕಾರ್ಯಕ್ರಮ ಇರಿಸಿಕೊಂಡಿದ್ದಾಗ ಮಂಗಳೂರಿನ ಅಹ್ಮದಿಯಾ ಸಂಘಟನೆಯ ವತಿಯಿಂದ ಹಡಗದ ಮುಖ್ಯಾಧಿಕಾರಿ ಕ್ಯಾಪ್ಟನ್ ಕಾರ್ಲ್ ಐಸಾಕ್‌ಸನ್ ಅವರಿಗೆ ಅಹ್ಮದಿಯಾ ಸಾಹಿತ್ಯಗಳನ್ನು ಪಾರಿತೋಷಕವಾಗಿ ರವಾನಿಸಿಕೊಡಲಾಯಿತು.

## ಮೂದಾಪುರದಲ್ಲಿ ಭಾರತೀಯ ಧರ್ಮ ಸಮ್ಮೇಳನ – ಅಹ್ಮದೀ ಪ್ರತಿನಿಧಿಯ ಭಾಷಣ

ಕಳೆದ ಫೆಬ್ರವರಿ 1ರಂದು ಕೊಡಗು ಜಿಲ್ಲೆಯ ಮೂದಾಪುರದಲ್ಲಿ ಬಸವಾಪಟ್ಟಣದ ಶ್ರೀ ರಾಘವೇಂದ್ರ ಮಠದ ವತಿಯಿಂದ ಸಮಾವೇಶಗೊಂಡ 11ನೇ ಭಾರತೀಯ ಧರ್ಮಸಮ್ಮೇಳನದಲ್ಲಿ ಅಹ್ಮದಿಯಾ ಪ್ರತಿನಿಧಿಗಳು ಭಾಗವಹಿಸಿದರು.

ಸಮ್ಮೇಳನದ ಅಪರಾಹ್ನದ ಅಧಿವೇಶನದಲ್ಲಿ ಮಂಗಳೂರಿನ ಅಹ್ಮದಿಯಾ ಪ್ರಚಾರ ಕಾರ್ಯದರ್ಶಿ ಎಂ. ಪಿ. ಇಬ್ರಾಹಿಂ ಸಾಹೇಬ್‌ರವರು "ಇಸ್ಲಾಂ ಮತ್ತು ಧರ್ಮ ಸಾಮರಸ್ಯ" ಎಂಬ ವಿಷಯದಲ್ಲಿ ಒಂದು ಉಪನ್ಯಾಸವನ್ನು ಸಾದರಪಡಿಸಿದರು. ವಿವಿಧ ಧರ್ಮಿಯರು ಪರಸ್ಪರ ಕಚ್ಚಾಡುವ ಈ ಕಾಲದಲ್ಲಿ ಧರ್ಮ ಸಾಮರಸ್ಯ ಹೇಗೆ ಸಾಧ್ಯವಾಗುವುದೆಂಬುದರ ಕುರಿತು ಅವರು ಇಸ್ಲಾಂ ಧರ್ಮ ನೀಡುವ ಅಧ್ಯಾಪನಗಳನ್ನು ಹಾಗೂ ಅಹ್ಮದಿಯಾ ಸಂಘಟನೆಯ ಸ್ಥಾಪಕರ ಉಪದೇಶ ನಿರ್ದೇಶಗಳನ್ನು ವಿವರಿಸಿದರು. ವೇದಿಕೆಯ ಮೇಲೆ ಉಪಸ್ಥಿತರಾಗಿದ್ದ ವಿವಿಧ ಧರ್ಮಗಳ ವಿದ್ವಾಂಸರು ಈ ಉಪನ್ಯಾಸದ ಬಗ್ಗೆ ತಮ್ಮ ಮೆಚ್ಚುಗೆ ಸೂಚಿಸಿದರು.

ಸಮ್ಮೇಳನದಲ್ಲಿ ಭಾಗವಹಿಸಿದ್ದ ಧರ್ಮಗುರುಗಳಿಗೂ ಭಾಷಣಗಾರರಿಗೂ ಅಹ್ಮದಿಯಾ ಸಾಹಿತ್ಯಗಳನ್ನು ಪಾರಿತೋಷಕವಾಗಿ ನೀಡಲಾಯಿತು.

ಸಮ್ಮೇಳನ ಸ್ಥಳದಲ್ಲಿ ಸ್ಥಾಪಿಸಲಾಗಿದ್ದ ಅಹ್ಮದಿಯಾ ಬುಕ್‌ಸ್ಟಾಲ್ ಮೂಲಕ ನೂರಾರು ಪುಸ್ತಕಗಳನ್ನೂ ಸಾವಿರಾರು ಕಿರುಕೃತಿಗಳನ್ನೂ ಹಂಚಲಾಯಿತು.

ಸಮ್ಮೇಳನದಲ್ಲಿ ವಿತರಿಸಲಾದ ಕಿರುಕೃತಿಗಳ ಮುದ್ರಣ, ಬುಕ್‌ಸ್ಟಾಲ್ ಸ್ಥಾಪನೆ ಇತ್ಯಾದಿ ವೆಚ್ಚವನ್ನು ಮಡಿಕೇರಿ ಹಾಗೂ ಶಿವಮೊಗ್ಗದ ಅಹ್ಮದಿಯಾ ಘಟಕಗಳು ವಹಿಸಿದ್ದವು.

## ಮೊಗ್ರಾಲ್‌ನಲ್ಲಿ ಕ್ರೀಡಾದಿನ

ಕಳೆದ ಎಪ್ರಿಲ್ 26ರಂದು ಅಹ್ಮದಿಯಾ ಯುವಜನ ಸಂಘದ ವತಿಯಿಂದ ಮೊಗ್ರಾಲ್‌ನಲ್ಲಿ ಕ್ರೀಡಾದಿನವನ್ನು ಆಚರಿಸಲಾಯಿತು.

ಓಟ, ಲಾಂಗ್‌ಜಂಪ್, ಹೈಜಂಪ್ ಮೊದಲಾದ ಪಂದ್ಯಾಟಗಳನ್ನು ಏರ್ಪಡಿಸಲಾಗಿತ್ತು.

ಸೀನಿಯರ್ ವಿಭಾಗದಲ್ಲಿ ಬಿ. ಎಸ್. ಅಬ್ದುರ್ರಹೀಂ, ಜೂನಿಯರ್ ವಿಭಾಗದಲ್ಲಿ ಲುಕ್‌ಮಾನ್ ಅಹ್ಮದ್ ಮತ್ತು ಸಬ್‌ಜೂನಿಯರ್ ವಿಭಾಗದಲ್ಲಿ ಅನ್ವರ್ ಅಹ್ಮದ್ ಚಾಂಪಿಯನ್‌ಶಿಪ್ ಗಳಿಸಿದರು.

# ಹಝ್ರತ್ ಅಮತುಲ್ ಹಫೀಝ್ ಬೇಗಂ ಸಾಹಿಬ (ರ)

ಅಹ್ಮದಿಯಾ ಜಮಾಅತಿನ ಸ್ಥಾಪಕರ ಕಿರಿಯ ಪುತ್ರಿ ಹಾಗೂ ಅಹ್ಮದಿಯಾ ಜಮಾಅತಿನ ಈಗಿನ ಖಲೀಫರ ಪಿತೃ ಸಹೋದರಿಯಾದ ಹಝ್ರತ್ ಸಯ್ಯಿದ ನವಾಬ್ ಅಮತುಲ್ ಹಫೀಝ್ ಬೇಗಂ ಸಾಹಿಬ(ರ) 1987 ಮೇ 6ರಂದು ರಬ್ವಾದಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್)

ಹಝ್ರತ್ ಅಹ್ಮದ್ (ಅ)ರವರ ಮಕ್ಕಳ ಪೈಕಿ ಕೊನೆಯದಾಗಿ ಇಹಲೋಕವನ್ನು ತ್ಯಜಿಸಿದವರು ಅವರೇ ಆಗಿದ್ದಾರೆ. ಅವರಿಗೆ 83 ವರ್ಷ ವಯಸ್ಸಾಗಿತ್ತು. ಅಹ್ಮದಿಯಾ ಚರಿತ್ರೆಯಲ್ಲಿ ಆದರಣೀಯ ಸ್ಥಾನಮಾನಗಳು ಅವರಿಗಿವೆ. ಅವರ ಜನನಕ್ಕೆ ಮುಂಚೆಯೇ ಅವರ ಕುರಿತು ಹಝ್ರತ್ ಅಹ್ಮದ್‌ರವರಿಗೆ "ಆದರಣೀಯ ಪುತ್ರಿ" ಎಂದು ದೈವಿಕ ಶುಭವಾರ್ತೆ ಲಭಿಸಿತ್ತು. 1904 ಜೂನ್ 25ರಂದು ಅವರು ಜನಿಸಿದರು. 1917 ಫೆಬ್ರವರಿ 22ರಂದು ಹಝ್ರತ್ ನವಾಬ್ ಮುಹಮ್ಮದ್ ಅಬ್ದುಲ್ಲಾ ಖಾನ್ ಸಾಹೇಬ್ (ರ) ಅವರು 15,000 ರೂಪಾಯಿ ಮಹರ್ (ಕನ್ಯಾಶುಲ್ಕ) ನೀಡುವ ಕರಾರಿನಲ್ಲಿ ವಿವಾಹವಾದರು. ಅವರ ಪತಿ ಓರ್ವ ಪ್ರಭುಕುಮಾರನಾದರೂ ನಿರಾಡಂಭರ ಜೀವನವನ್ನು ಅವರು ನಡೆಸಿದ್ದರು. ಅವರು ಜಮಾಅತಿನ ನಾಝಿರ್ ಅಅ್‌ಲಾ ಎಂಬ ಉನ್ನತ ಸ್ಥಾನವನ್ನು ಅಲಂಕರಿಸಿದ್ದರು.

ಸಯ್ಯಿದ ಅಮತುಲ್ ಹಫೀಝ್ ಸಾಹಿಬ ಜಮಾಅತಿನ ಮಹಿಳೆಯರ ಪೈಕಿ ತ್ಯಾಗರಂಗದಲ್ಲಿ ಸದಾ ಮುಂಚೂಣಿಯಲ್ಲಿ ಶೋಭಿಸುತ್ತಿದ್ದರು. 1922ರಲ್ಲಿ ಅಹ್ಮದಿಯಾ ದ್ವಿತೀಯ ಖಲೀಫರು ಜಮಾಅತಿಗಾಗಿ ಸೊತ್ತುಗಳನ್ನು ದಾನ ಮಾಡಬೇಕೆಂದು ಕರೆಯಿತ್ತಾಗ ಅವರು 22 ಘುಮಾಉ ಭೂಮಿ (ಒಂದು ಘುಮಾಉ ಎಂದರೆ ಒಂದು ಜೋಡಿ ಎತ್ತುಗಳು ಒಂದು ದಿನದಲ್ಲಿ ಉಳಲು ಸಾಧ್ಯವಾಗುವಷ್ಟು ಸ್ಥಳ) ಜಮಾಅತಿಗೆ ದಾನವಾಗಿತ್ತರು. ಸ್ವಿಟ್ಝರ್‌ಲೇಂಡಿನ ಝೂರಿಕ್ ಮಸೀದಿಗೆ ಅವರು ಶಿಲಾನ್ಯಾಸ ಮಾಡಿದ್ದರು. ಅಹ್ಮದಿಯಾ ಜಮಾಅತಿನ ನಾಲ್ವರು ಖಲೀಫರ ಬೈಅತ್ ಮಾಡಲು ಅವರಿಗೆ ಸಂದರ್ಭ ಲಭಿಸಿತ್ತು. ದೀರ್ಘಕಾಲದ ಪ್ರವರ್ತನ ನಿರತವಾದ ಅವರ ಜೀವಿತ ಜಮಾಅತಿಗೆ ಅನುಗ್ರಹವೂ ಅಭಿಮಾನವೂ ಸೌಭಾಗ್ಯವೂ ಆಗಿತ್ತು.

ಅಲ್ಲಾಹನು ಆ ನಾರೀಮಣಿಗೆ ಮಗ್‌ಫಿರತ್ ಮತ್ತು ಸ್ವರ್ಗದಲ್ಲಿ ಮಹೋನ್ನತ ಸ್ಥಾನವನ್ನು ನೀಡಲಿ. ಆಮೀನ್.

# ಜ| ಎ. ಮಮ್ಮು ಮಾಸ್ಟರ್ ಸಾಹೇಬ್

ಕುಂಬಳೆಯ ಜ| ಎ. ಮಮ್ಮು ಮಾಸ್ಟರ್ ಸಾಹೇಬ್ (ಮಹ್‌ಮೂದ್ ಹಸನ್) ಕಳೆದ ಫೆಬ್ರವರಿ 21ರಂದು ತನ್ನ 64ನೇ ವಯಸ್ಸಿನಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್)

ಕುಂಬಳೆಯಲ್ಲಿ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿದ ಪ್ರಥಮ ವ್ಯಕ್ತಿಯಾಗಿದ್ದರು ಮಮ್ಮು ಮಾಸ್ಟರ್ ಸಾಹೇಬರು. ಅವರು 1953ರಲ್ಲಿ ಅಹ್ಮದಿಯತ್ ಸ್ವೀಕರಿಸಿದರು. ಅಹ್ಮದಿ ಆದ ಕಾರಣದಿಂದ ಅವರು ಕಲಿಸುತ್ತಿದ್ದ ಶಾಲೆಗೆ ಊರಿನ ಅಹ್ಮದಿಯೇತರ ಮುಸ್ಲಿಮರು ಮಕ್ಕಳನ್ನು ಕಳುಹಿಸದೆ ಬಹಿಷ್ಕರಿಸಿದರು. ಆ ಕಾರಣದಿಂದ ಅವರಿಗೆ ತನ್ನ ಕೆಲಸ ನಷ್ಟವಾಯಿತು. ಅಹ್ಮದಿಯೇತರ ಮುಸ್ಲಿಮರು ಬೇರೆ ಶಾಲೆಯನ್ನು ಆರಂಭಿಸಲು ಪ್ರಯತ್ನಿಸಿದರು.

ಆದರೂ ನಿಯಮಾನುಸಾರ ಮಮ್ಮು ಮಾಸ್ಟರರಿಗೂ ಮೊದಲಿನ ಟೀಚರ್ ಮೇನೇಜರ್ ಮೂಸ ಮಾಸ್ಟರರಿಗೂ ಕೆಲಸ ಕೊಡಲು ಹೊಸ ಶಾಲೆಯ ಅಧಿಕಾರಿ ವರ್ಗ ಸಿದ್ಧವಿಲ್ಲದುದರಿಂದ ಹೊಸ ಶಾಲೆಗೆ ಅಂಗೀಕಾರ ಲಭಿಸಲಿಲ್ಲ. ಆರ್ಥಿಕ ನಷ್ಟವಲ್ಲದೆ, ಊರಿನ ಅಹ್ಮದಿಯೇತರ ಮುಸ್ಲಿಮರ ಅಪಹಾಸ್ಯಕ್ಕೂ ಕಲ್ಲೇಟಿಗೂ ಅವರು ಗುರಿಯಾಗ ಬೇಕಾಯಿತು. ಒಂದು ಸಂದರ್ಭದಲ್ಲಿ ಕಿಡಿಗೇಡಿಗಳು ಅವರಿಗೆ ಪೇಟೆಯಲ್ಲಿ ಚಪ್ಪಲಿ ಮತ್ತು ಒಣಮೀನಿನ ಮಾಲೆಯನ್ನು ಹಾಕಿದರು. ಆದರೆ ಇಂತಹ ಎಲ್ಲಾ ಕುಕೃತ್ಯಗಳನ್ನೂ ಮಮ್ಮು ಮಾಸ್ಟರರು ಸಹಿಸಿ ತನ್ನ ವಿಶ್ವಾಸ ದಾರ್ಢ್ಯತೆಯನ್ನು ತೋರಿಸಿದರು. ಕೆಲ ಕಾಲ ನಂತರ ಅವರ ಅಣ್ಣ ಮೂಸ ಮಾಸ್ಟರ್ ಹಾಗೂ ತಮ್ಮ ಕುಞ್ಞಿ ಅಹ್ಮದ್ ಅಹ್ಮದಿಗಳಾದರು. ಅಬ್ದುಲ್ ಕಾದರ್ ಬತ್ತೇರಿ, ನ್ಯಾಯವಾದಿ ಮುಹಮ್ಮದ್ ಬತ್ತೇರಿ ಮತ್ತು ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಅಬ್ದುಲ್ ಹಕೀಂ ಬತ್ತೇರಿ ಅವರ ಇತರ ಮೂವರು ತಮ್ಮಂದಿರು.

ಮರದ ವ್ಯಾಪಾರವನ್ನು ಆರಂಭಿಸಿದ ಅವರು ಆರ್ಥಿಕವಾಗಿ ಹಂತ ಹಂತವಾಗಿ ಮೇಲೇರಿದರು. ಸಮುದಾಯದ ಎಲ್ಲಾ ವರ್ಗದ ಜನರೊಡನೆ ಅವರಿಗೆ ಸಂಪರ್ಕವಿತ್ತು.

ದಿವಂಗತರು ಪತ್ನಿಯನ್ನೂ ಮೂವರು ಪುತ್ರರನ್ನೂ ಓರ್ವ ಪುತ್ರಿಯನ್ನೂ ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನು ನೀಡಲಿ. ಆಮೀನ್.


# ಕನ್ನಡ ಅಹ್ಮದಿಯಾ ಸಾಹಿತ್ಯಗಳು

| | ಬೆಲೆ |
|---|---|
| ಅಹ್ಮದೀ ಮುಸ್ಲಿಮರು ಮತ್ತು ಅಹ್ಮದಿಯೇತರ ಮುಸ್ಲಿಮರು – ಯಾರ ವಿಶ್ವಾಸಗಳು ಯಥಾರ್ಥ ಇಸ್ಲಾಮೀಕ? ... | ರೂ. 1–00 |
| ಪ್ರವಾದಿಗಳು ಮತ್ತು ಅವರ ಶತ್ರುಗಳು ... | 1–50 |
| ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ ... | 2–00 |
| ಯೇಸು ಕಾಶ್ಮೀರದಲ್ಲಿ ... | 0–50 |

(ಅಂಚೆ ವೆಚ್ಚ ಪ್ರತ್ಯೇಕ)

ದೊರೆಯುವ ಸ್ಥಳ:

ಜೂಬಿಲಿ ಪ್ರಿಂಟಿಂಗ್ ಪ್ರೆಸ್
ಅನ್ಸಾರಿ ರಸ್ತೆ, ಮಂಗಳೂರು–575 001.

ಓದಿರಿ:

# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಅಹ್ಮದಿಯರ ಧಾರ್ಮಿಕ ವಿಶ್ವಾಸಾಚಾರಗಳ ಸಂಕ್ಷಿಪ್ತ ರೂಪ

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್**

ಪುಟ: 60 ಬೆಲೆ: 1–00 ಅಂಚೆ ವೆಚ್ಚ: ಉಚಿತ

ಬರೆಯಿರಿ: ಅಹ್ಮದಿಯಾ ಮುಸ್ಲಿಂ ಮಿಶನ್
10–23–1008 ಅನ್ಸಾರಿ ರೋಡ್,
ಬಂದರ್, ಮಂಗಳೂರು–575 001.


## AHMADIYYA ENGLISH LITERATURE

| | | |
|---|---|---|
| 1. | Introduction to the Study of the Holy Quran — By Hazrath Mirza Bashiruddin Mahmud Ahmad | 16-00 |
| 2. | The Philosophy of the Teachings of Islam — By Hazrath Mirza Ghulam Ahmad | 6-00 |
| 3. | Characteristics of the Quranic Teachings — By Hazrath Mirza Bashiruddin Mahmud Ahmad | 2-00 |
| 4. | The Holy Prophet Muhammad — By Hazrath Mirza Bashiruddin Mahmud Ahmad | 2-00 |
| 5. | Ahmadiyya Movement — By Hazrath Mirza Bashiruddin Mahmud Ahmad | 2-25 |
| 6. | What is Ahmadiyyat? — By Hazrat Mirza Bashiruddin Mahmud Ahmad | 1-50 |
| 7. | The Economic Structure of Islamic Society — By Hazrat Mirza Bashiruddin Mahmud Ahmad | 2-50 |
| 8. | The New World Order of Islam — By Hazrat Mirza Bashiruddin Mahmud Ahmad | 2-25 |
| 9. | Truth About Khatme Nabuwath — By Hazrath Mirza Bashir Ahmad, M. A. | 2-50 |
| 10. | Islam and Slavery — By Hazrat Mirza Bashir Ahmad, M. A. | 1-25 |
| 11. | Forty Gems of Beauty — By Hazrat Mirza Bashir Ahmad, M. A. | 2-50 |
| 12. | Our Teachings — By Hazrat Mirza Ghulam Ahmad | 1-00 |
| 13. | An Interpretation of Islam — By Laura Veccia Vaglieri | 3-00 |
| 14. | Muhammad the Most Successful Prophet — By Moulana Sharif Ahmad Amini | 1-00 |
| 15. | The Goal of Man and the Way to Reach it — By Muhammad Karimullah Naujawan & Dr. Hafiz Saleh Muhammad Allahdin, Ph. D. | 0-50 |
| 16. | Jesus in India — By Hazrath Mirza Ghulam Ahmad | 2-25 |
| 17. | A Review of Christianity — By Hazrat Mirza Ghulam Ahmad | 1-00 |
| 18. | Four Questions by a Christian and their Answers — By Hazrat Mirza Ghulam Ahmad | 1-25 |
| 19. | How to get rid of the Bondage of Sin — By Hazrat Mirza Ghulam Ahmad | 1-25 |
| 20. | Where Did Jesus Die? — By J. D. Shams | 5-00 |
| 21. | Did Jesus Redeem Mankind? — By Mirza B. M. Ahmad | 2-50 |
| 22. | The Tomb of Jesus — By Sufi Mutiur Rahman Bengalee, M.A. | 1-00 |
| 23. | The Christian Doctrine of Atonement — By Dr. M. M. Sadiq, D. D., L. L. D., S. S. P. (London) | 1-00 |
| 24. | Why did early Christians accept Islam? — By J. D. Shams | 1-00 |
| 25. | Latest Findings about Jesus Christ | 0-50 |

Write to : **Secretary for Mission Work**

Sadr Anjuman Ahmadiyya, Qadian-143516 (Punjab)

Regd. with the Registrar of Newspapers for India Regd. No. R. N. 27354/75
**YUGARASHMI Kannada Quarterly, July 1987 / Wafa 1366**




English Translation of the
HOLY QURAN
with Arabic Text &
Extensive Index

**Price : Rs. 20-00**
**Postage Extra**

Write to:
**NAZIR DAWAT-O-TABLIGH**
Sadr Anjuman Ahmadiyya
Qadian - 143 516 (Punjab)

ಸ್ಟ್ಯಾಂಡರ್ಡ್ ಟೈಲರಿ

ಕಡೂರು, ಚಿಕ್ಕಮಗಳೂರು ಜಿಲ್ಲೆ

ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು, ಮೆತ್ತಡ ಹಂಚು, ಅಲಂಕಾರಿಕ ಹಂಚು, ಮೊದಲಾದ ಎಲ್ಲಾ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

STANDARD TILERY
KADUR
CHICKMAGALUR DIST.

Edited and Published by Muhammad Yusuf on behalf of Jamath Ahmadiyya at 10-23-1008, Ansari Road, Bunder, Mangalore-575 001. Phone: 32039
Printed at Jubilee Printing Press, Ansari Road, Bunder, Mangalore-575 001.